ಸಂಪುಟ: 06 ಸಂಚಿಕೆ: 64 ಪುಟಗಳು: 08 ಸೋಮವಾರ 18 ಮೇ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**
ದಿನಕ್ಕೆ ಒಮ್ಮೆಯಾದರೂ ನಿಮ್ಮೊಂದಿಗೆ ಮಾತನಾಡಿ. ಇಲ್ಲದಿದ್ದರೆ, ನೀವು ವಿಶ್ವದ ಅತ್ಯಂತ ಬುದ್ಧಿವಂತ ವ್ಯಕ್ತಿಯೊಂದಿಗೆ ಸಂವಹನ ಮಾಡುವುದನ್ನು ಬಿಟ್ಟುಬಿಡುತ್ತೀರಿ.


# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ಲಕ್ಕುಂಡಿ: ವಾರದಲ್ಲಿ 1,500 ಪ್ರಾಚ್ಯಾವಶೇಷ ಸಂಗ್ರಹ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಇತಿಹಾಸದಲ್ಲಿ ಮಹತ್ವದ ಸ್ಥಾನವಿರುವ ಲಕ್ಕುಂಡಿಯನ್ನು ಜಾಗತಿಕ ಪಾರಂಪರಿಕ ತಾಣವನ್ನಾಗಿಸಲು ಸರ್ಕಾರ ನಿರ್ಧರಿಸಿದೆ. ಇದರ ಭಾಗವಾಗಿ ಮೇ ತಿಂಗಳ ಮೊದಲ ವಾರವೊಂದರಲ್ಲಿ ನಡೆಸಿದ ಅಭಿಯಾನದಲ್ಲಿ 1,500ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಗಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು. ಕಲ್ಯಾಣ ಚಾಲುಕ್ಯರು, ಬಾದಾಮಿ ಚಾಲುಕ್ಯರು ಮತ್ತು ಹೊಯ್ಸಳರ ಆಳ್ವಿಕೆಯ ಅವಧಿಯ ವಾಸ್ತುಶಿಲ್ಪ ಶೈಲಿಯ ಕುರುಹುಗಳು ಲಕ್ಕುಂಡಿಯಲ್ಲಿ ಯಥೇಚ್ಛವಾಗಿ ಸಿಕ್ಕಿವೆ. ಮೂರೂ ವಾಸ್ತುಶಿಲ್ಪ ಶೈಲಿಗಳ ಮಧ್ಯೆ ಇರುವ ಸಾಮ್ಯತೆ, ವ್ಯತ್ಯಾಸ ಮತ್ತು ಶೈಲಿ ಬದಲಾದ ಬಗೆಯನ್ನು ಇಲ್ಲಿನ ಪ್ರಾಚ್ಯಾವಶೇಷಗಳಲ್ಲಿ ಕಾಣಬಹುದಾಗಿದೆ ಎಂದರು. 2024ರ ನವೆಂಬರ್‌ನಲ್ಲಿ ಲಕ್ಕುಂಡಿಯಲ್ಲಿ ಪಲ್ಲಕ್ಕಿ ಉತ್ಸವ ನಡೆಸಲಾಗಿತ್ತು. ನಂತರ ಅಭಿಯಾನ ನಡೆಸಿ, ಸಾರ್ವಜನಿಕರ ಬಳಿ ಇದ್ದ ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಯಿತು. ಒಂದು ವರ್ಷದ ಅವಧಿಯಲ್ಲಿ 3,000 ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಯಿತು.

## ಗೃಹ ಸಚಿವ ಪರಮೇಶ್ವರ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ ರಚನೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ಶಿಕ್ಷಣ ನೀತಿ ಆಯೋಗವು (ಎಸ್‌ಇಪಿ) ಸಲ್ಲಿಸಿರುವ ಅಂತಿಮ ವರದಿಯನ್ನು ಪರಾಮರ್ಶಿಸಿ, ಸೂಕ್ತ ಶಿಫಾರಸುಗಳನ್ನು ಮಾಡಲು ಗೃಹ ಸಚಿವ ಜಿ.ಪರಮೇಶ್ವರ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿಯನ್ನು ಸರ್ಕಾರ ರಚಿಸಿದೆ. ಕಾನೂನು ಸಚಿವ ಎಚ್.ಕೆ.ಪಾಟೀಲ, ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ, ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಈಚೆಗೆ ನಡೆದಿದ್ದ ಸಂಪುಟ ಸಭೆಯಲ್ಲಿ ವರದಿಯ ಕುರಿತು ವಿಸ್ತ್ರತವಾಗಿ ಚರ್ಚೆ ನಡೆಸಲಾಗಿತ್ತು. ವರದಿಯನ್ನು ಅಧ್ಯಯನ ಮಾಡಿ, ಶಿಫಾರಸುಗಳ ಅನುಷ್ಠಾನಕ್ಕೆ ವರದಿ ನೀಡಲು ಉಪ ಸಮಿತಿ ರಚಿಸಲು ನಿರ್ಧರಿಸಿ, ಸಮಿತಿಯ ರಚನೆ ಅಧಿಕಾರವನ್ನು ಮುಖ್ಯಮಂತ್ರಿಗೆ ನೀಡಲಾಗಿತ್ತು.

ಬಿಜೆಪಿ ಆಡಳಿತದ ಅವಧಿಯಲ್ಲಿ ತರಾತುರಿಯಲ್ಲಿ ಸಿದ್ಧಪಡಿಸಿದ್ದ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ರದ್ದು ಮಾಡುವುದಾಗಿ ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ಘೋಷಿಸಿತ್ತು. ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ರಾಷ್ಟ್ರೀಯ ಶಿಕ್ಷಣ ನೀತಿ ಬದಲು ರಾಜ್ಯ ಶಿಕ್ಷಣ ನೀತಿ ರೂಪಿಸಲು ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಲಾಗಿತ್ತು.

## ರಾಜ್ಯದಲ್ಲಿ ನಿತ್ಯ ಸಂಸ್ಕರಣೆ ಆಗದ 2,447 ಟನ್ ಕಸ

• ಉದಯವಾಹಿನಿ, ನವದೆಹಲಿ

ಕರ್ನಾಟಕದ ನಗರ ಪ್ರದೇಶಗಳಲ್ಲಿ ಪ್ರತಿದಿನ 13,273 ಟನ್ ಕಸ ಸಂಗ್ರಹವಾಗುತ್ತಿದ್ದು, 10,826 ಟನ್ ಕಸ ಮಾತ್ರ ಸಂಸ್ಕರಣೆಯಾಗುತ್ತಿದೆ. 2,447 ಟನ್ ಕಸ ಸಂಸ್ಕರಣೆಯಾಗದೆ ಕೊಳೆಯುತ್ತಿದೆ. ಕಸ ವಿಲೇವಾರಿ ಸಮಸ್ಯೆ ಬಗ್ಗೆ ವಿಚಾರಣೆ ನಡೆಸುತ್ತಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠಕ್ಕೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಇದೇ 15ರಂದು ಸಲ್ಲಿಸಿರುವ ವರದಿಯಲ್ಲಿ ಈ ಮಾಹಿತಿ ಇದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಒಂಬತ್ತು ಡಂಪಿಂಗ್ ಯಾರ್ಡ್‌ಗಳಲ್ಲಿ 97 ಲಕ್ಷ ಟನ್ ಹಳೆಯ ಕಸ ಇದೆ. ಈ ಪೈಕಿ, 14.84 ಲಕ್ಷ ಟನ್ ಹಳೆಯ ಕಸವನ್ನು ಜೈವಿಕ ಸಂಸ್ಕರಣೆ ವಿಧಾನದ ಮೂಲಕ ಸಂಸ್ಕರಿಸಲಾಗಿದೆ. 24.8 ಲಕ್ಷ ಟನ್ ಕಸ ವಿಲೇವಾರಿಗ ಟೆಂಡರ್ ಕರೆಯಲಾಗಿದೆ.

## ಪಿಂಚಣಿ ನೀಡಲೂ ಹಣವಿಲ್ಲ, ಸಮಾವೇಶ ಏಕೆ: ಅಶೋಕ ಪ್ರಶ್ನೆ

• ಉದಯವಾಹಿನಿ, ಬೆಂಗಳೂರು

ಅನಾಥರು, ವೃದ್ಧರು, ಲಿಂಗತ್ವ ಅಲ್ಪಸಂಖ್ಯಾತರು ಸೇರಿದಂತೆ ವಿವಿಧ ಶೋಷಿತ, ಅಸಹಾಯಕ ಜನರಿಗೆ ರಾಜ್ಯ ಸರ್ಕಾರ ನೀಡುವ ಪಿಂಚಣಿ ಸ್ಥಗಿತಗೊಂಡಿದೆ. ಖಜಾನೆ ಖಾಲಿಯಾಗಿದ್ದರೂ ರಾಜ್ಯ ಸರ್ಕಾರ ಸಾಧನಾ ಸಮಾವೇಶ ಮಾಡಲು ಹೊರಟಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ನೇತೃತ್ವದ ಸರ್ಕಾರ ತಾನು ಮಾಡಿದ ಪಾಪಗಳಿಗಾಗಿ ಸಮಾವೇಶ ನಡೆಸಿ, ಸಂಭ್ರಮಾಚರಣೆ ಮಾಡುತ್ತಿದೆ. ಗೃಹಲಕ್ಷ್ಮಿಯ ರೂ. 5,000 ಕೋಟಿ, ಅನ್ನಭಾಗ್ಯದ ರೂ.700 ಕೋಟಿ ಇನ್ನೂ ಫಲಾನುಭವಿಗಳಿಗೆ ಸಿಕ್ಕಿಲ್ಲ. ಅನಾಥ ಮಕ್ಕಳ ರೂ.73 ಕೋಟಿ ಅನುದಾನ ಬಿಡುಗಡೆಯಾಗಿಲ್ಲ.

ಪರಿಶಿಷ್ಟ ಜಾತಿಗಳ ರೂ.45,000 ಕೋಟಿ ಲೂಟಿಯಾಗಿದೆ. ಸಮೀಕ್ಷೆ ಹೆಸರಲ್ಲಿ ರೈತರಿಗೆ ಪರಿಹಾರ ಕೊಟ್ಟಿಲ್ಲ. 12 ಬಗೆಯ ಪಿಂಚಣಿಗಳನ್ನು 3 ತಿಂಗಳಿನಿಂದ ಕೊಟ್ಟಿಲ್ಲ. ರೂ.81.88 ಲಕ್ಷ ಫಲಾನುಭವಿಗಳಿದ್ದು, ತಿಂಗಳಿಗೆ ರೂ.894 ಕೋಟಿ ನೀಡಬೇಕಿದೆ' ಎಂದರು.

**ಎಸ್‌ಐಆರ್‌ಗೆ ಏಕೆ ವಿರೋಧ:** ರಾಜ್ಯದಲ್ಲಿ 10 ಲಕ್ಷಕ್ಕೂ ಅಧಿಕ ಬಾಂಗ್ಲಾ ಪ್ರಜೆಗಳಿದ್ದಾರೆ. ಪೊಲೀಸ್ ಆಯುಕ್ತರು ರೂ.65 ಲಕ್ಷ ಖರ್ಚು ಮಾಡಿ ಬಾಂಗ್ಲಾದ 250 ಪ್ರಜೆಗಳನ್ನು ವಿಮಾನದಲ್ಲಿ ಗಡಿವರೆಗೆ ಬಿಟ್ಟು ಬಂದಿದ್ದಾರೆ. ಮಹದೇವಪುರ, ಚಿಕ್ಕಮಗಳೂರು, ಕೊಡಗು ಕಾಫಿ ಎಸ್ಟೇಟ್‌ಗಳಲ್ಲಿ ಸಾವಿರಾರು ಬಾಂಗ್ಲಾದೇಶೀಯರಿದ್ದಾರೆ. ಇದಕ್ಕೆ ಎಸ್‌ಐಆರ್ ಅಂತ್ಯವಾಡಲಿದೆ.

**ಮೈಸೂರಿನ ಚಾಮುಂಡೇಶ್ವರಿಯಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ, 2028ರ ಚುನಾವಣೆಯಲ್ಲಿ ಜೆಡಿಎಸ್ 75 ಸ್ಥಾನ ಗೆದ್ದು ಸರ್ಕಾರ ರಚಿಸಲಿದೆ ಎಂದರು. ಚಾಮುಂಡೇಶ್ವರಿ ಕ್ಷೇತ್ರ ಪಕ್ಷದ ಭದ್ರಕೋಟೆಯಾಗಿದ್ದು, ಕುರುಬರು, ದಲಿತರು ಹಾಗೂ ಅಲ್ಪಸಂಖ್ಯಾತರ ಬೆಂಬಲ ನಮಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.**

# ಜೆಡಿಎಸ್ ಸಮಾವೇಶ ಎಚ್‌ಡಿಕೆ ರೋಷಾವೇಶ



**ಜೆಡಿಎಸ್ ಪಕ್ಷ 75 ಕ್ಷೇತ್ರಗಳಲ್ಲಿ ಜಯಗಳಿಸುತ್ತದೆ; ನಮ್ಮ ಸರ್ಕಾರ ಅಧಿಕಾರಕ್ಕೆ ಬರುತ್ತದೆ**

### ಕರ್ನಾಟಕದಲ್ಲಿ 2 ವರ್ಷದ ಬಳಿಕ ನಮ್ಮದೇ ಸರ್ಕಾರ; ಇಷ್ಟೇ ಸ್ಥಾನ ಗೆಲ್ಲುತ್ತೇವೆ ಎಂದು ನಂಬರ್ ಹೇಳಿದ ಎಚ್‌ಡಿಕೆ.

• ಉದಯವಾಹಿನಿ, ಮೈಸೂರು

ಕರ್ನಾಟಕದಲ್ಲಿ 2 ವರ್ಷದ ಬಳಿಕ ನಮ್ಮದೇ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎಂದ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿಯವರು ಇಷ್ಟೇ ಸ್ಥಾನ ಗೆಲ್ಲುತ್ತೇವೆ ಎಂದು ನಂಬರ್ ಹೇಳಿದ್ದಾರೆ ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಭಾನುವಾರ ನಡೆದ ಜನರೊಂದಿಗೆ ಜನತಾದಳ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಮಾತನಾಡಿದರು. ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ 75 ಕ್ಷೇತ್ರಗಳಲ್ಲಿ ಜಯಗಳಿಸುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎಂದರು.

2028 ರ ಚುನಾವಣೆಯಲ್ಲೂ ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್ ಪಾಲಾಗಲಿದೆ. ನಮ್ಮಲ್ಲಿ ಯಾವುದೇ ಗೊಂದಲವಿಲ್ಲ. ಯಾವುದೇ ಒತ್ತಡಗಳಿಗೆ ಮಣಿಯುವುದಿಲ್ಲ. ಕಾರ್ಯಕರ್ತರ ಭಾವನೆಗಳಿಗೆ ಬೆಲೆಕೊಟ್ಟು ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್ ಭದ್ರಕೋಟೆ ಎಂದು ಮನವರಿಕೆ ಮಾಡಿಕೊಡಲು ಸಮಾವೇಶ ಮಾಡಿದ್ದೇವೆ ಎಂದು ನುಡಿದರು.

**ಚಾಮುಂಡೇಶ್ವರಿ ಕ್ಷೇತ್ರಕ್ಕೆ ಅತಿ ಹೆಚ್ಚು ಅನುದಾನ:**

ನಮ್ಮ ಪಕ್ಷಕ್ಕೆ ಲಕ್ಷಾಂತರ ಮಂದಿ ನಿಷ್ಠಾವಂತ ಕಾರ್ಯಕರ್ತರು ಬೆನ್ನೆಲುಬಾಗಿದ್ದಾರೆ. ಕಾರ್ಯಕರ್ತರ ಶ್ರಮದ ಫಲವಾಗಿ ಇಂದಿಗೂ ಜೆಡಿಎಸ್ ಉಳಿದಿದೆ. ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆ ಸನ್ನಿವೇಶ ಮೆಲುಕು ಹಾಕಿದ ಕುಮಾರಸ್ವಾಮಿ.

ಅಂದು ನಮ್ಮ ನಾಯಕರು ಎಚ್ಚರಿಕೆ ವಹಿಸಿದ್ದರೆ ಈ ರಾಜ್ಯಕ್ಕೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ನಮ್ಮದೇ ಆದ ಕೆಲ ತಪ್ಪಿನಿಂದಲೇ ಅಂದು ಜೆಡಿಎಸ್ ಸೋಲನುಭವಿಸಿತು. ಚಾಮುಂಡೇಶ್ವರಿ ಕ್ಷೇತ್ರಕ್ಕೂ ನನಗೂ ಅವಿನಾಭಾವ ಸಂಬಂಧವಿದೆ. ಈಗಿನ ಹಾಲಿ ಮುಖ್ಯಮಂತ್ರಿಗಿಂತ ನಾನು ಸಿಎಂ ಆಗಿದ್ದ ಅಲ್ಪಾವಧಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಅತಿ ಹೆಚ್ಚು ಅನುದಾನ ನೀಡಿದ್ದೇನೆ. ಯಾರನ್ನೋ ವಿರೋಧಿಸುವ ಸಲುವಾಗಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಮಾವೇಶ ಮಾಡಿಲ್ಲ ಎಂದರು.

**ಕುರುಬ ಸಮುದಾಯದ ಜೊತೆಗೆ ಜೆಡಿಎಸ್ ಕೂಡ ಇದೆ**

ರಾಜ್ಯ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಲು ಸಮಾವೇಶ ನಡೆದಿದೆ. ಪೇಟ ಕಟ್ಟಿಕೊಂಡು ಭಾಷಣ ಮಾಡುತ್ತಿರುವುದು ಹಾಲುಮತಸ್ಥರು, ಕುರುಬರಿಗೆ ಸಂದೇಶ ನೀಡುವ ಸಲುವಾಗಿ. ಕುರುಬ ಸಮುದಾಯದ ಜೊತೆಗೆ ಜೆಡಿಎಸ್ ಕೂಡ ಇದೆ ಎಂಬುದನ್ನು ಮನವರಿಕೆ ಮಾಡಿಕೊಡಲು ಪೇಟ ಕಟ್ಟಿಕೊಂಡು ಮಾತನಾಡಿದ್ದೇನೆ.

ಕುರುಬರು, ದಲಿತರು, ಅಲ್ಪಸಂಖ್ಯಾತರ ಪರವಾಗಿ ಜೆಡಿಎಸ್ ಕೆಲಸ ಮಾಡುತ್ತಿದೆ. ನಾನು ಪ್ರಚಾರಕ್ಕೋಸ್ಕರ ನೊಂದ ಜನರಿಗೆ ನೆರವು ನೀಡುತ್ತಿಲ್ಲ ಎಂದರು.

ಇದು ಇಂದು ನಿನ್ನೆಯ ಕಥೆಯಲ್ಲ. ಕಳೆದ ಏಳೆಂಟು ವರ್ಷಗಳಿಂದಲೂ ಈ ಗೊಂದಲ ಮುಂದುವರಿದಿದೆ. ಚುನಾವಣೆ ಕಾಲಕ್ಕೆ ಒಂದಾಗುವಂತೆ ನಟಿಸುವ ನಾಯಕರು ಮತ್ತೆ ಒಂದೇ ಪಕ್ಷದಲ್ಲಿದ್ದರೂ ವಿಪಕ್ಷಗಳ ನಾಯಕರಂತೆ ವರ್ತಿಸುತ್ತಾರೆ. ಅವರೇ ಪರಸ್ಪರ ಕೆಸರು ಎರಚುತ್ತಾರೆ. ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರೇ ತಮ್ಮ ಪಕ್ಷದ ಶಾಸಕರು ತಮ್ಮೊಂದಿಗಿಲ್ಲ ಎಂದು ಬಹಿರಂಗ ಹೇಳಿಕೆಕೊಡುತ್ತಾರೆ. ಮತ್ತೊಂದೆಡೆ ಜೆಡಿಎಸ್‌ನಿಂದ ಗೆದ್ದ ಜಿ.ಟಿ.ದೇವೇಗೌಡರು ತಮ್ಮ ಪಕ್ಷದ ಕಾರ್ಯಕ್ರಮಗಳಲ್ಲಿ ಭಾಗವಹಿಸದೆ ಅಂತರ ಕಾಯ್ದುಕೊಳ್ಳುತ್ತಾರೆ.

### ಟಿಕೆಟ್ ಪೈಪೋಟಿ

**ಜಿಟಿಡಿ ಅವರಿಗೆ ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಟಿಕೆಟ್ ನೀಡುವುದಿಲ್ಲ ಎಂದು ಕುಮಾರಸ್ವಾಮಿ ಹಾಗೂ ಸಾ.ರಾ. ಮಹೇಶ್ ಅವರು ಬಹಿರಂಗವಾಗಿ ಹೇಳಿದ ಹಿನ್ನೆಲೆಯಲ್ಲಿ ಈಗಾಗಲೇ ಮುಖಂಡರಲ್ಲಿ ಪೈಪೋಟಿ ಆರಂಭವಾಗಿದೆ. ಕೆಲವರು ಹರೀಶ್‌ಗೌಡರು ಬರಲಿ ಎಂದರೆ ಇನ್ನು ಕೆಲವರು ವಿರೋಧ ವ್ಯಕ್ತಪಡಿಸಿದ್ದಾರೆ. ಜಿಟಿಡಿ ಕುಟುಂಬವನ್ನು ಹೊರತುಪಡಿಸಿ ಹಲವು ನಾಯಕರಿದ್ದಾರೆ. ಇಲ್ಲವೇ ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ಕೊಡಿ ಎಂದು ಸಮಾವೇಶ ಪೂರ್ವಭಾವಿ ಸಭೆಯಲ್ಲಿ ಕೆಲವರು ಬಹಿರಂಗವಾಗಿ ಮಾತನಾಡಿದ್ದಾರೆ.**

### ರಾಜ್ಯ ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳಲಿ

ಗ್ಯಾರಂಟಿ ಯೋಜನೆಯಿಂದ ಜನರು ನೆಮ್ಮದಿಯಿಂದ ಇದ್ದಾರೆಂದು ಕಾಂಗ್ರೆಸ್ ನಾಯಕರು ಭಾವಿಸಿದ್ದಾರೆ. ಕಾಂಗ್ರೆಸ್ ನಾಯಕರು ಪ್ರತಿದಿನ ನನ್ನ ಮನೆಯ ಬಳಿ ಬಂದು ನೋಡಿದರೆ ಜನರ ಸ್ಥಿತಿ ಏನಾಗಿದೆ ಎಂದು ಮನವರಿಕೆ ಆಗಲಿದೆ. ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಬಗ್ಗೆ ಮಾತನಾಡುತ್ತಿರುವ ಕಾಂಗ್ರೆಸ್ ನಾಯಕರು ರಾಜ್ಯದ ಅಭಿವೃದ್ಧಿಗೆ ಏನು ಮಾಡಿದ್ದಾರೆ ಎಂದು ಆತ್ಮಾವಲೋಕನ ಮಾಡಿಕೊಳ್ಳಲಿ. ಬರುವ 19ರಂದು ಸಾಧನಾ ಸಮಾವೇಶ ಮಾಡಲು ಹೊರಟಿರುವ ಕಾಂಗ್ರೆಸ್ ನಾಯಕರ ವಿರುದ್ಧ ಹರಿಹಾಯ್ದರು.





### ಶಾಸಕರನ್ನೇ ಧಿಕ್ಕರಿಸಿ ಅದೇ ಪಕ್ಷದ ಸಮಾವೇಶ

**ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಶಾಸಕರನ್ನೇ ಧಿಕ್ಕರಿಸಿ ಅದೇ ಪಕ್ಷದ ಸಮಾವೇಶ ನಡೆಯುತ್ತಿರುವುದು ವಿಶೇಷ. ಒಂದೆಡೆ ತಾವು ಜೆಡಿಎಸ್‌ನಲ್ಲಿಯೇ ಇದ್ದೇನೆ ಎಂದು ಜಿ.ಟಿ.ದೇವೇಗೌಡ ಹೇಳುತ್ತಿದ್ದರೂ, ಜಿಲ್ಲೆಯಲ್ಲಿ ಸಾ.ರಾ.ಮಹೇಶ್ ಬಣ 'ಅವರು ನಮ್ಮೊಂದಿಗಿಲ್ಲ' ಎಂದು ಹೇಳುತ್ತಲೇ ಬರುತ್ತಿದ್ದಾರೆ. ಕುಮಾರಸ್ವಾಮಿ ಕೂಡ ಇದಕ್ಕೆ ಧ್ವನಿಗೂಡಿಸಿದ್ದರೂ, ದೊಡ್ಡಗೌಡರು ಜಿಟಿಡಿ ಬಗ್ಗೆ ಸಾಫ್ಟ್ ಆಗಿದ್ದಾರೆ. ಇದರ ನಡುವೆ ಯಾರ ಪರ ಹೋಗಬೇಕು ಎನ್ನುವುದನ್ನು ತಿಳಿಯದೆ ಪಕ್ಷದೊಳಗಿನ ಮೇಲಾಟದಿಂದ ಕಾರ್ಯಕರ್ತರು ಕಂಗಾಲಾಗಿದ್ದಾರೆ.**

### ಮತ್ತೆ ಒಂದಾಗುತ್ತಾರೆ

**ಇದೇ ಸ್ಥಿತಿ ಕಳೆದ ವಿಧಾನ ಸಭಾ ಚುನಾವಣೆಯಲ್ಲಿಯೂ ಇತ್ತು. ಜಿ.ಟಿ.ದೇವೇಗೌಡರು ಕಾಂಗ್ರೆಸ್‌ನಿಂದ ಸ್ಪರ್ಧಿಸುತ್ತಾರೆ ಎಂದೇ ಹೇಳಲಾಗಿತ್ತು. ಆದರೆ, ಕೊನೆಗಳಿಗೆಯಲ್ಲಿ ಜೆಡಿಎಸ್‌ನಲ್ಲಿ ರಾಜಿಯಾಯಿತು. ಎಲ್ಲರೂ ಒಂದಾದರು. ಜಿಟಿಡಿ ಗೆದ್ದರು. ಮುಂದಿನ ಚುನಾವಣೆಯಲ್ಲಿಯೂ ಇದೇ ಸ್ಥಿತಿ ಎಂದು ಹೇಳುತ್ತಾರೆ ಕಾರ್ಯಕರ್ತರು. ಬಹಿರಂಗವಾಗಿ ಕಚ್ಚಾಡಿ ಚುನಾವಣೆ ವೇಳೆಗೆ 'ಅನಿವಾರ್ಯ' ಎಂದು ಒಂದಾಗುತ್ತಾರೆ ಎನ್ನುತ್ತಾರೆ.**

### ಹರೀಶ್ ಗೌಡರು ಬರುತ್ತಾರಂತೆ!

**ಈ ಮಧ್ಯ ಸುದ್ದಿಯೊಂದು ಬಲವಾಗಿ ಹರಿದಾಡುತ್ತಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮುಂದಿನ ಬಾರಿ ಜಿಟಿಡಿ ಸ್ಪರ್ಧೆ ಮಾಡುವುದಿಲ್ಲ. ಅವರಿಗೆ ಕುಮಾರಸ್ವಾಮಿ ಟಿಕೆಟ್ ಕೊಡುವುದಿಲ್ಲ. ಈ ಹಿನ್ನೆಲೆಯಲ್ಲಿ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್ ಗೌಡ ಚಾಮುಂಡೇಶ್ವರಿಯಿಂದ ನಿಲ್ಲುತ್ತಾರೆ ಎನ್ನಲಾಗುತ್ತಿದೆ. ಇದರಿಂದ ಚಾಮುಂಡೇಶ್ವರಿಯನ್ನು ಜಿಟಿಡಿ ಕುಟುಂಬ ಉಳಿಸಿಕೊಂಡಂತೆಯೂ ಆಗುತ್ತದೆ, ಮುಜುಗರವೂ ತಪ್ಪುತ್ತದೆ ಎನ್ನುವ ಲೆಕ್ಕಾಚಾರ ನಡೆಯುತ್ತಿದೆ. ಹರೀಶ್‌ಗೌಡರು ತಮ್ಮ ಆಪ್ತರು ಯಾರನ್ನಾದರು ಹುಣಸೂರಿನಿಂದ ನಿಲ್ಲಿಸುತ್ತಾರೆ. ಚಾಮುಂಡೇಶ್ವರಿ ಹಾಗೂ ಹುಣಸೂರು ಕ್ಷೇತ್ರಗಳ ಉಸ್ತುವಾರಿ ತಮಗೆ ಬಿಡಿ ಎಂದು ಹೇಳಿದ್ದಾರೆ ಎನ್ನಲಾಗುತ್ತಿದೆ.**

## ಕರ್ನಾಟಕ ಯುವ ಕಾಂಗ್ರೆಸ್‌ನಲ್ಲಿ ಭಾರೀ ಬದಲಾವಣೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ (ಕೆಪಿವೈಸಿಸಿ) ಸಮಿತಿಯಲ್ಲಿ ಸಂಘಟನಾತ್ಮಕ ಶಿಸ್ತು ಕಾಪಾಡುವ ನಿಟ್ಟಿನಲ್ಲಿ ಭಾರತೀಯ ಯುವ ಕಾಂಗ್ರೆಸ್ ಮಹತ್ವದ ನಿರ್ಧಾರ ಕೈಗೊಂಡಿದೆ. ಸಂಘಟನೆಯಲ್ಲಿ ನಿಷ್ಕ್ರಿಯತೆ ಮತ್ತು ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ರಾಜ್ಯ ಘಟಕದ ಒಟ್ಟು 15 ಪದಾಧಿಕಾರಿಗಳನ್ನು ಅವರ ಸ್ಥಾನ ಮತ್ತು ಜವಾಬ್ದಾರಿಗಳಿಂದ ತಕ್ಷಣದಿಂದ ಜಾರಿಗೆ ಬರುವಂತೆ ತಾತ್ಕಾಲಿಕವಾಗಿ ಮುಕ್ತಗೊಳಿಸಲಾಗಿದೆ.

**ದೀಪಿಕಾ ರೆಡ್ಡಿ ಸೇರಿ 15 ಮಂದಿ ಪದಾಧಿಕಾರಿ ಹುದ್ದೆಯಿಂದ ಹೊರಕ್ಕೆ!**

ಯುವ ಕಾಂಗ್ರೆಸ್ ಪದಾಧಿಕಾರಿಗಳು ಸಂಘಟನೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು, ನಾಯಕತ್ವ ಗುಣ ಪ್ರದರ್ಶಿಸಬೇಕು ಮತ್ತು ಕಡ್ಡಾಯ ಸಭೆಗಳಿಗೆ ಹಾಜರಾಗಬೇಕು ಎಂಬ ನಿಯಮವಿದೆ. ಆದರೆ, ಈ 15 ಪದಾಧಿಕಾರಿಗಳು ಕಳೆದ ಕೆಲವು ಸಮಯದಿಂದ ಸಂಘಟನಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿಲ್ಲ ಮತ್ತು ತಮ್ಮ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿಭಾಯಿಸುತ್ತಿಲ್ಲ ಎಂಬುದು ಪರಿಶೀಲನೆಯಲ್ಲಿ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಸಂಘಟನೆಯ ಹಿತದೃಷ್ಟಿಯಿಂದ ಇವರನ್ನು ಹುದ್ದೆಯಿಂದ ಕೆಳಗಿಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.



### ಜವಾಬ್ದಾರಿಯಿಂದ ಮುಕ್ತಗೊಳಿಸಲಾದ ಪದಾಧಿಕಾರಿಗಳ ಪಟ್ಟಿ

• ದೀಪಿಕಾ ರೆಡ್ಡಿ, ರಾಜ್ಯ ಉಪಾಧ್ಯಕ್ಷರು • ರಾಜ್ಯ ಪ್ರಧಾನ ಕಾರ್ಯದರ್ಶಿಗಳು • ಸಿ.ಎಸ್. ಫ್ರಾನ್ಸಿಸ್ ಬೆನಿಟೊ, • ಬಿಂದು ಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿಗಳು • ಸುಮನ್ ಸೋಮಶೇಖರ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳು • ಅಫ್ನಾನಖಾನಂ, ರಾಜ್ಯ ಪ್ರಧಾನ ಕಾರ್ಯದರ್ಶಿಗಳು • ಲಕ್ಷ್ಮಿ ಕೆ, ರಾಜ್ಯ ಪ್ರಧಾನ ಕಾರ್ಯದರ್ಶಿಗಳು • ವಾಣಿ ಕಾಂಬ್ಳೆ, ರಾಜ್ಯ ಪ್ರಧಾನ ಕಾರ್ಯದರ್ಶಿಗಳು • ದಕ್ಷಿಣಮೂರ್ತಿ ಎಸ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳು ರಾಜ್ಯ ಕಾರ್ಯದರ್ಶಿಗಳು • ಅಬ್ದುಲ್ ರವೂಫ್ ಬಿ.ಎಂ. • ಸೈಯದ್ ಹುಸೇನ್ ಖಾದ್ರಿ • ಮೊಹಮ್ಮದ್ ಆಸಿಫ್ ಹುಸೇನ್ • ಎಸ್.ಆರ್.ಎಸ್ ಚಂದ್ ಬಾಷಾ • ಗೋವರ್ಧನ್ ಜಿ.ಸಿ. • ಪವನ್ ಸಾಲಿಯಾನ್ • ನವೀನ್ ಕುಮಾರ್ ಎಸ್.

ಭಾರತೀಯ ಯುವ ಕಾಂಗ್ರೆಸ್‌ನ ಪ್ರಮುಖ ನಾಯಕರಾದ ನಿಗಮ್ ಭಂಡಾರಿ, ಶ್ರೀನಿವಾಸ್ ರಾಥೋಡ್, ತಾರಿಖ್ ಬಾಗ್ವಾನ್ ಮತ್ತು ಮಂಜುನಾಥ್ ಎಚ್.ಎಸ್. ಅವರು ಈ ಜಂಟಿ ಆದೇಶಕ್ಕೆ ಸಹಿ ಹಾಕಿದ್ದಾರೆ.

ಮುಂದಿನ ಪರಾಮರ್ಶೆಯವರೆಗೆ ಈ ಪದಾಧಿಕಾರಿಗಳನ್ನು ಕರ್ತವ್ಯದಿಂದ ದೂರವಿಡಲಾಗಿದೆ ಎಂದು ಆದೇಶ ಪತ್ರದಲ್ಲಿ ಸ್ಪಷ್ಟಪಡಿಸಲಾಗಿದೆ.

ಈ ಬೆಳವಣಿಗೆಯು ರಾಜ್ಯ ಯುವ ಕಾಂಗ್ರೆಸ್ ಘಟಕದಲ್ಲಿ ಸಂಚಲನ ಮೂಡಿಸಿದ್ದು, ನಿಷ್ಕ್ರಿಯವಾಗಿರುವ ಇತರ ಪದಾಧಿಕಾರಿಗಳಿಗೂ ಇದೊಂದು ಎಚ್ಚರಿಕೆಯ ಸಂದೇಶವೆಂದು ಹೇಳಲಾಗುತ್ತಿದೆ.

## ಆನ್‌ಲೈನ್‌ನಲ್ಲಿ ಔಷಧಿಗಳ ಮಾರಾಟಕ್ಕೆ ಆಕ್ಷೇಪ: ಮೇ 20ಕ್ಕೆ ರಾಜ್ಯಾದ್ಯಂತ 'ಮೆಡಿಕಲ್ ಶಾಪ್‌ಗಳ ಬಂದ್'!

### ■ ಹಿರಿಯ ನಾಗರಿಕರು ಸೇರಿದಂತೆ ಜನಸಾಮಾನ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ


• ಉದಯವಾಹಿನಿ, ಬೆಂಗಳೂರು

ಆ್ಯಪ್‌ಗಳ ಮೂಲಕ ಆನ್‌ಲೈನ್‌ನಲ್ಲಿ ಔಷಧಿಗಳ ಮಾರಾಟವನ್ನು ವಿರೋಧಿಸಿ ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘದ ನೇತೃತ್ವದಲ್ಲಿ ಮೇ 20ರಂದು ಕರ್ನಾಟಕವು ಸೇರಿದಂತೆ ದೇಶಾದ್ಯಂತ ಔಷಧ ಮಾರಾಟ ಮಳಿಗೆಗಳ ಮಾಲಿಕರು ಬಂದ್ ಕರೆ ನೀಡಿದ್ದಾರೆ.

**ತೀವ್ರ ಸ್ವರೂಪದ ಆರ್ಥಿಕ ಹೊಡೆತ**

ರಾಜಧಾನಿ ಬೆಂಗಳೂರಿನಲ್ಲಿರುವ 6,500ಕ್ಕೂ ಅಧಿಕ ಮೆಡಿಕಲ್ ಶಾಪ್‌ಗಳು ಸೇರಿದಂತೆ ರಾಜ್ಯದಲ್ಲಿನ 25 ಸಾವಿರಕ್ಕೂ ಅಧಿಕ ಔಷಧಿ ಮಾರಾಟ ಮಳಿಗೆಗಳು ಬಹುತೇಕ ಬಂದ್ ಆಗುವ ಸಾಧ್ಯತೆಗಳಿದ್ದು, ಜೀವ ರಕ್ಷಕ ಔಷಧಗಳನ್ನೇ ಆಶ್ರಯಿಸಿರುವ ಹಿರಿಯ ನಾಗರಿಕರು ಸೇರಿದಂತೆ ಜನಸಾಮಾನ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿವೆ.

ಡೆಲವರಿ ಆ್ಯಪ್ ಆಧರಿತ ಆನ್‌ಲೈನ್ ಔಷಧಿ ಮಾರಾಟದಿಂದ ಸಣ್ಣ-ಮಧ್ಯಮ ಮಟ್ಟದ ಔಷಧ ಮಾರಾಟಗಾರರಿಗೆ ಮೇಲೆ ತೀವ್ರ ಸ್ವರೂಪದ ಆರ್ಥಿಕ ಹೊಡೆತ ಬೀಳುತ್ತದೆ ಎಂಬ ಆರೋಪ ಕೇಳಿಬಂದಿದೆ. ಕೋವಿಡ್ ಸಂದರ್ಭದಲ್ಲಿ ಜನ ಸಂಚಾರಕ್ಕೆ ನಿರ್ಬಂಧ ಹೇರಿ ಲಾಕ್‌ಡೌನ್ ಘೋಷಿಸಿದ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ತಾತ್ಕಾಲಿಕವಾಗಿ ಆನ್‌ಲೈನ್ ಔಷಧ ಮಾರಾಟಕ್ಕೆ ಅವಕಾಶ ಕಲ್ಪಿಸಿತ್ತು. ಆದರೆ, ಇದೀಗ ಕೋವಿಡ್ ಪರಿಸ್ಥಿತಿ ಸುಧಾರಣೆಯ ಬಳಿಕವು ಆ ಹಳೆಯ ವ್ಯವಸ್ಥೆ ಮುಂದುವರಿದಿದೆ.



> ಆನ್‌ಲೈನ್ ಔಷಧ ಮಾರಾಟವನ್ನು ವಿರೋಧಿಸಿ ಮೇ 20ರಂದು ರಾಷ್ಟ್ರವ್ಯಾಪಿ ಕರೆ ನೀಡಿರುವ ಬಂದ್‌ನಲ್ಲಿ 'ಕರ್ನಾಟಕ ಫಾರ್ಮ ರಿಟೈಲರ್ಸ್ ಆಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಷನ್ ಪಾಲ್ಗೊಳ್ಳುವುದಿಲ್ಲ. ಆದರೆ, ಕಪ್ಪುಪಟ್ಟಿ ಧರಿಸಿ ಬಂದ್‌ಗೆ ನೈತಿಕ ಬೆಂಬಲವನ್ನಷ್ಟೇ ನೀಡುತ್ತಿದ್ದೇವೆ. ರೋಗಿಗಳು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ನಮ್ಮ ಸಂಘಟನೆ ಈ ತೀರ್ಮಾನ ಕೈಗೊಂಡಿದೆ. ಔಷಧ ಕೇವಲ ವಸ್ತುವಲ್ಲ, ಜೀವದ ಜವಾಬ್ದಾರಿ
>
> -ಸಿ.ಜಯರಾಮ್ ಅಧ್ಯಕ್ಷ, ಕರ್ನಾಟಕ ಫಾರ್ಮ ರಿಟೈಲರ್ಸ್ ಆಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಷನ್

ಇದೀಗ ಕಾರ್ಪೋರೇಟ್ ಕಂಪೆನಿಗಳು ಆ್ಯಪ್ ಆಧರಿತ ಆನ್‌ಲೈನ್ ವೇದಿಕೆ ಮೂಲಕ ಗ್ರಾಹಕರಿಗೆ ಭಾರಿ ಮೊತ್ತದ ರಿಯಾಯಿತಿ ಹಾಗೂ ಹತ್ತೇ ನಿಮಿಷದ ಡೆಲಿವರಿ ಸೇವೆ ಸಹಿತ ಇನ್ನಿತರ ಸುಳ್ಳು ಭರವಸೆಗಳ ಮೂಲಕ ಸ್ಥಳೀಯ ಔಷಧ ವ್ಯಾಪಾರಿಗಳಿಗೆ ತೀವ್ರ ಪೈಪೋಟಿ ನೀಡುತ್ತಿವೆ. ಮಾತ್ರವಲ್ಲ, ಸಣ್ಣ-ಮಧ್ಯಮ ಮಟ್ಟದ ಔಷಧ ವ್ಯಾಪಾರಿಗಳ ಬದುಕನ್ನೇ ಕಸಿದುಕೊಳ್ಳಲಾಗುತ್ತಿದೆ ಎಂಬ ಆರೋಪ ವ್ಯಕ್ತವಾಗಿದೆ.

**ಬಂದ್ ತೀರ್ಮಾನ:** 'ಡೆಲವರಿ 'ಆಯಪ್ ಆಧರಿತ ಆನ್‌ಲೈನ್ ಕಂಪೆನಿಗಳ ಅನಿಯಂತ್ರಿತ ವ್ಯವಹಾರದಿಂದ ಸ್ಥಳೀಯ ಮೆಡಿಕಲ್ ಶಾಪ್‌ಗಳು ಸಂಕಷ್ಟಕ್ಕೆ ಸಿಲುಕಿದ್ದು ಆನ್‌ಲೈನ್ ಔಷಧಿಗಳ ಮಾರಾಟ ವಿರೋಧಿಸಿ ಮೇ 20ರಂದು ರಾಜ್ಯಾದ್ಯಂತ ಎಲ್ಲಾ ಮೆಡಿಕಲ್ ಶಾಪ್‌ಗಳನ್ನು ಬಂದ್ ಮಾಡುವ ಮೂಲಕ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ' ಎಂದು ಕರ್ನಾಟಕ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಅಸೋಸಿಯೇಷನ್ ತಿಳಿಸಿದೆ.

'ಔಷಧ ಕೇವಲ ಮಾರಾಟದ ಸರಕು(ವಸ್ತು) ಅಲ್ಲ ಜೀವ ರಕ್ಷಕವೂ ಆಗಿದೆ. ಹೀಗಾಗಿ ರೋಗಿಗಳಿಗೆ ಯಾವುದೇ ತೊಂದರೆ ಆಗಬಾರದೆಂಬ ಕಾರಣಕ್ಕೆ ಆಸ್ಪತ್ರೆಗಳ ಬಳಿಯ ಕೆಲವು ಮೆಡಿಕಲ್ ಶಾಪ್‌ಗಳಿಗೆ ಮಾತ್ರ ವಿನಾಯಿತಿ ನೀಡಿದ್ದು, ಉಳಿದಂತೆ ಬಹುತಕ ಮೆಡಿಕಲ್ ಶಾಪ್‌ಗಳನ್ನು ಒಂದು ದಿನದ ಮಟ್ಟಿಗೆ ಬಂದ್ ಮಾಡಲಾಗುವುದು ಎಂದು ಅಸೋಸಿಯೇಷನ್ ಹೇಳಿದೆ.

ಅನಧಿಕೃತವಾಗಿ ಕಾರ್ಪೋರೆಟ್ ಕಂಪೆನಿಗಳು ಡೆಲವರಿ ಆ್ಯಪ್ ಆಧರಿತ ಆನ್‌ಲೈನ್ ಔಷಧ ಮಾರಾಟ ಮಾಡುತ್ತಿವೆ. ಅಲ್ಲದೆ, ಕ್ವಿಕ್ ಕಾಮರ್ಸ್ ಔಷಧ ಡೆಲಿವರಿ ಆ್ಯಪ್‌ಗಳು ಡ್ರಗ್ಸ್ ಆಂಡ್ ಕಾಸ್ಮೆಟಿಕ್ಸ್ ಕಾಯ್ದೆ ಉಲ್ಲಂಘಿಸುತ್ತಿವೆ. ಅಲ್ಲದೆ, ಅಗ್ಗದ ಬೆಲೆ ಹಾಗೂ ಅಸಹಜ ರಿಯಾಯಿತಿ ನೆಪದಲ್ಲಿ ಸಣ್ಣ ಮತ್ತು ಮಧ್ಯಮ ಮಟ್ಟದ ವ್ಯಾಪಾರಿಗಳನ್ನು ಬೀದಿಗೆ ತಳ್ಳಲು ಮುಂದಾಗಿವೆ ಎಂದು ಆರೋಪ ಮಾಡಲಾಗಿದೆ.

**ಈ ದಿನದ ದರ** ಪೆಟ್ರೋಲ್: 106.21 ₹/L | ಡೀಸೆಲ್ : 94.10 ₹/L | ಬಂಗಾರ: ₹15,693/Gram24ct ₹14,385/Gram22ct | ಬೆಳ್ಳಿ: ₹280.00/Gram

# ಬೈಪಾಸ್ ಅವೈಜ್ಞಾನಿಕ: ಸಿಎಂ ಭೇಟಿಗೆ ಆಗ್ರಹ

• ಉದಯವಾಹಿನಿ, ತುಮಕೂರು

ನಂದಿಹಳ್ಳಿ- ಮಲ್ಲಸಂದ್ರ ಬೈಪಾಸ್ ರಸ್ತೆ ನಿರ್ಮಾಣಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದು, ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆಗೆ ಚರ್ಚಿಸಲು ಅವಕಾಶ ನೀಡುವಂತೆ ನಂದಿಹಳ್ಳಿ- ಮಲ್ಲಸಂದ್ರ- ವಸಂತನರಸಾಪುರ ಬೈಪಾಸ್ ರಸ್ತೆ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ, ಸಂಯುಕ್ತ ಹೋರಾಟ- ಕರ್ನಾಟಕ ಸಂಘಟನೆ ಮನವಿ ಮಾಡಿದೆ.



ಮೊದಲ ಹಂತದಲ್ಲಿ 46 ಹಳ್ಳಿಗಳ 166 ಹೆಕ್ಟೇರ್ ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿದೆ. ರೈತರ ವಿರೋಧದ ಮಧ್ಯೆಯೂ ಜಿಲ್ಲಾ ಆಡಳಿತ ಹಟ ಮುಂದುವರಿಸಿದೆ. ಮೇ 19ರಂದು ಮುಖ್ಯಮಂತ್ರಿ ನಗರಕ್ಕೆ ಭೇಟಿ ನೀಡುತ್ತಿದ್ದು, ಈ ವೇಳೆ ಅವರಿಗೆ ಅಹವಾಲು ಸಲ್ಲಿಸಲು ಅವಕಾಶ ಕಲ್ಪಿಸಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಹೋರಾಟ ಸಮಿತಿಯ ಎ.ಗೋವಿಂದರಾಜು, ಸಿ.ಯತಿರಾಜು, ಕಂಬೇಗೌಡ, ಬಿ.ಉಮೇಶ್ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು. ರಸ್ತೆ ಕಾಮಗಾರಿ ಅವೈಜ್ಞಾನಿಕವಾಗಿದ್ದು, ಭೂಸ್ವಾಧೀನ ಕಾಯ್ದೆ ಗಾಳಿಗೆ ತೂರಿ ಭೂಮಿ ಕಬಳಿಕೆ ಮಾಡುತ್ತಿದೆ. ಶೇ 70ಕ್ಕಿಂತ ಹೆಚ್ಚು ಭೂಮಿಯಲ್ಲಿ ಕೃಷಿ ಕಾರ್ಯ ನಡೆಯುತ್ತಿದೆ. ನೂರಾರು ಮನೆ, ನಿವೇಶನ, ಕೋಳಿ ಫಾರಂ, ಇಟ್ಟಿಗೆ ಕಾರ್ಖಾನೆಗಳು ನೆಲಸಮವಾಗುತ್ತವೆ. ಫಲವತ್ತಾದ, ಕೃಷಿಗೆ ಯೋಗ್ಯವಾದ, ನೀರಾವರಿ ಸೌಲಭ್ಯ ಇರುವ ಜಮೀನು ವಶಕ್ಕೆ ಪಡೆಯಲಾಗುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು ಎಂದಿದ್ದರು. ಇದುವರೆಗೆ ರೈತರ ಜತೆಗೆ ಚರ್ಚಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಬಿ.ಉಮೇಶ್, ಈಗ ಗುರುತಿಸಿದ ಜಾಗದಿಂದ 150 ಮೀಟರ್ ದೂರದಲ್ಲಿ ಗುಬ್ಬಿ- ದಾಬಸ್‌ಪೇಟೆ ಮಾರ್ಗದಲ್ಲಿ ರಿಂಗ್ ರಸ್ತೆ ಅಭಿವೃದ್ಧಿಗೆ ಈ ಹಿಂದೆ ಯೋಜನೆ ರೂಪಿಸಲಾಗಿತ್ತು. ಇದೇ ಯೋಜನೆ ಈಗ ಅಭಿವೃದ್ಧಿ ಪಡಿಸಬೇಕು. ಇದರಿಂದ ರೈತರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಸರ್ಕಾರ ರಿಯಲ್ ಎಸ್ಟೇಟ್ ಪ್ರಭಾವಿಗಳ ಹುನ್ನಾರಕ್ಕೆ ಮಣಿಯಬಾರದು ಎಂದು ಆಗ್ರಹಿಸಿದರು.

# 17 ವರ್ಷದ ಮಗಳನ್ನೇ ಕೊಂದ ಪಾಪಿ ತಂದೆ

## ಹೆಂಡತಿಯ ಸಂಬಂಧಿಕರ ಜತೆ ಮದುವೆ ಮಾಡಲು ಇಷ್ಟವಿಲ್ಲ ಎಂಬುದು ಕಾರಣ

• ಉದಯವಾಹಿನಿ, ತುಮಕೂರು

ತುಮಕೂರು ಜಿಲ್ಲೆಯ ಶಿರಾದಲ್ಲಿ ತಲೆತಗ್ಗಿಸುವಂತಹ ಬೆಚ್ಚಿಬೀಳಿಸುವ ಘಟನೆಯೊಂದು ನಡೆದಿದ್ದು, ಕಳೆದ ಒಂದು ತಿಂಗಳಿನಿಂದ ನಾಪತ್ತೆಯಾಗಿದ್ದ ಅಪ್ರಾಪ್ತ ಬಾಲಕಿಯನ್ನು ಆಕೆಯ ಹೆತ್ತ ತಂದೆಯೇ ಬರ್ಬರವಾಗಿ ಕೊಲೆ ಮಾಡಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಮೃತ ದುರ್ದೈವಿ ಬಾಲಕಿಯನ್ನು ಶಿರಾ ತಾಲೂಕಿನ ನಿಂಬೆಮರದಹಳ್ಳಿ ಗ್ರಾಮದ ನಿವಾಸಿ 17 ವರ್ಷದ ಮೇಘನಾ ಎಂದು ಗುರುತಿಸಲಾಗಿದೆ. ಮಗಳ ಮದುವೆ ವಿಚಾರವಾಗಿ ಮನೆಯಲ್ಲಿ ನಡೆಯುತ್ತಿದ್ದ ಜಗಳವೇ ಈ ಭೀಕರ ಕೊಲೆಗೆ ಕಾರಣವೆಂದು ಪೊಲೀಸರು ತಿಳಿಸಿದ್ದು, ಆರೋಪಿ ತಂದೆ ತಿಮ್ಮರಾಯಪ್ಪನನ್ನು ವಶಕ್ಕೆ ಪಡೆಯಲಾಗಿದೆ.

**ಏನಿದು ಪ್ರಕರಣ?:** ಪೊಲೀಸ್ ಮೂಲಗಳ ಪ್ರಕಾರ, ಏಪ್ರಿಲ್ 16 ರಂದು ಮೇಘನಾ ನಾಪತ್ತೆಯಾಗಿದ್ದಳು. ಅಂದು ಸಂಜೆ 6:30ರ ಸುಮಾರಿಗೆ ತಾಯಿ ನಿರ್ಮಲಾ ಕೂಲಿ ಕೆಲಸದಿಂದ ಮನೆಗೆ ಹಿಂದಿರುಗಿದಾಗ ಮಗಳು ಮನೆಯಲ್ಲಿರಲಿಲ್ಲ. ಮಗಳ ಮೊಬೈಲ್ ಕರೆ ಮಾಡಿದಾಗ ಸ್ವಿಚ್ ಆಫ್ ಎಂದು ಬಂದಿದೆ. ಆತಂಕಗೊಂಡ ತಾಯಿ, ಈ ಬಗ್ಗೆ ಪೊಲೀಸ್ ಠಾಣೆಗೆ ತೆರಳಿ ಮಿಸ್ಸಿಂಗ್ ಕಂಪ್ಲೇಂಟ್ (ನಾಪತ್ತೆ ದೂರು) ನೀಡಿದ್ದರು.

**ಮದುವೆ ವಿಚಾರಕ್ಕೆ ನಡೆಯುತ್ತಿತ್ತು ನಿರಂತರ ಕಲಹ!** ಮೇಘನಾಳ ಮದುವೆ ವಿಚಾರವಾಗಿ ಕುಟುಂಬದಲ್ಲಿ ಆಗಾಗ ಜಗಳ ನಡೆಯುತ್ತಿತ್ತು. ಬಾಲಕಿಗೆ 18 ವರ್ಷ ತುಂಬಿದ ಕೂಡಲೇ ತಾಯಿಯ ಕಡೆಯ ಸಂಬಂಧಿಕರ ಹುಡುಗನಿಗೆ



■ ಮಗಳನ್ನು ಕೊಂದ ಪಾಪಿ ತಂದೆ - ತುಮಕೂರು ಜಿಲ್ಲೆಯ ಶಿರಾದಲ್ಲಿ ಬೆಚ್ಚಿಬೀಳಿಸುವ ಘಟನೆ.

■ ಕಳೆದ ಒಂದು ತಿಂಗಳಿನಿಂದ ನಾಪತ್ತೆಯಾಗಿದ್ದ ಅಪ್ರಾಪ್ತ ಬಾಲಕಿ; ತನಿಖೆಯಿಂದ ಸತ್ಯ ಬಯಲು.

■ ಮೃತ ದುರ್ದೈವಿ ಬಾಲಕಿಯನ್ನು ಶಿರಾ ತಾಲೂಕಿನ ನಿಂಬೆಮರದಹಳ್ಳಿ ಗ್ರಾಮದ ನಿವಾಸಿ 17 ವರ್ಷದ ಮೇಘನಾ.

ಕೊಟ್ಟು ಮದುವೆ ಮಾಡಲು ತಾಯಿ ನಿರ್ಮಲಾ ಹಾಗೂ ಆಕೆಯ ಕುಟುಂಬಸ್ಥರು ನಿರ್ಧರಿಸಿದ್ದರು. ಮದುವೆಗಾಗಿ ಸೀರೆ ಹಾಗೂ ಮಾಂಗಲ್ಯವನ್ನೂ ಸಹ ಈಗಾಗಲೇ ಖರೀದಿಸಲಾಗಿತ್ತು ಎನ್ನಲಾಗಿದೆ. ಆದರೆ, ತನ್ನ ಪತ್ನಿಯ ಕಡೆಯ ಸಂಬಂಧಿಕರಿಗೆ ಮಗಳನ್ನು ಕೊಟ್ಟು ಮದುವೆ ಮಾಡುವುದು ತಂದೆ ತಿಮ್ಮರಾಯಪ್ಪನಿಗೆ ಸುತಾರಾಂ ಇಷ್ಟವಿರಲಿಲ್ಲ. ಇದೇ ವಿಚಾರವಾಗಿ ಕಳೆದ 4-5 ತಿಂಗಳಿನಿಂದ ಮನೆಯಲ್ಲಿ ಗಲಾಟೆಗಳು ನಡೆಯುತ್ತಿದ್ದವು. ಇಂತಹದ್ದೇ ಒಂದು ಜಗಳ ನಡೆದ ಮರುದಿನವೇ ಮೇಘನಾ ನಾಪತ್ತೆಯಾಗಿದ್ದಳು. ಈ ಘಟನೆಯ ಬಳಿಕ ತಂದೆಯೂ ನಾಪತ್ತೆಯಾಗಿದ್ದು, ಪೊಲೀಸರ ಅನುಮಾನಕ್ಕೆ ಕಾರಣವಾಗಿತ್ತು.

**ದೂರು ನೀಡುವಾಗಲೂ ಜೊತೆಗಿದ್ದ ತಂದೆ:** ಮಗಳನ್ನೇ ಕೊಲೆ ಮಾಡಿದ ಬಳಿಕ ಈ ಪಾಪಿ ತಂದೆ, ತನ್ನ ಮೇಲಿನ ಅನುಮಾನವನ್ನು ತಪ್ಪಿಸಿಕೊಳ್ಳಲು ಪತ್ನಿಯೊಂದಿಗೆ ತಾನೇ ಖುದ್ದಾಗಿ ಪೊಲೀಸ್ ಠಾಣೆಗೆ ತೆರಳಿ 'ಮಗಳು ನಾಪತ್ತೆ ಆಗಿದ್ದಾಳೆ' ಎಂದು ದೂರು ದಾಖಲಿಸಲು ಸಹಾಯ ಮಾಡುವ ಮೂಲಕ ಹೈಡ್ರಾಮಾ ಮಾಡಿದ್ದನು. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆಯನ್ನು ಚುರುಕುಗೊಳಿಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

### ಬಾವಿಗೆ ತಳ್ಳಿ ಕೊಲೆ

ಬಂಧಿತ ಆರೋಪಿ ತಿಮ್ಮರಾಯಪ್ಪನನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಕೊಲೆ ರಹಸ್ಯ ಬಯಲಾಗಿದೆ. ಆತ ತನ್ನ ಮಗಳನ್ನು ಬಾವಿಗೆ ತಳ್ಳಿ, ಆಕೆಯ ಮೇಲೆ ಕಲ್ಲುಗಳನ್ನು ಎಸೆದು ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ಬಳಿಕ, ಬಾವಿಯಿಂದ ಶವವನ್ನು ಹೊರತೆಗೆದು ನಿರ್ಜನ ಪ್ರದೇಶದಲ್ಲಿ ಹೂತು ಹಾಕಿದ್ದಾನೆ ಎಂದು ಪೊಲೀಸರು ಶಂಕಿಸಿದ್ದಾರೆ.

## ಮಿನಿ ನ್ಯೂಸ್

### ರೈತ ಸಂಘ ಗ್ರಾಮ ಘಟಕ ಉದ್ಘಾಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಆಲತ್ತೂರು ಗ್ರಾಮದಲ್ಲಿ ರಾಜ್ಯ ರೈತ ಸಂಘ ಗ್ರಾಮ ಘಟಕವನ್ನ ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಉದ್ಘಾಟಿಸಿದರು. ಈ ಸಂಧರ್ಭದಲ್ಲಿ ವಿಭಾಗೀಯ ಕಾರ್ಯದರ್ಶಿ ಜ್ಯೋತಿಗೌಡನಪುರ ಸಿದ್ದರಾಜು, ಯುವಘಟಕ ರಾಜ್ಯ ಸಂಚಾಲಕ ಯಶವಂತ್, ಚಾಮರಾಜನಗರ ಜಿಲಾಧ್ಯಕ್ಷ ಶಿವಪುರ ಮಹದೇವಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಾಸ್ಕರ್, ತಾಲ್ಲೂಕು ಮಹಿಳಾ ಘಟಕ ಅಧ್ಯಕ್ಷೆ ಬಸಮ್ಮ, ಗೌರವಾಧ್ಯಕ್ಷ ರಾಜಶೇಖರ್, ನಾಗರಾಜಪ್ಪ, ಶಿವಕುಮಾರ್, ಮಹೇಶ್ ಗುರು, ಪ್ರವೀಣ್ ಆಲತ್ತೂರು, ಮಹದೇವ ಕುಮಾರ್, ಸೇರಿದಂತೆ ಹಲವರು ಭಾಗವಹಿಸಿದ್ದರು.

### ಅಪರಿಚಿತರ ಸುಲಿಗೆ: ಇಬ್ಬರ ಬಂಧನ

• ಉದಯವಾಹಿನಿ, ಚಿಂತಾಮಣಿ

ನಗರದ ಬಸ್ ನಿಲ್ದಾಣ, ಸಂತೆ ಮತ್ತಿತರ ಕಡೆಗಳಲ್ಲಿ ಅಪರಿಚಿತ ವ್ಯಕ್ತಿಗಳಿಗೆ ಚಾಕು, ಮಚ್ಚು ತೋರಿಸಿ ಹಣ, ಆಭರಣಗಳನ್ನು ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ನಗರದ ಕರಿಯಪಲ್ಲಿಯ ಬನ್ನಿ, ಜೆ.ಜೆ.ಕಾಲೋನಿಯ ವಿಶ್ವನಾಥ್ ಬಂಧಿತರು. ತಲೆಮರೆಸಿಕೊಂಡ ಇತರ ನಾಲ್ವರ ಆರೋಪಿಗಳ ಪತ್ತೆಗೆ ಬಲೆ ಬೀಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೇ 14ರಂದು ನಗರದ ಬೆಂಗಳೂರು ವೃತ್ತದಲ್ಲಿ ದಿಟ್ಟೂರಹಳ್ಳಿ ನಿವಾಸಿ ಹೇಮಂತಕುಮಾರ್ ಬಸ್ಸಿಗಾಗಿ ಕಾಯುತ್ತಿದ್ದಾಗ ಹಿಂಬಾಲಿಸಿಕೊಂಡು ಬಂದ ಆರೋಪಿಗಳು, ಚಾಕು ತೋರಿಸಿ ಹಣ ನೀಡದಿದ್ದರೆ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಅಲ್ಲದೆ, ಆರೋಪಿಗಳು ಹೇಮಂತ್ ಕುಮಾರ್ ಅವರಿಂದ 5 ಸಾವಿರ ಫೋನ್ ಪೇ ಮಾಡಿಸಿಕೊಂಡು ಪರಾರಿಯಾಗಿದ್ದರು. ಜೊತೆಗೆ ತಮ್ಮನ್ನು ಇಟ್ಟಿಗೆ ಕಾರ್ಖಾನೆಯೊಂದರ ಬಳಿ ಕರೆದೊಯ್ದು, ಹಣ, ಚಿನ್ನದ ಚೈನ್, ಉಂಗುರ ಕಿತ್ತುಕೊಂಡಿದ್ದಾರೆ.

ಈ ಕೃತ್ಯದಲ್ಲಿ ಒಟ್ಟಾರೆ 6 ಮಂದಿ ಪಾಲ್ಗೊಂಡಿದ್ದರು ಎಂದು ಆರೋಪಿಸಿ ಹೇಮಂತಕುಮಾರ್ ನಗರ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ಕಾರ್ಯೋನ್ಮುಖರಾದ ಪೊಲೀಸರು, ಹಣ ವರ್ಗಾವಣೆಯಾದ ಫೋನ್ ನಂಬರ್ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುವ ವ್ಯಕ್ತಿ ಎಂಬುದನ್ನು ಖಾತ್ರಿಪಡಿಸಿಕೊಂಡಿದ್ದಾರೆ. ಅಲ್ಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ, ಆರೋಪಿಗಳನ್ನು ಬಂಧಿಸಲಾಗಿದೆ ಎಂದಿದ್ದಾರೆ.

### ಬೆಂಗಳೂರು - ಮೈಸೂರು ಹೆದ್ದಾರಿಯಲ್ಲಿ ಕಾರು ಅಡ್ಡಗಟ್ಟಿ 26 ಲಕ್ಷ ದರೋಡೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಂಡ್ಯ

ಖಾಸಗಿ ಕಂಪನಿ ಉದ್ಯೋಗಿಯೊಬ್ಬರ ಕಾರನ್ನು ದುಷ್ಕರ್ಮಿಗಳ ಗ್ಯಾಂಗ್ ಅಡ್ಡಗಟ್ಟಿ 26 ಲಕ್ಷ ರೂ. ದರೋಡೆ ಮಾಡಿದ ಘಟನೆ ಮದ್ದೂರು ಪಟ್ಟಣದ ಹೊರ ವಲಯದ ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ಮೈಸೂರಿನ ಖಾಸಗಿ ಕಂಪನಿ ಉದ್ಯೋಗಿ ಗೋವಿಂದರಾಜು ಅವರು ತೆರಳುತ್ತಿದ್ದ 20 ಕಾರನ್ನು ಅಡ್ಡಗಟ್ಟಿದ ದುಷ್ಕರ್ಮಿಗಳು, ಹಣ ದೋಚಿ ಪರಾರಿಯಾಗಿದ್ದಾರೆ. ರಾತ್ರಿ 7 ಗಂಟೆ ಸುಮಾರಿಗೆ ಬೇರೆ ಕಂಪನಿಯಿಂದ ತಮ್ಮ ಕಂಪನಿಗೆ ಹಣ ವಿತರಣೆ ಮಾಡಲು ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದರು. ಪಟ್ಟಣದ ಹೊರ ವಲಯದ ಐಶ್ವರ್ಯ ಕಾನ್ವೆಂಟ್ ಬಳಿ ಇನ್ನೋವಾ ಕಾರಿನಲ್ಲಿ ಹಿಂಬಾಲಿಸಿಕೊಂಡು ಬಂದ ದುಷ್ಕರ್ಮಿಗಳು ಗೋವಿಂದರಾಜು ಅವರ ಕಾರನ್ನು ಅಡ್ಡಗಟ್ಟಿ ಕಾರಿನ ಗಾಜು ಒಡೆದು, ಮಾರಕಾಸ್ತ್ರಗಳನ್ನು ತೋರಿಸಿ, ಬೆದರಿಕೆ ಹಾಕಿ 26 ಲಕ್ಷ ರೂ. ನಗದು ಹಣವನ್ನು ದೋಚಿ ಪರಾರಿಯಾಗಿದ್ದಾರೆ. ಗೋವಿಂದರಾಜು ತಕ್ಷಣ ಮದ್ದೂರು ಪೊಲೀಸರಿಗೆ ಘಟನೆ ಕುರಿತು ಮಾಹಿತಿ ನೀಡಿದರು.


ತಕ್ಷಣ ವೃತ್ತ ನಿರೀಕ್ಷಕ ನವೀನ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ. ವಿ.ಜೆ. ಶೋಭರಾಣಿ, ಎಎಸ್ಪಿ ತಿಮ್ಮಯ್ಯ, ಡಿವೈಎಸ್ಪಿ ಯಶ್ವಂತ್‌ಕುಮಾರ್ ಮಾರ್ಗದರ್ಶನದಲ್ಲಿ ವಿಶೇಷ ತಂಡ ರಚನೆ ಮಾಡಲಾಗಿದೆ.

## ರಾಮನಗರ ನಗರಸಭೆ ವತಿಯಿಂದ ಸ್ವಾಭಿಮಾನ ಸೇವಾ ಸಮಿತಿಗೆ ಉಧ್ಯಾನವನ ನಿರ್ವಹಣೆ ಹಸ್ತಾಂತರ

# ಯುವ ಸಮುದಾಯದ ಬದುಕಿಗೆ ಆಶಾ ಕಿರಣ

• ಉದಯವಾಹಿನಿ, ರಾಮನಗರ

ನಗರಸಭೆ ವತಿಯಿಂದ ಜನ ಸಾಮಾನ್ಯರಿಗೆ ಅನುಕೂಲವಾಗುವ ಹಲವು ವಿನೂತನ ಕಾರ್ಯಕ್ರಮಗಳನ್ನು ರಾಜ್ಯದಲ್ಲಿಯೆ ಮೊದಲ ಬಾರಿಗೆ ಪ್ರಾರಂಭ ಮಾಡಲಾಗಿದೆ ಎಂದು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಹೇಳಿದರು. ನಗರದ ಪರ್ಕಾವತಿ ಬಡಾವಣೆಯಲ್ಲಿ ನಗರಸಭೆ ಉದ್ಯಾನವನ ನಿರ್ವಹಣೆಯನ್ನು ಸ್ವಾಭಿಮಾನಿ ಸೇವಾ ಸಮಿತಿಗೆ ಹಸ್ತಾಂತರಿಸಿ ಮಾತನಾಡಿದ ಅವರು, ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡಿ ಯಶಸ್ಸು ಪಡೆದಿರುವುದು, ಯುವ ಸಮುದಾಯದ ಬದುಕಿಕೆ ಆಶಾ ಕಿರಣವಾಗಿದೆ. ನಗರದ ಸ್ವಚ್ಚತೆಗೆ ಪ್ರಥಮ ಆದ್ಯತೆ ನೀಡಿ ನಗರದ ಸುಮಾರು 50 ಕಡೆಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಿ ರಸ್ತೆ ಬದಿ ಕಸ ನಿಯಂತ್ರಿಸಲಾಗಿದೆ. ರಸ್ತೆ ಬದಿ ಕಸ ಹಾಕುವವರಿಗೆ ಸ್ವಯಂ ಸೇವಕರು ಗುಲಾಬಿ ನೀಡಿ ಸ್ವಾಗತಿಸುವ ಕೆಲಸ ಪ್ರಾರಂಭಿಸಿ



ಉದಯವಾಹಿನಿ ಚಿತ್ರ

ಅರಿವು ಮೂಡಿಸುತ್ತಿದ್ದಾರೆ ಎಂದರು.

ನಗರ ವ್ಯಾಪ್ತಿಯಲ್ಲಿ ಅಕ್ರಮ ಬಡಾವಣೆಗಳು ತಲೆ ಎತ್ತಿರುವದರಿಂದ ನಗರಸಭೆಗೆ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಹತ್ತಾರು ವರ್ಷಗಳ ಹಿಂದೆ ನಿರ್ಮಾಣವಾದ ಬಡಾವಣೆಗಳಲ್ಲಿ ಉತ್ತಮ ರಸ್ತೆಗಳು, ಯುಜಿಡಿ ವ್ಯವಸ್ಥೆ ಮಾಡಲು ತೊಡಕಾಗುತ್ತಿದೆ. ಕಳೆದ ವರ್ಷ 10.5 ಕೋಟಿ ತೆರಿಗೆ ಸಂಗ್ರಹವಾಗಿದೆ. ನಗರದಲ್ಲಿ ಶೇ.52 ರಷ್ಟು ಪ್ರದೇಶಕ್ಕೆ ಯುಜಿಡಿ ವ್ಯವಸ್ಥೆ ಇಲ್ಲ. ಪರಿಪೂರ್ಣ ಯುಜಿಡಿ ವ್ಯವಸ್ಥೆ ಕಲ್ಪಿಸಲು 200 ಕೋಟಿ ರೂಗಳ ಅವಶ್ಯವಿದೆ ಎಂದರು.

> ನಗರದ 28 ನೇ ವಾರ್ಡಿನಲಿ ಕುವೆಂಪು ಬಳಗಕ್ಕೆ ಉದ್ಯಾನವನ ನಿರ್ವಹಣೆ ನೀಡಿದ ನಂತರ ಇದರ ಬೆಳವಣಿಗೆಯಿಂದ ಇದೀಗ ನಗರದ ವಿವಿದೆಡೆ ಇರುವ ಉದ್ಯಾನಗಳ ನಿರ್ವಹಣೆಯನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡುವ ಮೂಲಕ ಜನಸ್ನೇಹಿ ಉದ್ಯಾನ ನಿರ್ಮಾಣ ಮಾಡಲಾಗುತ್ತಿದೆ.
> – ಕೆ.ಶೇಷಾದ್ರಿ, ನಗರಸಭೆ ಅಧ್ಯಕ್ಷ

ಕಂದಾಯ ನಿರೀಕ್ಷಕ ಆರ್.ನಾಗರಾಜ್ ಮಾತನಾಡಿ, ಸುಮಾರು 1.2 ಎಕರೆ ವಿಸ್ತೀರ್ಣದ ಉದ್ಯಾನದ ಸ್ಥಳ ನಿರ್ವಹಣೆಯನ್ನು ಸ್ವಾಭಿಮಾನಿ ಸೇವಾ ಸಮಿತಿಗೆ ನೀಡಿದ್ದು ಮುಂದಿನ ದಿನಗಳಲ್ಲಿ ಮಾದರಿ ಉದ್ಯಾನವಾಗಿ ಮಾಡಲಾಗುವುದು. ಇಲ್ಲಿನ ಕೇಲವು ಆಟೋಪಕರಣಗಳನ್ನು ರಿಪೇರಿ ಮಾಡಿಸಿಕೊಡಬೇಕೆಂದು ನಗರಸಭೆ ಪೌರಾಯುಕ್ತರಿಗೆ ಮನವಿ ಮಾಡಿದರು.

ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಿ ಸುರೇಶ್ ಮಾತನಾಡಿ, ರಾಮನಗರ ನಗರಸಭೆ ಇಡಿ ರಾಜ್ಯದಲ್ಲಿ ಮಾದರಿಯಾಗುತ್ತಿದೆ. ನಗರಸಭೆ ಇಂದು ಜನಸ್ನೇಹಿಯಾಗಿ ಕೆಲಸ ಮಾಡುತ್ತಿದೆ ಎಂದರು.

ದಲಿತ ಸಂಘಟನೆಗಳ ಒಕ್ಕೂಟದ ಶಿವಕುಮಾರಸ್ವಾಮಿ ಮಾತನಾಡಿ, ಉತ್ತಮ ಉದ್ಯಾನ ನಿರ್ವಹಣೆ ಒಳ್ಳೆಯ ಆಸ್ಪತ್ರೆ ಇದ್ದಂತೆ. ಹಾಗಾಗಿ ಉದ್ಯಾನದಲ್ಲಿ ಸ್ವಚ್ಚತೆಗೆ ಆದ್ಯತೆ ನೀಡಿ ಉತ್ತಮ ವಾತಾವರಣ ನಿರ್ಮಾಣ ಮಾಡಬೇಕು ಎಂದು ಕಿವಿಮಾತು ಹೇಳಿದರು. ಪೌರಾಯುಕ್ತ ಡಾ.ಜಯಣ್ಣ, ನಗರಸಭೆ ಸದಸ್ಯೆ ಜಯಲಕ್ಷ್ಮಮ್ಮ, ರಮೇಶ್, ಸ್ವಾಭಿಮಾನಿ ಸೇವಾ ಸಮಿತಿ ಅಧ್ಯಕ್ಷ ಗವಿಯಪ್ಪ, ಎಇಇ ಪುಟ್ಟಸ್ವಾಮಿ, ಶಿಕ್ಷಕ ಸಿದ್ಧರಾಜು, ಗಾಯಕ ವಿನಯ್‌ಕುಮಾರ್ , ಜಗದೀಶ್, ಹಾಲಿನಚಂದ್ರು, ಡಾ.ನಯಾಜ್ ಅಹಮದ್ ಇದ್ದರು.

# ಔಷಧಿ ವ್ಯಾಪಾರಿಗಳ ಬಂದ್: ಮೈಸೂರಿನಲ್ಲಿ ನೈತಿಕ ಬೆಂಬಲ

• ಉದಯವಾಹಿನಿ, ಮೈಸೂರು

ಆನ್‌ಲೈನ್ ಔಷಧಿ ಮಾರಾಟ, ಅಸಹಜ ರಿಯಾಯಿತಿ ವಿರುದ್ಧ ಮೇ 20ರಂದು ಕರೆ ನೀಡಲಾಗಿರುವ ಔಷಧಿ ವ್ಯಾಪಾರಿಗಳ ರಾಷ್ಟ್ರವ್ಯಾಪಿ ಬಂದ್'ಗೆ ನೈತಿಕ ಬೆಂಬಲವನ್ನಷ್ಟೆ ಸೂಚಿಸಲು ಮೈಸೂರು ನಗರ, ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘ ನಿರ್ಧರಿಸಿದೆ. ಸಾರ್ವಜನಿಕರು, ರೋಗಿಗಳ ಆರೋಗ್ಯದ ಹಿತದೃಷ್ಟಿಯಿಂದ ನಾವು ಅಂದು ಅಂಗಡಿಗಳನ್ನು ಮುಚ್ಚುವುದಿಲ್ಲ. ಎಂದಿನಂತೆ ಕಾರ್ಯನಿರ್ವಹಿಸುತ್ತೇವೆ. ಗ್ರಾಹಕರಿಗೆ ಸೇವೆ ನೀಡುತ್ತೇವೆ. ಕಪ್ಪುಪಟ್ಟಿ ಕಟ್ಟಿಕೊಂಡು ನೈತಿಕ ಬೆಂಬಲ ನೀಡಲಿದ್ದೇವೆ' ಎಂದು ಸಂಘದ ಅಧ್ಯಕ್ಷ ಎಂ.ರಾಜು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.





ಉದಯವಾಹಿನಿ ಚಿತ್ರ

ಅನಧಿಕೃತ ಆನ್‌ಲೈನ್ ಔಷಧಿ ವ್ಯಾಪಾರ, ಜೀವರಕ್ಷಕ ಔಷಧಿಗಳ ಮೇಲೆ ನೀಡಲಾಗುತ್ತಿರುವ ಅಸಹಜ ಹಾಗೂ ಅತಿಯಾದ ರಿಯಾಯಿತಿಗಳು, ಕ್ವಿಕ್ ಕಾಮರ್ಸ್ ಔಷಧಿ ಡೆಲಿವರಿ ಆ್ಯಪ್‌ಗಳು ಮಾಡುತ್ತಿರುವ ಕಾನೂನು ಉಲ್ಲಂಘನೆಗಳ ವಿರುದ್ಧ ನಿರಂತರವಾಗಿ ಹೋರಾಟ ನಡೆಸುತ್ತಿದ್ದೇವೆ. ಅನೇಕ ಆನ್‌ಲೈನ್ ಪೋರ್ಟಲ್‌ಗಳು ಜೀವರಕ್ಷಕ ಔಷಧಿಗಳ ಮೇಲೂ ಅತಿಯಾದ ರಿಯಾಯಿತಿ ನೀಡಿ, ಸಾಮಾಜಿಕ ಜಾಲತಾಣಗಳು ಮತ್ತು ಜಾಹೀರಾತು ಮೂಲಕ ಗ್ರಾಹಕರನ್ನು ಆಕರ್ಷಿಸುತ್ತಿವೆ. ಇದು ತಪ್ಪು ಸಂದೇಶ ರವಾನಿಸಿದಂತಾಗುತ್ತದೆ ಹಾಗೂ ಆತಂಕಕ್ಕೂ ಕಾರಣವಾಗಿದೆ. ಅನಾರೋಗ್ಯಕರ ಸ್ಪರ್ಧೆಯಿಂದಾಗಿ ಸಾಂಪ್ರದಾಯಿಕ ಚಿಲ್ಲರೆ ಔಷಧಿ ವ್ಯಾಪಾರಿಗಳು ಸಂಕಷ್ಟಕ್ಕೆ ಸಿಲುಕುತ್ತಿದ್ದೇವೆ' ಎಂದು ಹೇಳಿದರು.

ಈ ಬೆಳವಣಿಗೆಯು ಸಾಂಪ್ರದಾಯಿಕ ಫಾರ್ಮಸಿ ಕ್ಷೇತ್ರದ ಜೊತೆಗೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಹೀಗಾಗಿ, ಆನ್‌ಲೈನ್‌ನಲ್ಲಿ ಔಷಧಿ ಮಾರಾಟವನ್ನು ಸರ್ಕಾರಗಳು ತಡೆಯಬೇಕು ಎನ್ನುವುದು ನಮ್ಮ ಪ್ರಮುಖ ಬೇಡಿಕೆಯಾಗಿದೆ' ಎಂದರು. ರಾಜ್ಯದಲ್ಲಿ ನಮ್ಮ ಮನವಿಗೆ ಸ್ಪಂದಿಸಿದ ಸರ್ಕಾರವು, ಅನಧಿಕೃತ ಸಂಸ್ಥೆಗಳ ವಿರುದ್ಧ ಕ್ರಮ ವಹಿಸುವಂತೆ ಸೂಚಿಸಿದೆ. ಅಧಿಕಾರಿಗಳು ಹಂತ ಹಂತವಾಗಿ ಕಾನೂನು ಕ್ರಮ ಜರುಗಿಸುತ್ತಿದ್ದಾರೆ. ಈ ಕಾರಣದಿಂದಾಗಿ ನಾವು ಮೇ 20ರ ಬಂದ್‌ಗೆ ನೈತಿಕ ಬೆಂಬಲವನ್ನಷ್ಟೆ ನೀಡಲಿದ್ದೇವೆ. ಸಾರ್ವಜನಿಕರಿಗೆ ನಿರಂತರವಾಗಿ ಸೇವೆ ನೀಡಲು ಬದ್ಧವಾಗಿದ್ದೇವೆ' ಎಂದು ತಿಳಿಸಿದರು.

# ಕಾಡಿನಲ್ಲಿ ಅಕ್ರಮವಾಗಿ ಚರ್ಚ್ ನಿರ್ಮಾಣ ಉದ್ಘಾಟನೆಗೆ ತಮಿಳುನಾಡಿನಿಂದ ಆಗಮಿಸಿದ್ದವರು ವಶಕ್ಕೆ

• ಉದಯವಾಹಿನಿ, ಕೊಡಗು

ಕಾಡಿನೊಳಗೆ ಅಕ್ರಮವಾಗಿ ನಿರ್ಮಿಸಿಕೊಂಡ ಚರ್ಚ್ ಉದ್ಘಾಟನೆಗೆ ತಮಿಳುನಾಡಿನಿಂದ ಬಂದಿದ್ದ 40ಕ್ಕೂ ಹೆಚ್ಚು ಜನರನ್ನು ಪೊಲೀಸರು ವಶಕ್ಕೆ ಪಡೆದಿರುವ ಘಟನೆ ಕೊಡಗಿನಲ್ಲಿ ನಡೆದಿದೆ. ನಾಕೂರು ಶಿರಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೇರೂರಿನ ಗಿರಿಜನ ಅಕ್ರಮವಾಗಿ ಕಾಡಿನಲ್ಲಿ ಚರ್ಚ್ ನಿರ್ಮಿಸಿದ್ದು, ಇದರ ಉದ್ಘಾಟನೆ ಕಾರ್ಯಕ್ರಮ ಏರ್ಪಾಡು ಮಾಡಿ ತಮಿಳುನಾಡಿನಿಂದ ಜನರನ್ನು ಕರೆಸಿದ್ದಾರೆ. ಈ ವೇಳೆ ಸ್ಥಳೀಯರು ಕಾರ್ಯಕ್ರಮವನ್ನು ತಡೆದು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಈ ಹಿನ್ನೆಲೆ ಕುಶಾಲನಗರ ವೃತ್ತ ನಿರೀಕ್ಷಕ ಪ್ರದೀಪ್, ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿಗಳಾದ ಮೋಹನ್‌ರಾಜ್, ರಾಮಚಂದ್ರ, ನಾಕೂರು ಶಿರಂಗಾಲ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಶ್ರೀಕಾಂತ್, ಪಿಡಿಒ ಆಸ್ಮಾ ಸ್ಥಳಕೆ ಧಾವಿಸಿದ್ದಾರೆ. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಮೂಲಕ ಯಾವುದೇ ಅನುಮತಿ ಪಡೆಯದೇ ಕಟ್ಟಡ ನಿರ್ಮಿಸಿರುವುದಾಗಿ ಕಂಡು ಬಂದಿದೆ. ಈ ವೇಳೆ ಸ್ಥಳೀಯರು ಹಾಗೂ ಹಾಡಿ ನಿವಾಸಿಗಳ ನಡುವೆ ವಾಗ್ವಾದ ನಡೆದಿದ್ದು, ತಮ್ಮಿಷ್ಟದಂತೆ ತಾವು ಪ್ರಾರ್ಥನೆಯಲ್ಲಿ ತೊಡಗಿರುವುದಾಗಿ ಹಾಡಿ ನಿವಾಸಿಗಳು





ಉದಯವಾಹಿನಿ ಚಿತ್ರ

ವಾದಿಸಿದ್ದಾರೆ. ಬಳಿಕ ಪೊಲೀಸರು ತಮಿಳುನಾಡು ಮೂಲದ 40ಕ್ಕೂ ಹೆಚ್ಚು ಜನರನ್ನು ವಾಹನ ಸಮೇತವಾಗಿ ವಶಕ್ಕೆ ಪಡೆದು ವಿಚಾರಣೆಗಾಗಿ ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ.

ಈ ಕುರಿತು ಮಾತನಾಡಿರುವ ಬಿಜೆಪಿ ಮುಖಂಡ ಹೇರೂರು ಚಂದ್ರಶೇಖರ್, ಹೇರೂರು ಗಿರಿಜನ ಕಾಡಿನಲ್ಲಿ ಮತಾಂತರ ಚಟುವಟಿಕೆ ನಡೆಸುತ್ತಿದ್ದಾರೆ. ಮತಾಂತರಗೊಂಡ ಆದಿವಾಸಿಗಳು ಸಮಾಜ ಕಲ್ಯಾಣ ಇಲಾಖೆ ಜಾಗದಲ್ಲಿ ಅನಧಿಕೃತವಾಗಿ ಚರ್ಚ್ ನಿರ್ಮಿಸಿ ಪ್ರಾರ್ಥನೆಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇದರ ಉದ್ಘಾಟನೆಗೆ ತಮಿಳುನಾಡಿನಿಂದ ಜನ ಬಂದಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಹಾಗಾಗಿ ಅಕ್ರಮ ಮತಾಂತರ ಪ್ರಕ್ರಿಯೆಗಳಿಗೆ ಕಡಿವಾಣ ಹಾಕಬೇಕಿದೆ ಎಂದು ಒತ್ತಾಯಿಸಿದ್ದಾರೆ.

# ತುರ್ತು ಕುಡಿಯುವ ನೀರು ಕೊಡಿ ಮನವಿ

• ಉದಯವಾಹಿನಿ, ಚಾಮರಾಜನಗರ

ಮಳೆ ಕೊರತೆಯಿಂದ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವ ಸಂಬಂಧ ಸಾರ್ವಜನಿಕರಿಂದ ವ್ಯಾಪಕ ದೂರುಗಳು ಬಂದಿದ್ದರಿಂದ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ನಗರದ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಸಮಸ್ಯೆ ಆಲಿಸಿ, ಅಹವಾಲು ಸ್ವೀಕರಿಸಿದರು. ಶಾಸಕ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾಡಳಿತ, ನಗರಸಭೆಯ ಅಧಿಕಾರಿಗಳೊಂದಿಗೆ ಪಟ್ಟಣದ 1ನೇ ವಾರ್ಡಿನಲ್ಲಿರುವ ಸೋಮವಾರಪೇಟೆ ಹಾಗೂ 2ನೇ ವಾರ್ಡಿನಲ್ಲಿರುವ ಗಾಳಿಪುರ ಹಾಗೂ ಹಂದಿಜೋಗಿ ಕಾಲೋನಿಗೆ ಭೇಟಿ ನೀಡಿದ ಸಚಿವರು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ನಿವಾಸಿಗಳಿಂದ ಅಹವಾಲು ಆಲಿಸಿದರು.

ಬಡಾವಣೆಗಳಿಗೆ ನಿಯಮಿತವಾಗಿ ಕುಡಿಯುವ ನೀರಿನ ಪೂರೈಕೆಯಾಗುತ್ತಿಲ್ಲ. ಬೇಸಿಗೆಯಲ್ಲಿ ನೀರಿಲ್ಲದೆ ಸಮಸ್ಯೆ ಎದುರಿಸುವಂತಾಗಿದೆ. ಟ್ಯಾಂಕರ್ ಮೂಲಕ ಪೂರೈಸುವ ನೀರು ಸಾಕಾಗುತ್ತಿಲ್ಲ. ಕೂಡಲೇ ಸಮರ್ಪಕ ನೀರು ಒದಗಿಸಬೇಕು ಎಂದು ನಿವಾಸಿಗಳು ಮನವಿ ಮಾಡಿದರು. ಬಡಾವಣೆಯಲ್ಲಿ ನಿಯಮಿತವಾಗಿ ಕಸ ವಿಲೇವಾರಿಯಾಗುತ್ತಿಲ್ಲ. ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳು ಎತ್ತದೆ. ಅನೈರ್ಮಲ್ಯ ಉಂಟಾಗಿದೆ.ದುರ್ವಾಸನೆಗೆ ಸ್ಥಳೀಯರು ವಾಸ ಮಾಡಲಾಗುತ್ತಿಲ್ಲ. ಮಳೆ ಬಂದರೆ ಚರಂಡಿ ಕಟ್ಟಿಕೊಂಡು ರಸ್ತೆಗೆ ತ್ಯಾಜ್ಯ ಹರಿದು



ಉದಯವಾಹಿನಿ ಚಿತ್ರ

ಸಮಸ್ಯೆ ಗಂಭೀರವಾಗುತ್ತದೆ' ಎಂದು ದೂರು ಹೇಳಿಕೊಂಡರು.

ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವರು, 'ನಾಗರಿಕರಿಗೆ ಆದ್ಯತೆಯ ಮೇರೆಗೆ ಕುಡಿಯುವ ನೀರು ಒದಗಿಸಬೇಕು. ತಾತ್ಕಾಲಿಕವಾಗಿ ಟ್ಯಾಂಕರ್ ಮೂಲಕ ಸಮರ್ಪಕವಾಗಿ ನೀರು ಪೂರೈಕೆ ಮಾಡಬೇಕು ಎಂದು ನಗರಸಭೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚಿಸಿದರು. ಹಂದಿಜೋಗಿ ಕಾಲೋನಿಯ ನಿವಾಸಿಗಳು 'ಖಾಸಗಿ ಜಾಗದಲ್ಲಿ ವಾಸ ಮಾಡುತ್ತಿದ್ದು, ಜಾಗ ತೆರವುಗೊಳಿಸುವಂತೆ ಒತ್ತಡ ಹಾಕುತ್ತಿದ್ದಾರೆ, ಬದಲಿ ಮನೆಗಳ ವ್ಯವಸ್ಥೆ ಮಾಡಿಕೊಡಬೇಕು' ಎಂದು ಮನವಿ ಮಾಡಿದರು. ಶಾಸಕ ಪುಟ್ಟರಂಗಶೆಟ್ಟಿ ಪ್ರತಿಕ್ರಿಯಿಸಿ ಹಂದಿಜೋಗಿ ಸಮುದಾಯದವರಿಗೆ ಉತ್ತುವಳ್ಳಿ ಗ್ರಾಮದಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಡಲು ಜಾಗ ಗುರುತಿಸಲಾಗಿದೆ. ಶೀಘ್ರ ಅಲ್ಲಿಗೆ ಸ್ಥಳಾಂತರ ಮಾಡಲು ಕ್ರಮ ವಹಿಸಲಾಗುತ್ತದೆ' ಎಂದು ಭರವಸೆ ನೀಡಿದರು. ಸೋಮವಾರಪೇಟೆ ಹಾಗೂ ಗಾಳಿಪುರ ಬಡಾವಣೆಯ ನಿವಾಸಿಗಳು ಕುಡಿಯುವ ನೀರಿನ ಸಮಸ್ಯೆಯನ್ನು ಸಚಿವರ ಗಮನಕ್ಕೆ ತಂದು ತುರ್ತು ಹೆಚ್ಚುವರಿ ಬೋರ್‌ವೆಲ್ ಕೊರೆಯಿಸಿ ಸಮಸ್ಯೆಯನ್ನು ಬಗೆಹರಿಸಬೇಕು, ವಾರಕ್ಕೊಮ್ಮೆಯಾದರೂ ಕಸ ಸಂಗ್ರಹಣೆ ಮಾಡಬೇಕು ಚರಂಡಿಗಳು ಸ್ವಚ್ಛತೆಯಿಲ್ಲದೆ, ದುರ್ವಾಸನೆಯಿಂದ ಕೂಡಿದ್ದು ಸ್ವಚ್ಛಗೊಳಿಸುವಂತೆ ಸಚಿವರಿಗೆ ಮನವಿ ಮಾಡಿದರು.

ಜನ-ಜಾನುವಾರುಗಳಿಗೆ ಕುಡಿಯುವ ನೀರು ಸರಬರಾಜು ಮಾಡಬೇಕು, ಕುಡಿಯುವ ನೀರಿನ ಸಮಸ್ಯೆ ಸಂಬಂಧ ದೂರುಗಳು ಬಾರದಂತೆ ಸೂಕ್ತ ಕ್ರಮ ವಹಿಸಬೇಕು. ಬಡಾವಣೆಗಳ ಸ್ವಚ್ಛತೆಗೆ ಗಮನ ಹರಿಸುವಂತೆ ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು.

# ಭೂ ಸ್ವಾಧೀನಕ್ಕೆ ಮತ್ತೊಂದು ರೂಪು ನೀಡಲು ರೈತರು ಸಜ್ಜು

## ವಿಧಾನಸೌಧಕ್ಕೆ ಜೂ.4 ರಂದು 5 ಸಾವಿರ ಬೈಕ್ ರ್ಯಾಲಿ, 7 ಜಿಲ್ಲೆಗಳ ರೈತರಿಂದ ಹೋರಾಟ ನಿರ್ಧಾರ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ವ್ಯಾಪ್ತಿಯ 13 ಹಳ್ಳಿಗಳ ರೈತರ ಭೂ ಸ್ವಾಧೀನ ವಿರೋಧಿ ಹೋರಾಟಕ್ಕೆ ಮತ್ತೊಂದು ರೂಪು ನೀಡಲು ರೈತರು ಸಜ್ಜಾಗುತ್ತಿದ್ದಾರೆ. 13 ಹಳ್ಳಿಗಳ ರೈತರು 62 ದಿನಗಳಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸುತ್ತಿದ್ದರೂ ಸರಕಾರ ಮಾತ್ರ ಸೊಪ್ಪು ಹಾಕುತ್ತಿಲ್ಲ. ಹೀಗಾಗಿ ಈ ಹೋರಾಟಕ್ಕೆ ತಾರ್ಕಿಕ ಅಂತ್ಯವಾಡಲು 5 ಸಾವಿರ ಬೈಕ್ ರ್ಯಾಲಿ ಮೂಲಕ ವಿಧಾನಸೌಧ ಚಲೋ ನಡೆಸಲು ನಿರ್ಧರಿಸಿದ್ದಾರೆ.

ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ವ್ಯಾಪ್ತಿಯ 13 ಹಳ್ಳಿಗಳ ಸುಮಾರು 1,823 ಎಕರೆ ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿದೆ. ದರ ನಿಗದಿ ಸಂಬಂಧ ಸಭೆಗಳನ್ನು ನಡೆಸಲಾಗುತ್ತಿದೆ. ಇದರ ವಿರುದ್ಧ ರೈತರು ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದಾರೆ. ನಾನಾ ಬಗೆಯ ಪ್ರತಿಭಟನೆ ನಡೆಸಿದ್ದರೂ ರಾಜ್ಯ ಸರಕಾರದಿಂದ ನಿರೀಕ್ಷಿತ ಸ್ಪಂದನೆ ಸಿಕ್ಕಿಲ್ಲ. ರೈತರ ಹೋರಾಟವನ್ನು ಸರಕಾರ ಗಂಭೀರವಾಗಿ ಸ್ವೀಕರಿಸದ ಕಾರಣ, ಈಗ ರೈತ ಸಂಘದ ನೇತೃತ್ವದಲ್ಲಿ ಬಯಲು ಸೀಮೆ ಜಿಲ್ಲೆಗಳ ರೈತರನ್ನು ಸಂಘಟಿಸಿ ಬೃಹತ್ ಬೈಕ್ ರ್ಯಾಲಿಗೆ ಸಿದ್ಧತೆ ನಡೆಸಲಾಗಿದೆ.

**7 ಜಿಲ್ಲೆಗಳಲ್ಲಿ ಸಂಘಟನೆ:** ಮತ್ತೊಂದೆಡೆ ಕೈಗಾರಿಕೆಗಳಿಗೆ ಭೂ ಸ್ವಾಧೀನ ಮಾಡಿಕೊಳ್ಳುವ ಕುರಿತು ದರ ನಿಗದಿ ಸೇರಿದಂತೆ ನಾನಾ ಪ್ರಕ್ರಿಯೆಗಳು ನಡೆಯುತ್ತಲೇ ಇವೆ. ಹೀಗಾಗಿ ಈ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ರೈತ ಸಂಘ ನಿರ್ಧರಿಸಿದೆ. ಇದೇ ರೀತಿ ಸೌಮ್ಯ ಹೋರಾಟದಿಂದ ಸರಕಾರ ಜಗ್ಗಲ್ಲ ಎನ್ನುವುದು ದೃಢಪಟ್ಟ ಹಿನ್ನೆಲೆಯಲ್ಲಿ ಸರಕಾರದ ಗಮನ ಸೆಳೆಯಲು ಬೃಹತ್ ಹೋರಾಟಕ್ಕೆ ನಿರ್ಧರಿಸಲಾಗಿದೆ. ಚಿಕ್ಕಬಳ್ಳಾಪುರ ಮಾತ್ರವಲ್ಲ, ಬಯಲು ಸೀಮೆಯ 7 ಜಿಲ್ಲೆಗಳ ರೈತರನ್ನು ಸಂಘಟಿಸಿ ಜಿಲ್ಲೆಗಳಿಂದ ಸುಮಾರು 5000 ಕ್ಕೂ ಹೆಚ್ಚು ಬೈಕ್‌ಗಳ ಮೂಲಕ ವಿಧಾನಸೌಧ ಚಲೋ ನಡೆಸಲು ಸಿದ್ಧತೆ ನಡೆಯುತ್ತಿದೆ.



ಉದಯವಾಹಿನಿ ಚಿತ್ರ

**ರ್ಯಾಲಿ ಮೂಲಕ ವಿಧಾನಸೌಧ ಚಲೋ**

> ನಾವು ಈಗಾಗಲೇ ರೈತರ ಜಮೀನು ಉಳಿಸಿಕೊಳ್ಳಲು ನಾನಾ ಬಗೆಯ ಹೋರಾಟ ನಡೆಸಿದ್ದೇವೆ. ಕಳೆದ 62 ದಿನಗಳಿಂದ ಜಿಲ್ಲಾಧಿಕಾರಿ ಕಚೇರಿ ಎದುರು ರೈತ ಮಹಿಳೆಯರ ಜತೆ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಇಷ್ಟಾದರೂ ರಾಜ್ಯ ಸರಕಾರ ನಮ್ಮ ಬೇಡಿಕೆಗಳನ್ನು ಈಡೇರಿಸುವ ಲಕ್ಷಣಗಳು ಕಾಣುತ್ತಿಲ್ಲ. ಹೀಗಾಗಿ ಜೂ.4 ರಂದು ನಾನಾ ಜಿಲ್ಲೆಗಳಿಂದ ಸುಮಾರು 5 ಸಾವಿರ ಬೈಕ್‌ಗಳ ಮೂಲಕ ವಿಧಾನಸೌಧ ಚಲೋ ನಡೆಸಲು ನಿರ್ಧರಿಸಿದ್ದೇವೆ. ರೈತರಿಗೆ ಭೂಮಿ ವಾಪಸ್ ಕೊಡುವ ಭರವಸೆ ನೀಡುವವರೆಗೂ ನಮ್ಮ ಹೋರಾಟ ತಡೆಯಲು ಯಾರಿಂದಲೂ ಸಾಧ್ಯವಿಲ್ಲ.
> – ಭಕ್ತರಹಳ್ಳಿ ಬೈರೇಗೌಡ, ರಾಜ್ಯ ಕಾರ್ಯಾಧ್ಯಕ್ಷ, ರೈತ ಸಂಘ

**5 ಸಾವಿರ ಬೈಕ್ ಗುರಿ:** ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಭಕ್ತರಹಳ್ಳಿ ಬೈರೇಗೌಡ ನೇತೃತ್ವದಲ್ಲಿ ಕೈಗಾರಿಕಾ ಭೂಸ್ವಾಧೀನ ವಿರೋಧಿ ಹೋರಾಟ ನಡೆಯುತ್ತಿದೆ. ರಾಜ್ಯ ಸರಕಾರ ಭೂಸ್ವಾಧೀನ ನಿರ್ಧಾರ ವಾಪಸ್ ತೆಗೆದುಕೊಳ್ಳುವವರೆಗೂ ಹೋರಾಟ ಮುಂದುವರಿಸಲು ತೀರ್ಮಾನಿಸಲಾಗಿದೆ. ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಹಾಸನ, ಬೆಂಗಳೂರು ಗ್ರಾ., ತುಮಕೂರು ಸೇರಿದಂತೆ ಒಟ್ಟು 7 ಜಿಲ್ಲೆಗಳ ಸುಮಾರು 5 ಸಾವಿರ ಬೈಕ್‌ಗಳು ಈ ರ್ಯಾಲಿಯಯಲ್ಲಿ ಭಾಗವಹಿಸಲು ಗುರಿ ನೀಡಲಾಗಿದೆ.

ಈ ಸಂಬಂಧ ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲೂ ಗ್ರಾಮಸಭೆಗಳನ್ನು ನಡೆಸಿದ್ದು, ರೈತರ ಜಮೀನುಗಳನ್ನು ವಶಪಡಿಸಿಕೊಳ್ಳಲು ರಾಜ್ಯ ಸರಕಾರಕ್ಕೆ ಯಾವುದೇ ಅವಕಾಶ ಕೊಡಬಾರದು ಎನ್ನುವ ಸಂಕಲ್ಪದೊಂದಿಗೆ ರೈತರನ್ನು ಸಂಘಟಿಸಲಾಗುತ್ತಿದೆ. ಜೂ. 4 ರಂದು ಈ ಹೋರಾಟಕ್ಕೆ ತಾರ್ಕಿಕ ಅಂತ್ಯವಾಡಲು ನಿರ್ಧರಿಸಲಾಗಿದೆ. ರೈತರ ಜಮೀನಿಗೆ ಕೈ ಹಾಕಲು ಹೊರಟಿರುವ ಸರಕಾರಕ್ಕೆ ಮತ್ತೆ ರೈತರ ಜಮೀನಿನ ತಂಟೆಗೆ ಬಾರದ ಹಾಗೆ ಮಾಡಲು ತಯಾರಿ ನಡೆಸಲಾಗಿದೆ.

ಈಗಾಗಲೇ ರಾಜಕೀಯ ಬಣ್ಣಕ್ಕೆ ತಿರುಗಿರುವ ಹೋರಾಟವನ್ನು ಹತ್ತಿಕ್ಕುವ ಕೆಲಸಗಳು ನಡೆಯುತ್ತಿದ್ದು, ಈ ಬಾರಿ ಬೃಹತ್ ಹೋರಾಟಕ್ಕೆ ಸರಕಾರ ಯಾವ ರೀತಿ ಸ್ಪಂದಿಸಲಿದೆ ಎಂಬುದನ್ನು ಕಾದು ನೋಡಬೇಕು.

### ಬೇಡಿಕೆ ಈಡೇರುವ ಲಕ್ಷಣ ಕಾಣುತ್ತಿಲ್ಲ

ರೈತರು ಕೈಗಾರಿಕಾ ಪ್ರದೇಶಗಳಿಗೆ ಭೂ ಸ್ವಾಧೀನ ವಿರೋಧಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ನಡೆಸುತ್ತಿರುವ ಧರಣಿ 62 ನೇ ದಿನಕ್ಕೆ ಕಾಲಿಟ್ಟಿದೆ. ಪ್ರತಿನಿತ್ಯ ನಾನಾ ರೀತಿಯ ಹೋರಾಟ ನಡೆಸಲಾಗುತ್ತಿದೆ. ಹಸುಗಳನ್ನು ಸ್ಥಳದಲ್ಲೇ ಕಟ್ಟಿಹಾಕಿ ಪ್ರತಿಭಟನೆ ನಡೆಸಿದರೂ ಸರಕಾರ ಸ್ಪಂದಿಸುತ್ತಿಲ್ಲ. ಇತ್ತೀಚೆಗೆ ಜಿಲ್ಲಾಧಿಕಾರಿ ಕಚೇರಿ ಬಳಿ ಜಿಲ್ಲಾಉಸ್ತುವಾರಿ ಸಚಿವರು ಬಂದಿದ್ದ ವೇಳೆ ಸಚಿವರನ್ನು ಭೇಟಿಯಾಗುವ ವೇಳೆ ರೈತರು ಮತ್ತು ಪೊಲೀಸರ ನಡುವೆ ಸಂಘರ್ಷವೂ ನಡೆದಿತ್ತು. ಆನಂತರ ಜಿಲ್ಲಾಉಸ್ತುವಾರಿ ಸಚಿವರ ಜತೆ ರೈತ ಮುಖಂಡರು ಸಮಾಲೋಚನೆ ನಡೆಸಿದ್ದರಾದರೂ ರೈತರ ಬೇಡಿಕೆಗಳು ಈಡೇರುವ ಲಕ್ಷಣಗಳು ಕಾಣುತ್ತಿಲ್ಲ.

## ಅಂತರಾಳದಿಂದ.. EDITORIAL

# ಹಿಜಾಬ್ ಆದೇಶ ಹಿಂದಕ್ಕೆ ತಪ್ಪು ತಿದ್ದಿಕೊಂಡ ಸರಕಾರ




ಶಿಕ್ಷಣದ ಹಕ್ಕಿಗೆ ಸಂಬಂಧಿಸಿ ಈ ದೇಶದ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಬಿಜೆಪಿ ಸರಕಾರ ನೀಡಿದ ಆದೇಶವನ್ನು ಸಿದ್ದರಾಮಯ್ಯ ನೇತೃತ್ವದ ಸರಕಾರ ಹಿಂಪಡೆದಿದ್ದು ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಅಥವಾ ತಲೆವಸ್ತ್ರವನ್ನು ಧರಿಸಿ ಹಾಜರಾಗುವುದಕ್ಕೆ ಯಾವ ಅಡ್ಡಿಯೂ ಇಲ್ಲ ಎಂಬ ಹೊಸ ಆದೇಶವನ್ನು ಹೊರಡಿಸಿದೆ. ಹಿಜಾಬ್ ಜೊತೆ ಜೊತೆಗೇ ಜನಿವಾರಕ್ಕೂ ಮಾನ್ಯತೆಯನ್ನು ನೀಡಿದ್ದೇವೆ ಎಂದು ಸರಕಾರ ಹೇಳಿಕೊಂಡಿದೆ. ಸಾಂಪ್ರದಾಯಿಕ ಹಾಗೂ ಪದ್ಧತಿ ಆಧಾರಿತವಾದ ಸಂಕೇತಗಳನ್ನು ಧರಿಸುವಂತೆ ಯಾವುದೇ ವಿದ್ಯಾರ್ಥಿಯನ್ನು ಒತ್ತಾಯಿಸುವಂತಿಲ್ಲ. ಅದೇ ರೀತಿ ಸರಕಾರವು ಅನುಮತಿಸಿರುವ ಸೀಮಿತ ಸಾಂಪ್ರದಾಯಿಕ ಹಾಗೂ ಪದ್ಧತಿ ಸಂಕೇತಗಳನ್ನು ಬಲವಂತವಾಗಿ ತೆಗೆಯುವಂತೆಯೂ ಒತ್ತಾಯಿಸುವಂತಿಲ್ಲ. ಆದರೆ ಪರೀಕ್ಷಾ ಸಂದರ್ಭಗಳಲ್ಲಿ ರಾಷ್ಟ್ರ, ರಾಜ್ಯ ಮಟ್ಟದ ವಸ್ತ್ರಸಂಹಿತೆಯ ನಿಯಮಗಳನ್ನು ಸಂದರ್ಭೋಚಿತವಾಗಿ ಸಂಬಂಧಿಸಿದ ಪ್ರಾಧಿಕಾರಗಳು ಅಳವಡಿಸಿಕೊಳ್ಳಬೇಕು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಅಂದರೆ ಈ ಆದೇಶವು ದೈನಂದಿನ ಶಾಲಾ ಕಾಲೇಜುಗಳ ತರಗತಿಗಳನ್ನು ಗುರಿಯಾಗಿಟ್ಟು ಹೊರಡಿಸಲಾಗಿದೆ. ನೀಟ್ ಅಥವಾ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಯ ಸಂದರ್ಭದಲ್ಲಿ ಪರೀಕ್ಷಾ ಪ್ರಾಧಿಕಾರದ ಸೂಚನೆಗಳನ್ನು ಪಾಲಿಸಬೇಕಾಗುತ್ತದೆ. ರಾಜ್ಯ ಎಲ್ಲಾ ವರ್ಗ, ಜಾತಿ, ಸಮುದಾಯಗಳಿಗೆ ಶಿಕ್ಷಣ ತಲುಪುವಂತೆ ನೋಡಿಕೊಳ್ಳುವುದು ಸರಕಾರದ ಭಾಗವಾಗಿದ್ದು, ಅದರ ಭಾಗವಾಗಿ ಈ ಆದೇಶವನ್ನು ಹೊರಡಿಸಿದೆ. ಆದರೆ, ರಾಜಕಾರಣಿಗಳು, ಈ ಆದೇಶವನ್ನು ಈ ನಾಡಿನ ಮುಸ್ಲಿಂ ಮಹಿಳೆಯರಿಗೆ ನೀಡಿದ ಒಂದು ಸೌಲಭ್ಯ ಎಂದು ಬಿಂಬಿಸಲು ಪ್ರಯತ್ನಿಸುತಿರುವುದು ವಿಷಾದನೀಯವಾಗಿದೆ.

**ಹಿಜಾಬ್ ಅಥವಾ ತಲೆವಸ್ತ್ರ ಧರಿಸಿದ ವಿದ್ಯಾರ್ಥಿನಿಯರಿಗೆ ತರಗತಿಯೊಳಗೆ ಪ್ರವೇಶಿಸಲು ಅವಕಾಶವಿಲ್ಲ ಎನ್ನುವ ಆದೇಶವನ್ನು ಹೊರಡಿಸಿತು. ಆ ಆದೇಶಕ್ಕೆ ಶಾಲಾ ಸಮವಸ್ತ್ರದ ಕುರಿತಾಗಲಿ, ಶಿಕ್ಷಣದ ಕುರಿತಾಗಲಿ ಯಾವುದೇ ಕಾಳಜಿಯಿರಲಿಲ್ಲ.**

ಮಹಿಳೆಯರಿಗೆ ಶಿಕ್ಷಣವನ್ನು ನೀಡಿ ಅವರನ್ನು ಸಬಲರನ್ನಾಗಿ ಮಾಡುವುದಕ್ಕಾಗಿ ಸರಕಾರ ಈಗಾಗಲೇ ಹತ್ತು ಹಲವು ಯೋಜನೆಗಳನ್ನು ರೂಪಿಸುತ್ತಾ ಬಂದಿದೆ. ಅವರನ್ನು ಮನೆಯಿಂದ ಶಾಲೆ, ಕಾಲೇಜುಗಳ ಮೆಟ್ಟಿಲು ಹತ್ತುವಂತೆ ಮಾಡಲು ಕೋಟ್ಯಾಂತರ ರೂಪಾಯಿಯನ್ನು ವ್ಯಯಿಸಿದೆ. ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರು ಪಡೆಯುವ ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆಯಾದುದರಿಂದ ಶಾಲೆ, ಕಾಲೇಜುಗಳಿಗೆ ಮಹಿಳೆಯರನ್ನು ಹೆಚ್ಚು ಹೆಚ್ಚು ಆಕರ್ಷಿಸಲು ಬೇರೆ ಬೇರೆ ಯೋಜನೆಗಳನ್ನು ಆಂದೋಲನಗಳನ್ನು ಹಮ್ಮಿಕೊಂಡು ಬಂದಿದೆ. ಆದರೆ 2022ರಲ್ಲಿ ಬಿಜೆಪಿ ಸರಕಾರ ಸಮವಸ್ತ್ರದ ಹೆಸರಿನಲ್ಲಿ ಹಿಜಾಬ್ ಅಥವಾ ತಲೆವಸ್ತ್ರ ಧರಿಸಿದ ವಿದ್ಯಾರ್ಥಿನಿಯರಿಗೆ ತರಗತಿಯೊಳಗೆ ಪ್ರವೇಶಿಸಲು ಅವಕಾಶವಿಲ್ಲ ಎನ್ನುವ ಆದೇಶವನ್ನು ಹೊರಡಿಸಿತು. ಆ ಆದೇಶಕ್ಕೆ ಶಾಲಾ ಸಮವಸ್ತ್ರದ ಕುರಿತಾಗಲಿ, ಶಿಕ್ಷಣದ ಕುರಿತಾಗಲಿ ಯಾವುದೇ ಕಾಳಜಿಯಿರಲಿಲ್ಲ. ಶಾಲಾ ಕಾಲೇಜುಗಳನ್ನು ಧರ್ಮದ ಹೆಸರಿನಲ್ಲಿ ವಿಭಜಿಸುವುದು ಮತ್ತು ಒಂದು ನಿರ್ದಿಷ್ಟ ಧರ್ಮದ ಮಹಿಳೆಯರನ್ನು ಶಿಕ್ಷಣದಿಂದ ಹೊರಗಿಡುವುದು ಅವರ ಗುರಿಯಾಗಿತ್ತು. ಅದಾಗಲೇ ಕೊರೋನ, ಲಾಕ್‌ಡೌನ್ ಕಾರಣದಿಂದ ಸಾವಿರಾರು ವಿದ್ಯಾರ್ಥಿನಿಯರು ಶಾಲೆಯನ್ನು ಅರ್ಧದಲ್ಲೇ ತೊರೆದಿದ್ದರು. ಅವರನ್ನು ಮರಳಿ ಶಾಲೆಗೆ ಸೇರಿಸುವ ಜವಾಬ್ದಾರಿಯಿಂದ ನುಣುಚಿಕೊಂಡ ಅಂದಿನ ಸರಕಾರ ಕಷ್ಟ ನಷ್ಟಗಳನ್ನು ಎದುರಿಸಿ ಶಾಲೆಗೆ ಬರುತ್ತಿರುವ ವಿದ್ಯಾರ್ಥಿನಿಯರನ್ನು ಸಮವಸ್ತ್ರದ ಹೆಸರಿನಲ್ಲಿ ಹೊರ ಹಾಕಲು ಮುಂದಾಯಿತು. ವಿದ್ಯಾರ್ಥಿನಿಯರನ್ನು ಶಾಲೆಗೆ ಸೇರಿಸಲು ರೂಪಿಸಿದ ನೂರಾರು ಯೋಜನೆಗಳ ಉದ್ದೇಶವನ್ನೇ ಈ ಮೂಲಕ ರಾಜ್ಯ ಸರಕಾರ ಮಣ್ಣು ಪಾಲು ಮಾಡಿತು. ಶಿಕ್ಷಣಕ್ಕೆ ಪೂರಕವಾಗಿ ಸಮವಸ್ತ್ರವಿದೆಯೇ ಹೊರತು, ಸಮವಸ್ತ್ರಕ್ಕಾಗಿ ಶಿಕ್ಷಣವಲ್ಲ.

ಆದರೆ ಅಂದಿನ ಸರಕಾರ, ಸಮವಸ್ತ್ರ ಶಿಕ್ಷಣಕ್ಕಿಂತ ಮುಖ್ಯ ಎನ್ನುವ ವಿತಂಡ ಆದೇಶವನ್ನು ಹೊರಡಿಸಿತು. ಭಾರತದ ಸೇನೆಯಲ್ಲೂ ಸಮವಸ್ತ್ರವಿದೆ. ಆದರೆ ಅಲ್ಲಿ ಸಿಖ್ ಸೈನಿಕರಿಗೆ ತಲೆವಸ್ತ್ರ ಅಥವಾ ಪೇಟಾ ಧರಿಸಲು ಅವಕಾಶವಿದೆ. ಶಾಲೆ, ಕಾಲೇಜಿನಲ್ಲಿ ಸಮವಸ್ತ್ರ ಸೇನೆಗಿಂತಲೂ ಮುಖ್ಯವೇ ಎಂದು ಜನರು ಕೇಳುವಂತಾಯಿತು. ಇದೀಗ ರಾಜ್ಯ ಸರಕಾರ ಹೊಸದಾಗಿ ಹೊರಡಿಸಿರುವ ಆದೇಶ ಯಾವುದೋ ಒಂದು ನಿರ್ದಿಷ್ಟ ಸಮುದಾಯಕ್ಕೆ ನೀಡಿದ ಕೊಡುಗೆ ಖಂಡಿತ ಅಲ್ಲ. ತನ್ನದೇ ತಪ್ಪನ್ನು ಸರಕಾರ ತಿದ್ದಿಕೊಂಡಿದೆ.

## ರಾಮಾಯಣ



ತನ್ನ ಉದ್ದೇಶದಲ್ಲಿ ವಿಫಲನಾದ ರಾವಣನು ರಕ್ಕಸಿಯರಿಗೆ ಸೂಚನೆಯಿತ್ತು ವಾಪಸಾದುದು
ತನ್ನ ಉದ್ದೇಶದಲ್ಲಿ ವಿಫಲನಾದ ರಾವಣನು ರಕ್ಕಸಿಯರಿಗೆ ಸೂಚನೆಯಿತ್ತು ವಾಪಸಾದುದು

• ಹಿಂದಿನ ಸಂಚಿಕೆಯಿಂದ

### ಸುಂದರಕಾಂಡ

ನಿನ್ನೊಬ್ಬಳಿಂದ ನಿನ್ನ ಬಂಧುಗಳೆಲ್ಲರೂ ಸುಖವಾಗಿರುವಂತಾಗುತ್ತದೆ. ಕ್ಲಿ ಹೆಂಗಳೆಯರ ಮಧ್ಯೆ ಮಾಣಿಕ್ಕದಂತೆ ಮಿನುಗು. ಅದು ಬಿಟ್ಟು ಅಕಾರಣ ಮೌಢ್ಯದಿಂದ ಕೂಡಿರುವುದು ಸಲ್ಲದು. ದಃಖ ನಿನ್ನ ಗಾಡಿ, ಈ ನಿನ್ನ ಮೋಡಿ, ಈ ಜಾಣ್ಮೆ ಹ ನಲ್ಲೆ ಈ ಇಂಪು ಈ ತಂಪು, ಈ ತಳುಕು ಈ ಪಳುಕು ಬೇರಾರಲ್ಲಿಯೂ ಇಲ್ಲ; ಇಂತಹ ಚೆಲುವನ್ನು ವ್ಯರ್ಥಗೊಳಿಸಬೇಡ, ಸುಂದರಿಯೇ! ಧರೆಯಲ್ಲಿ ದೇಹವಿರುವುದೇ ಅತಿಶಯ, ಅದರಲ್ಲಿ ಯೌವನ ದುರ್ಲಭ, ಅದರಲ್ಲೂ ರೂಪಸಂಪತ್ತು, ಚಾತುರ್ಯ ದೊರೆಯುವುದು ಪೂರ್ವಪುಣ್ಯದ ಬಲದಿಂದ. ಇವೆಲ್ಲವೂ ಕೂಡಿದ್ದರೂ ಸಿರಿ ಸಿಕ್ಕುವುದು ಕಷ್ಟ ಅಂತಹುದು ದೊರಕಲು ಹಗಲಿರುಳೆನ್ನದೆ ಸುರುಚಿರ ಭೋಗವನ್ನು ಅನುಭವಿಸಬೇಕೇ ಹೊರತು ಕ್ಲೇಶಗೊಳ್ಳುವುದು ತಕ್ಕುದಲ್ಲ. ದೇವೇಂದನೇ ಮೊದಲಾದ ದಿಕ್ಪಾಲಕರೂ, ಪಾತಾಳದಲ್ಲಿರುವ ಬಲಿ ಮಯಾಸುರ ಮುಖ್ಯರಾದ ದಾನವರೂ ಯುದ್ಧದಲ್ಲಿ ನನ್ನ ಹೆಸರು ಕೇಳಿದರೇ ನಡುಗುತ್ತಾರೆ; ಅಂದ ಮೇಲೆ ವಾನರರೂ ನರರೂ ಯಾವ ಮಹಾ! ಸಮುದ್ರಮಧ್ಯದಲ್ಲಿನ ಪರ್ವತದಲ್ಲಿ ನನ್ನ

ಮಗ ಇಂದ್ರಜಿತುವು ಲಕ್ಷಕ್ಕಿಂತ ಮಿಗಿಲಾದ ಸಂಖ್ಯೆಯ ರಕ್ಕಸದಳದ ಮುಖ್ಯಸ್ಥ. ಇದನ್ನು ಕುರಿತು ಯೋಚಿಸು, ಮೂಲೋಕದ ಮಹಾಭಾಗ್ಯ ನಿನಗಾಗಿ ಕಾದಿದೆ! ಯಾರಿಗಾದರೂ ಕನಸಿನಲ್ಲಾದರೂ ಲಂಕೆಯನ್ನು ನೆನೆಸಿಕೊಳ್ಳಲು ಸಾಧ್ಯವೇ ಬೇಕಾದ ಕಡೆ ಹೋಗಿ ವಿಹರಿಸಲು ಮನೋವೇಗವನ್ನೂ ಮೀರಿಸುವ ವೇಗದ ಕುಬೇರನ ಪುಷ್ಪಕವೇ ಕಾಯುತ್ತಿದೆ. ನನ್ನ ವಶವಾಗಿ ದೇವತಾಸ್ತ್ರೀಯರಿಗೆ ಒಡತಿಯಾಗಿ, ಕಾಮಸಂತೃಪ್ತಿ ಹೊಂದು. ಎಲ್ಲಾ ಸೌಭಾಗ್ಯಗಳನ್ನೂ ನಿನಗೆ ಕೊಟ್ಟ ಬ್ರಹ್ಮನು, ಚಂದ್ರನಲ್ಲಿ ಕಳಂಕವಿಟ್ಟಂತೆ, ಒಂದು ಕೊರೆಯನ್ನುಂಟುಮಾಡಿದ, ಅದೆಂದರೆ ಮನುಷ್ಯನೂ, ನಿರ್ಧನಿಕನೂ, ಅಬಲನೂ, ಬಂಧುಬಾಂಧವರನ್ನು ತೊರೆದು ಕಾಡಿನಲ್ಲಿ ಅಲೆಯುವವನೂ ಆದ ಮೂರ್ಖನನ್ನು ಗಂಡನನ್ನಾಗಿಸಿದ್ದು. ಅಂತಹವನನ್ನು ನೆನೆಯುತ್ತ ದೇಹವನ್ನು ಹಿಂಸಿಸಿಕೊಳ್ಳುವುದು ತರವಲ್ಲ, ನನ್ನ ನಗರದ ಕಡೆ ನೋಡುವ ಶಕ್ತರಾರಾದರೂ ಜಗತ್ತಿನಲ್ಲಿರುವರೇ

''ಈ ನಿನ್ನ ಕಷ್ಟವನ್ನು ಯಾರೂ ನೀಗಿಸಲಾರರು, ಅಂಥದ್ದರಲ್ಲಿ ಕಾಡಿಗನಾದ ರಾಮ, ಅವನ ತಮ್ಮ ಲಕ್ಷ್ಮಣರು ಹೀಗೆ ಮಾಡಲು ಶಕ್ಕವೇ ಹಸಿವು ಬಾಯಾರಿಕೆಗಳಿಂದ ತಲ್ಲಣಿಸುತ್ತ, ರಾಕ್ಷಸರ ಹಿಂಸೆಯನ್ನು ತಾಳಿಕೊಂಡು ಬಾಳಲೇನು ಸುಖ ಅದರಿಂದ ನನ್ನ ನುಡಿಯು ಹಿತಕರವೆಂದು ಬಗೆದು, ಅದರಂತೆ ನಡೆದು ಸುಖವಾಗಿರು. ರಾಮನು ಬಂದು ನಿನ್ನನ್ನು ಕಾಣುವುದು ಅತಿ ದುಸ್ತರ, ಮಹಾ ಶಕ್ತಿವಂತರೇ ಈ ನಗರಕ್ಕೆ ಬರುವುದು ದುಷ್ಕರ, ಅಂತಹುದರಲ್ಲಿ ಸಾಮಾನ್ಯ ಮನುಷ್ಯನಿಗೆ ಅದು ಸಾಧ್ಯವೇ ನಿನ್ನ ಮುಗ್ಧತೆಯನ್ನು ಕಳಚಿಟ್ಟು, ಹರುಷವನ್ನುಟ್ಟು ಈ ಮಹಾಸಾಮ್ರಾಜ್ಯದ ಒಡೆತನವನ್ನು ಅನುಭವಿಸಿ, ಪ್ರೇಮದಿಂದ ನನ್ನನ್ನಾಳುವಳೆಂಬ ಕೀರ್ತಿಯನ್ನು ಗಳಿಸಿ ಸಂತಸದಿಂದಿರು, ತೊಂಡೆವಣ್ಣುಟಿಯವಳೇ! ನಿನ್ನನ್ನು ನೋಡಿದಂದಿನಿಂದ ನನಗೆ ಹೊಸ ಹುರುಪು ಸಮನಿಸಿದೆ; ಮಹಾ ಚೆಲುವೆಯರೆನ್ನಿಸುವ ಸಾವಿರಾರು ಸುದತಿಯರನ್ನು ನನ್ನ ಮನಸ್ಸು ಒಲ್ಲದಿದೆ; ಬಿಸಜಾಕ್ಷಿಯೇ, ನನ್ನ ಮೇಲೆ ಕೃಪೆಯಿಟ್ಟು ನನ್ನ ನುಡಿಗೆ ಒಪ್ಪಿ ಸುಖವನ್ನು ಸಂಪಾದಿಸು. ರಾಮನನ್ನು ನೆನೆಸಿಕೊಂಡು ಹಂಬಲಿಸುವುದು ಕನ್ನಡಿಯ ಗಂಟಿಗೆ ಆಸೆಪಟ್ಟಂತೆ!

ಮುಂದುವರಿಯುವುದು...

# ಪುರೋಹಿತರು



ನಾ ಕಂಡಂತೆ

ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

**ಪುರೋಹಿತ ಎನ್ನುವ ಪದ ನಿರ್ದಿಷ್ಟ ಸಮುದಾಯವನ್ನು ಸೂಚಿಸುವಂಥದಲ್ಲ. ಇದೊಂದು ಉಪಾಧಿ. ಇದೊಂದು ಗುರುತು. ಪ್ರಾಚೀನ ಗ್ರಂಥಗಳಲ್ಲಿ ವೇದಮಂತ್ರಗಳಲ್ಲಿ ಇದಕ್ಕೆ ಏನು ಅರ್ಥಕೊಟ್ಟಿದ್ದಾರೆ ಎಂಬುದನ್ನು ತಿಳಿದುಕೊಳ್ಳೋಣ।**

**ಪುರಃ ಧೀಯತೇ :-** ಪುರಃ ಎಂಬ ಪದಕ್ಕೆ ಮುಖ್ಯಾರ್ಥ ದೇಹ. ಧೀಯತೇ ಎಂದರೇ ದೇಹಕ್ಕೆ ಚೈತನ್ಯಪ್ರಾಯವಾಗಿ ಯಾವುದು ಇರುವುದೋ ಅದು. ಆದ್ದರಿಂದ ಚೈತನ್ಯಯುಕ್ತವಾದ ದೇಹವನ್ನು ಸಾಧನಾರೂಪದಿಂದ ಉಪಯೋಗಿಸಿಕೊಂಡು ಅಭ್ಯುದಯ ನಿಶ್ರೇಯಸ ಮಾರ್ಗವನ್ನು ತೋರಿಸಿಕೊಡುವನೋ ಅವನೇ ಪುರೋಹಿತ.


ದೇವತಾಕಾರ್ಯಗಳಲ್ಲಿ ಮಂಚೂಣಿಯಲ್ಲಿ ನಿಂತು ವಿಧಿಪೂರ್ವಕವಾಗಿ ಶಾಸ್ತ್ರಕರ್ಮಗಳನ್ನು ನಡೆಸುವವನೇ ಪುರೋಹಿತ .ಅರ್ಥಾತ್ ಯಜಮಾನನು ಸ್ವರ್ಗಲೋಕ ಕಾಮ್ಯನಾದರೇ ಜ್ಯೋತಿಷ್ಟೋಮ ಯಜ್ಞವನ್ನೂ , ಗೋವುಗಳೇ ಮುಂತಾದ ಪಶುಗಳನ್ನು ಪಡೆಯುವ ಇಚ್ಛೆಯಿದ್ದರೇ ಚಿತ್ತಿ ಎಂಬ ಯಜ್ಞವನ್ನೂ ಹಾಗೂ ಮುಂತಾದ ಇಹಪರಲೋಕ ಕಾಮ್ಯಗಳನ್ನು ಇಟ್ಟುಕೊಂಡವನು ಆಯಾ ದೇವತೆಗಳ ಆರಾಧನೆಯನ್ನು ಯಜ್ಞಯಾಗಾದಿಗಳ ಮೂಲಕವೇ ಪಡೆದುಕೊಳ್ಳಬೇಕು.

ಇಂಥ ಕಾಮ್ಯಕರ್ಮಗಳಲ್ಲಿ ಸತ್ಯವಾಚಿಯಾದ, ಅಂತಃಕರಣಶುದ್ಧಿಯುಳ್ಳ , ವೇದಗಳನ್ನೂ ಧರ್ಮಸೂತ್ರ,ಗೃಹ್ಯಸೂತ್ರಗಳನ್ನೂ ಆಮೂಲಾಗ್ರ ಅಧ್ಯಯನದಿಂದ ಮನನಮಾಡಿಕೊಂಡ, ಸದಾಚಾರವುಳ್ಳ ,ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಪರೋಪಕಾರ ಹಾಗೂ ಋಜುಮಾರ್ಗದಲ್ಲಿಯೇ ನಿರತನಾಗಿರುವ, ವೇದಗಳನ್ನೂ ವೇದಾಂಗಗಳ ಮೂಲತತ್ತ್ವವನ್ನೂ ತಪಸ್ಸಿನಿಂದ ತಿಳಿದುಕೊಂಡಂಥ ಯಾವಾತನು ತಾನೇ ಮಂಚೂಣಿಯಲ್ಲಿ ನಿಂತು ವಿಧಿಪೂರ್ವಕವಾಗಿ ಶಾಸ್ತ್ರಕರ್ಮಗಳನ್ನು ಯಜಮಾನನ ಅಭ್ಯುದಯದಕ್ಕಾಗಿ ನಡೆಸಿಕೊಡುವನೋ ಅವನೇ ಪುರೋಹಿತ ಎನಿಸಿಕೊಳ್ಳುತ್ತಾನೆ ಎಂಬುದಾಗಿ ಚಾಣಕ್ಯನು ತನ್ನ ಕವಿಕಪಲತಾ ಎಂಬ ಗ್ರಂಥದಲ್ಲಿ ಹೇಳಿದ್ದಾನೆ. ಈ ರೀತಿಯಾಗಿ ವೇದಗಳು ಸಾರುತ್ತಿರುವ ಧರ್ಮವನ್ನೇ ಸದಾಕಾಲಕ್ಕೂ ಚಿಂತಿಸುತ್ತಿರುವ, ಸಮಸ್ತ ಪ್ರಜೆಗಳ ಅವರನ್ನಾಳುವ ರಾಜರುಗಳ ಒಳಿತನ್ನು ಅನವರತ ಯೋಚಿಸುವವನೇ ರಾಜಪುರೋಹಿತ. ಸಕಲ ಗುಣವಂತನಾದ , ಮಂತ್ರ ವಿದ್ಯೆಗಳನ್ನು ತಿಳಿದುಕೊಂಡು ತಾನೂ ಧರ್ಮಾತ್ಮನಾಗಿ, ರಾಜರನ್ನೂ ಪ್ರಜೆಗಳನ್ನೂ ಧರ್ಮ ಮಾರ್ಗದಲ್ಲಿ ಕರೆದೊಯ್ಯುವ ಬ್ರಾಹ್ಮಣನಿಂದಲೇ ಪುನಃ ಪುನಃ ಸತ್ಕಾರ್ಯಗಳನ್ನು ಯಜಮಾನನು ಮಾಡಿಸಿಕೊಳ್ಳಬೇಕು. ಅರ್ಥಾತ್ ಈ ಸಂದರ್ಭದಲ್ಲಿ ಪುರೋಧಾ ಎಂಬ ಪದಕ್ಕೆ ''ಕುಲಪುರೋಹಿತ ಅಥವಾ ಆಸ್ಥಾನ ರಾಜಪುರೋಹಿತ ಎಂಬುದಾಗಿ ವಾಚಸ್ಪತ್ಯಾಚಾರ್ಯರು ನಿರ್ವಚನ ಮಾಡಿದ್ದಾರೆ. ಇದಲ್ಲದೇ ಇಂಥ ಗುಣವಂತನಾದ ಬ್ರಾಹ್ಮಣನ ಮಾರ್ಗದರ್ಶನದಲ್ಲಿಯೇ ರಾಜರುಗಳ ಜಯಾಪಜಯ, ಇತರ ಆಗುಹೋಗುಗಳನ್ನು ಇತಿಹಾಸದಲ್ಲಿ ಕಂಡಿದ್ದೇವೆ. ಹೀಗೆ ಬೋಧಾಯನಾಚಾರ್ಯರು ಹೇಳಿದ್ದಾರೆ.

ವೇದತ್ರಯಗಳನ್ನೂ, ರಾಜ್ಯಭಾರ, ಶಾಸನಾದಿ ದಂಡನೀತಿಗಳನ್ನೂ ಪರಿಣಿತನಾದವನೇ ಪುರೋಹಿತನೆಂಬುದಾಗಿ ಅಗ್ನಿಪುರಾಣದಲ್ಲಿ ಹೇಳಿದೆ. ಆತ್ಯಂತಿಕವಾದ ಸಹಿಷ್ಣುತತೆಯೇ ಪುರೋಹಿತನ ಆದ್ಯ ಧರ್ಮ ಎಂಬುದಾಗಿ ಪುರೋಹಿತ ಧರ್ಮದಲ್ಲಿ ಹೇಳಿದೆ.

ನಿತ್ಯನೈಮಿತ್ತಿಕ ಹಾಗೂ ಕಾಮ್ಯಕರ್ಮಗಳ ದೃಷ್ಟ ಮತ್ತು ಅದೃಷ್ಟ ಫಲಗಳನ್ನು ಆಯಾಕರ್ಮಗಳಿಗನುಗುಣವಾಗಿ ಯಾವಾತನು ತಿಳಿಸಿಕೊಡುತ್ತಾನೋ ಅವನೇ ಪುರೋಹಿತ ಎಂಬುದಾಗಿ ಮೀಮಾಂಸಾ ದಿಗ್ಗಜರಾದ ಕುಮಾರಿಲ ಭಟ್ಟರು ಹೇಳಿದ್ದಾರೆ. ಯಾವಾತನು ವೈದ್ಯಶಾಸ್ತ್ರದಲ್ಲಿ ನುರಿತನಾದವನೋ, ತನ್ನ ಚಿಕಿತ್ಸೆಯಿಂದ ಪ್ರಜೆಗಳ ಹಾಗೂ ರಾಜರುಗಳ ''ಪುರ'' ಅರ್ಥಾತ್ ದೇಹದ ಆರೋಗ್ಯವನ್ನು ಕಾಪಾಡುತ್ತಾನೋ ಅಂಥ ವೈದ್ಯನೂ ಪುರೋಹಿತನೇ. ಹೀಗೆಂದು ಸುಶ್ರುತಮಹರ್ಷಿಯು ತನ್ನ ಆಯುರ್ವೇದ ಸೂತ್ರಗಳಲ್ಲಿ ಹೇಳಿದ್ದಾನೆ. ಹೀಗೆ ಪುರೋಹಿತ ಪದವು ವಿಸ್ತೃತ ವ್ಯಾಖ್ಯಾನ ಹೊಂದಿದ್ದು, ಪ್ರತಿಯೊಂದು ಧರ್ಮದಲ್ಲೂ ಈ ಕರ್ತವ್ಯಗಳನ್ನು ನಿರ್ವಹಿಸುವವರನ್ನು ಆಯಾ ದೇಶಭಾಷೆಗಳಲ್ಲಿ ಪುರೋಹಿತರೆಂದೇ ಕರೆಯಲಾಗಿದೆ.

ಪ್ರಜೆಗಳನ್ನು ಪ್ರೀತಿಯಿಂದ ಪರಿಪಾಲಿಸಬೇಕಾದ ರಾಜ ತನ್ನ ಕರ್ತವ್ಯವನ್ನು ಉಪೇಕ್ಷಿಸಿ ದಬ್ಬಾಳಿಕೆ ನಡೆಸಿದರೆ ಅದನ್ನು 'ಸರ್ವಾಧಿಕಾರ' ಎಂದು ಕರೆಯಲಾಗುತ್ತದೆ. ಹಾಗೆಯೇ, ಪುರೋಹಿತ ವರ್ಗ ತನ್ನ ಕರ್ತವ್ಯವಾದ ಸಕಲ ಜನಹಿತದ ವಿಶಾಲ ಮನೋಭಾವ ಬಿಟ್ಟು ಪಕ್ಷಪಾತ ಮತ್ತು ಹೇರಿಕೆಯ ಧೋರಣೆ ತೋರಿದರೆ ಅದನ್ನು 'ಪುರೋಹಿತಶಾಹಿ' ಎಂದು ಕರೆಯುವ ರೂಢಿ ಇದೆ.



# ಟೊಮೆಟೊ ದುಬಾರಿ ವ್ಯರ್ಥ ಮಾಡಬೇಡಿ!



ಬೇಸಿಗೆಯ ಹೆಚ್ಚಿನ ಉಷ್ಣತೆಯು ನಮ್ಮ ದೇಹದ ಮೇಲೆ ಮಾತ್ರವಲ್ಲದೆ ನಮ್ಮ ಅಡುಗೆಮನೆಯಲ್ಲಿ ಸಂಗ್ರಹಿಸಲಾದ ತರಕಾರಿಗಳ ಮೇಲೂ ಪರಿಣಾಮ ಬೀರುತ್ತದೆ! ಹೌದು ಅತಿಯಾದ ಉರಿಬಿಸಿಲು ಹಾಗೂ ವಾತಾವರಣದ ತೇವಾಂಶದ ಕಾರಣಗಳಿಂದಾಗಿ ಅಡುಗೆ ಮನೆಯಲ್ಲಿ ಇಟ್ಟಿರುವ ತರಕಾರಿಗಳು ಬೇಗನೆ ಹಾಳಾಗುತ್ತವೆ.

ಅದರಲ್ಲೂ ಬೇಸಿಗೆಯ ಸಮಯ ಟೊಮೆಟೊಗಳು ಬೇಸಿಗೆಯ ಉರಿ ಬಿಸಿಲಿಗೆ, ಬಿಸಿಯಾದ ವಾತಾವರಣದಲ್ಲಿ ಬಹಳ ಬೇಗನೇ ಮೃದುವಾಗಬಹುದು ಮತ್ತು ಅಲ್ಲಿಯೇ ಕೊಳೆಯ ಬಹುದು.

ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ದುಬಾರಿ ಹಣಕೊಟ್ಟು ತಂದಿರುವ ಟೊಮೆಟೊ ಹಣ್ಣುಗಳು ಹೀಗೆ ಹಾಳಾಗುವುದನ್ನು ನೋಡಿದರೆ, ಮನಸ್ಸಿಗೆ ಬೇಜಾರಾಗುವುದು ಸಹಜ. ಪ್ರಸ್ತುತ ಇಂದಿನ ಲೇಖನದಲ್ಲಿ ಟೊಮೆಟೊ ಹಣ್ಣುಗಳು ಬೇಗನೇ ಹಾಳಾಗದಂತೆ ದೀರ್ಘ ಕಾಲದವರೆಗೆ ಹೇಗೆ ಸಂಗ್ರಹಿಸುವುದು ಎಂಬುದನ್ನು ನೋಡೋಣ.

ಮೊದಲನೆಯದಾಗಿ, ಪ್ಲಾಸ್ಟಿಕ್ ಚೀಲಗಳಲ್ಲಿ ಟೊಮೆಟೊಗಳನ್ನು ಎಂದಿಗೂ ಸಂಗ್ರಹಿಸಬೇಡಿ. ಇದು ತೇವಾಂಶವನ್ನು ಹಿಡಿದಿಟ್ಟುಕೊಳ್ಳುತ್ತದೆ ಮತ್ತು ಅವು ವೇಗವಾಗಿ ಕೊಳೆಯಲು ಕಾರಣವಾಗುತ್ತದೆ.



**ತೊಳೆದು ಸಂಗ್ರಹಿಸಬೇಡಿ**

**ಬಳಕೆಗೆ ಸ್ವಲ್ಪ ಮೊದಲು ಮಾತ್ರ ಟೊಮೆಟೊಗಳನ್ನು ತೊಳೆಯಿರಿ. ಅಲ್ಲದೆ, ಟೊಮೆಟೊಗಳನ್ನು ಕಾಂಡದ ಬದಿಯಲ್ಲಿ ಸಂಗ್ರಹಿಸುವುದರಿಂದ ಅವುಗಳ ಶೆಲ್ಫ್ ಜೀವಿತಾವಧಿ ಹೆಚ್ಚಾಗುತ್ತದೆ ಮತ್ತು ಅವು ಹೆಚ್ಚು ಕಾಲ ತಾಜಾವಾಗಿರುತ್ತವೆ.**

**ಯಾವಾಗಲೂ ತೆರೆದ ಸ್ಥಳದಲ್ಲಿ ಇರಿಸಿ:** ಟೊಮೆಟೊಗಳನ್ನು ಯಾವಾಗಲೂ ತೆರೆದ ಮತ್ತು ಗಾಳಿಯಾಡುವ ಸ್ಥಳದಲ್ಲಿ ಇರಿಸಿ, ಇದರಿಂದ ಗಾಳಿಯ ಸರಿಯಾದ ಪ್ರಸರಣವನ್ನು ಕಾಪಾಡಿಕೊಳ್ಳಬಹುದು. ಇನ್ನು ಟೊಮೆಟೊಗಳನ್ನು ಫ್ರಿಡ್ಜ್‌ನಲ್ಲಿ ಇಡುವುದರಿಂದ, ಈ ಹಣ್ಣಿನ ಮೇಲ್ಮೈ ಸಿಪ್ಪೆ ಅಲ್ಲಿಗೆಯೆ ಸುಕ್ಕುಗಟ್ಟಿ ಹೋಗುತ್ತದೆ.

ಅಲ್ಲದೆ ಇದರ ರುಚಿ ಪರಿಮಳ ಕೂಡ ಹೋಗುತ್ತದೆ! ಮನೆಯ ಕಿಚನ್ ಹತ್ತಿರ ಇರುವಂತೆ ರೆದ ಗಾಳಿಯಲ್ಲಿ ಇಡುವುದರಿಂದ ಅವುಗಳ ನೈಸರ್ಗಿಕ ಸುವಾಸನೆ ಮತ್ತು ರುಚಿ ಹಾಗೆಯೇ ಉಳಿಯುತ್ತದೆ.


**ನೇರ ಸೂರ್ಯನ ಬೆಳಕಿನಿಂದ ದೂರವಿಡಿ:** ಟೊಮೆಟೊ ಹಣ್ಣುಗಳು ಸರಿಯಾಗಿ ಹಣ್ಣಾಗದಿದ್ದರೆ ಅವುಗಳನ್ನು ಕೋಣೆಯ ಉಷ್ಣಾಂಶದಲ್ಲಿ ಮತ್ತು ನೇರ ಸೂರ್ಯನ ಬೆಳಕಿನಿಂದ ದೂರವಿಡಿ. ಆದಷ್ಟು ಬಲಿಯದ ಅಥವಾ ಹಸಿರು ಟೊಮೆಟೊ ಹಣ್ಣಾಗಿಸಲು ನೇರ ಸೂರ್ಯನ ಬೆಳಕಿನಿಂದ ದೂರವಿಟ್ಟು ಕೋಣೆಯ ಉಷ್ಣಾಂಶದಲ್ಲಿ (ಸಾಮಾನ್ಯ ತಾಪಮಾ ನದಲ್ಲಿ) ಇಡುವುದು ಉತ್ತಮ ವಿಧಾನ.

**ಸಂಪೂರ್ಣವಾಗಿ ಮಾಗಿದ ಟೊಮೆಟೊ:** ಟೊಮೆಟೊಗಳು ಸಂಪೂರ್ಣವಾಗಿ ಹಣ್ಣಾದ ನಂತರ, ನೀವು ಅವುಗಳನ್ನು ರೆಫ್ರಿ ಜರೇಟರ್‌ನಲ್ಲಿ ಸಂಗ್ರಹಿಸಬಹುದು. ಆದಾಗ್ಯೂ, ಅವುಗಳನ್ನು ಸಂಗ್ರಹಿಸುವ ಮೊದಲು ಅವುಗಳನ್ನು ತೊಳೆಯುವುದನ್ನು ತಪ್ಪಿಸಿ, ಏಕೆಂದರೆ ತೇವಾಂಶವು ಅವು ವೇಗವಾಗಿ ಹಾಳಾಗಲು ಕಾರಣವಾಗಬಹುದು. ನೆನಪಿಡಿ ಟೊಮೆಟೊಗಳನ್ನು ಫ್ರಿಡ್ಜ್‌ನಲ್ಲಿ ಅಥವಾ ರೆಫ್ರಿಜರೇಟರ್‌ನಲ್ಲಿಡುವ ಮುನ್ನ ಅವು ಸಂಪೂರ್ಣವಾಗಿ ಹಣ್ಣಾಗಿರುವುದನ್ನು ಖಚಿತಪಡಿಸಿಕೊಳ್ಳಿ.

# ಇತ್ತೀಚೆಗೆ ಯುವಕರು ಅಧಿಕ ರಕ್ತದೊತ್ತಡದಿಂದ ಯಾಕೆ ಬಳಲುತ್ತಿದ್ದಾರೆ?



**ಇಂದಿನ ವೇಗದ ಜೀವನಶೈಲಿಯಲ್ಲಿ ವಿವಿಧ ಕಾಯಿಲೆಗಳು ಹೆಚ್ಚಾಗಿ ಕಂಡುಬರುತ್ತಿವೆ. ಬೊಜ್ಜು, ಮಧುಮೇಹ ಮತ್ತು ಹೃದಯ ಕಾಯಿಲೆಗಳು ಸಾಮಾನ್ಯವಾಗಿದೆ. ಇದಲ್ಲದೆ ಅಧಿಕ ರಕ್ತದೊತ್ತಡದ ಸಮಸ್ಯೆಯೂ ಹೆಚ್ಚಾಗಿ ಕಂಡುಬರುತ್ತಿದೆ. ಅಧಿಕ ಬಿಪಿ ಸಮಸ್ಯೆಗಳು ಈ ಹಿಂದೆ ಮುಖ್ಯವಾಗಿ ವಯಸ್ಸಾದವರಲ್ಲಿ ಕಂಡುಬರುತ್ತಿತ್ತು ಆದರೆ ಈಗ ಕಿರಿಯ ವ್ಯಕ್ತಿಗಳು ಸಹ ಈ ಸ್ಥಿತಿಗೆ ಬಲಿಯಾಗುತ್ತಿದ್ದಾರೆ. ಅನಾರೋಗ್ಯಕರ ಜೀವನಶೈಲಿ, ಕಳಪೆ ಆಹಾರ ಪದ್ಧತಿ ಮತ್ತು ಒತ್ತಡವು ಈ ಪ್ರವೃತ್ತಿಯ ಹಿಂದಿನ ಪ್ರಮುಖ ಅಂಶಗಳಾಗಿವೆ ಎಂದು ತಜ್ಞರು ಹೇಳುತ್ತಾರೆ.**



ಅತಿಯಾದ ಉಪ್ಪು ಮತ್ತು ಜಂಕ್ ಫುಡ್ ಸೇವನೆ, ದೈಹಿಕ ಚಟುವಟಿಕೆಯ ಕೊರತೆ, ಬೊಜ್ಜು, ಧೂಮಪಾನ, ಮದ್ಯಪಾನ, ಕಳಪೆ ನಿದ್ರೆ, ದೀರ್ಘಕಾಲದ ಒತ್ತಡದಂತಹ ಅನಾರೋಗ್ಯಕರ ಜೀವನಶೈಲಿ ಅಭ್ಯಾಸಗಳಿಂದಾಗಿ 20 ಮತ್ತು 30 ರ ಹರೆಯದ ಜನರಲ್ಲಿ ಅಧಿಕ ರಕ್ತದೊತ್ತಡ ಹೆಚ್ಚುತ್ತಿದೆ. ದೀರ್ಘ ಕೆಲಸದ ಸಮಯ, ಸ್ಕ್ರೀನ್ ವ್ಯಸನ ಮತ್ತು ಕುಳಿತುಕೊಳ್ಳುವ ದಿನಚರಿಗಳು ಕಿರಿಯ ಜನಸಂಖ್ಯೆಯಲ್ಲಿ ಹೃದಯದ ಆರೋಗ್ಯದ ಮೇಲೆ ಮೌನವಾಗಿ ಪರಿಣಾಮ ಬೀರುತ್ತಿವೆ ಎನ್ನುತ್ತಾರೆ ಬೆಂಗಳೂರಿನ ಹೆಣ್ಣೂರು ರಸ್ತೆಯಲ್ಲಿರುವ ಸ್ಪರ್ಶ ಆಸ್ಪತ್ರೆಯ ಇಂಟರ್ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ.ಮಹಾದೇವ ಸ್ವಾಮಿ ಬಿ.

**ರಕ್ತದೊತ್ತಡವನ್ನು ಅಪಾಯಕಾರಿಯನ್ನಾಗಿಸುವ ಅಂಶಗಳು**

ಅಧಿಕ ರಕ್ತದೊತ್ತಡವನ್ನು ಅಪಾಯಕಾರಿಯನ್ನಾಗಿ ಮಾಡುವ ಅಂಶವೆಂದರೆ ಹೃದಯಾಘಾತ, ಪಾರ್ಶ್ವವಾಯು ಅಥವಾ ಮೂತ್ರಪಿಂಡ ಕಾಯಿಲೆಯಂತಹ ಗಂಭೀರ ತೊಡಕುಗಳು ಸಂಭವಿಸುವವರೆಗೆ ಅದು ಯಾವುದೇ ಲಕ್ಷಣಗಳನ್ನು ತೋರಿಸುವುದಿಲ್ಲ.

ಯುವ ವಯಸ್ಕರಲ್ಲಿಯೂ ಸಹ ನಿಯಮಿತ ರಕ್ತದೊತ್ತಡ ಮೇಲ್ವಿಚಾರಣೆ ಅತ್ಯಂತ ಮುಖ್ಯವಾಗಿದೆ. ದೈನಂದಿನ ವ್ಯಾಯಾಮ, ಸಮತೋಲಿತ ಆಹಾರ, ಒತ್ತಡ ನಿರ್ವಹಣೆ, ಸಾಕಷ್ಟು ನಿದ್ರೆ ಮತ್ತು ತಂಬಾಕನ್ನು ತಪ್ಪಿಸುವುದು ಸೇರಿದಂತೆ ಸರಳ ಜೀವನಶೈಲಿಯ ಬದಲಾವಣೆಗಳು ಅಪಾಯವನ್ನು ಗಮನಾರ್ಹವಾಗಿ ಕಡಿಮೆ ಮಾಡಬಹುದು. ಆರಂಭಿಕ ಅರಿವು ಮತ್ತು ಸಕಾಲಿಕ ಹಸ್ತಕ್ಷೇಪವು ಯುವಕರಲ್ಲಿ ದೀರ್ಘಕಾಲೀನ ಹೃದಯರಕ್ತನಾಳದ ತೊಂದರೆಗಳನ್ನು ತಡೆಗಟ್ಟುವಲ್ಲಿ ಪ್ರಮುಖವಾಗಿದೆ.

**ದೈಹಿಕ ಚಟುವಟಿಕೆಯ ಕೊರತೆ:** ಇತ್ತೀಚಿನ ದಿನಗಳಲ್ಲಿ ಜನರು ದೀರ್ಘಕಾಲದವರೆಗೆ ಕುಳಿತುಕೊಳ್ಳುತ್ತಾರೆ ಎಂದು ವೈದ್ಯರು ಗಮನಿಸಿದರು. ಅವರು ತಡರಾತ್ರಿಯವರೆಗೆ ತಮ್ಮ ಮೊಬೈಲ್ ಫೋನ್‌ಗಳನ್ನು ಬಳಸುತ್ತಾರೆ ಮತ್ತು ಅವರ ದೈಹಿಕ ಚಟುವಟಿಕೆಯ ಮಟ್ಟವೂ ಕಡಿಮೆಯಾಗಿದೆ. ಈ ಅಭ್ಯಾಸಗಳು ಕ್ರಮೇಣ ರಕ್ತನಾಳಗಳು ಮತ್ತು ಹೃದಯದ ಮೇಲೆ ಒತ್ತಡವನ್ನು ಬೀರುತ್ತವೆ. ನಿರ್ದಿಷ್ಟವಾಗಿ ಹೇಳುವುದಾದರೆ, ಜಂಕ್ ಫುಡ್, ಅತಿಯಾದ ಉಪ್ಪು, ಸಂಸ್ಕರಿಸಿದ ಆಹಾರಗಳು ಮತ್ತು ಸಕ್ಕರೆ ಪದಾರ್ಥಗಳ ಸೇವನೆಯು ಅಧಿಕ ರಕ್ತದೊತ್ತಡದ ಸಮಸ್ಯೆಯನ್ನು ಉಲ್ಬಣಗೊಳಿಸುತ್ತಿದೆ.

**ತೂಕ ಹೆಚ್ಚಾಗುವುದು**

ತೂಕ ಹೆಚ್ಚಾಗುವುದು ಮತ್ತು ಹೊಟ್ಟೆಯ ಸುತ್ತ ಕೊಬ್ಬು ಸಂಗ್ರಹವಾಗುವುದು ಅಧಿಕ ರಕ್ತದೊತ್ತಡಕ್ಕೆ ಪ್ರಮುಖ ಕಾರಣವಾಗಿದೆ. ಚಿಕ್ಕ ವಯಸ್ಸಿನಲ್ಲಿ, ಮಧುಮೇಹ, ಥೈರಾಯ್ಡ್ ಅಸ್ವಸ್ಥತೆಗಳು ಮತ್ತು ಹಾರ್ಮೋನುಗಳ ಅಸಮತೋಲನದಂತಹ ಪರಿಸ್ಥಿತಿಗಳು ರಕ್ತದೊತ್ತಡದ ಮಟ್ಟಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ.

**ನಿದ್ರೆಯ ಕೊರತೆ**

ಹೆಚ್ಚುವರಿಯಾಗಿ, ದೀರ್ಘಕಾಲದ ಒತ್ತಡ ಮತ್ತು ಸಾಕಷ್ಟು ನಿದ್ರೆಯ ಕೊರತೆಯು ರಕ್ತದೊತ್ತಡದ ಮಟ್ಟವನ್ನು ಹೆಚ್ಚಿಸಲು ಕಾರಣವಾಗುತ್ತದೆ ಎಂದು ಅವರು ವಿವರಿಸಿದರು. ನಮ್ಮ ದೇಹವು ನಿರಂತರ ಒತ್ತಡದಲ್ಲಿದ್ದಾಗ, ಒತ್ತಡದ ಹಾರ್ಮೋನುಗಳ ಮಟ್ಟವು ಏರುತ್ತದೆ, ಇದು ಹೃದಯ ಬಡಿತ ಮತ್ತು ರಕ್ತದೊತ್ತಡ ಎರಡರ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ. ಇದಲ್ಲದೆ, ಧೂಮಪಾನ, ಮದ್ಯಪಾನ ಮತ್ತು ಅತಿಯಾದ ಕೆಫೀನ್ ಸೇವನೆಯು ಅಪಾಯವನ್ನು ಹೆಚ್ಚಿಸುತ್ತದೆ.

**ದೇಹಕ್ಕೆ ಮೌನ ಹಾನಿ:** ಮತ್ತೊಂದು ಗಮನಾರ್ಹ ವಿಷಯವೆಂದರೆ, ಅನೇಕ ಜನರು, ತಾವು ಫಿಟ್ ಆಗಿದ್ದೇವೆ ಎಂದು ಭಾವಿಸಿ, ನಿಯಮಿತ ಆರೋಗ್ಯ ತಪಾಸಣೆಗೆ ಒಳಗಾಗುವುದನ್ನು ನಿರ್ಲಕ್ಷಿಸುತ್ತಾರೆ; ಆದಾಗ್ಯೂ, ಯಾವುದೇ ಸ್ಪಷ್ಟ ಲಕ್ಷಣಗಳಿಲ್ಲದಿದ್ದರೂ ಸಹ ಅಧಿಕ ರಕ್ತದೊತ್ತಡವು ದೇಹದ ಮೇಲೆ ಹಾನಿಯನ್ನುಂಟುಮಾಡುತ್ತಲೇ ಇರುತ್ತದೆ. ತಲೆನೋವು, ತಲೆತಿರುಗುವಿಕೆ, ಆಯಾಸ, ಉಸಿರಾಟದ ತೊಂದರೆ ಅಥವಾ ಚಡಪಡಿಕೆ ಮುಂತಾದ ಚಿಹ್ನೆಗಳು ಸಾಂದರ್ಭಿಕವಾಗಿ ಪ್ರಕಟವಾದರೂ, ಅವುಗಳ ಉಪಸ್ಥಿತಿಯು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸಾರ್ವತ್ರಿಕ ಘಟನೆಯಲ್ಲ.

ತಡೆಗಟ್ಟುವಿಕೆಗಾಗಿ ಈ ಕ್ರಮಗಳನ್ನು ಅಳವಡಿಸಿಕೊಳ್ಳಿ

**ದಿನಕ್ಕೆ ಕನಿಷ್ಠ 40 ನಿಮಿಷಗಳ ಕಾಲ ನಡಿಗೆ ಅಥವಾ ವ್ಯಾಯಾಮದಲ್ಲಿ ತೊಡಗಿಸಿಕೊಳ್ಳಿ:** ನೀವು ಸಾಕಷ್ಟು ನಿದ್ರೆ ಮಾಡುವುದನ್ನು ಖಚಿತಪಡಿಸಿಕೊಳ್ಳಿ. ಹಣ್ಣುಗಳು, ಹಸಿರು ತರಕಾರಿಗಳು ಮತ್ತು ಧಾನ್ಯಗಳಲ್ಲಿ ಸಮೃದ್ಧವಾಗಿರುವ ಆರೋಗ್ಯಕರ ಆಹಾರವನ್ನು ಕಾಪಾಡಿಕೊಳ್ಳಿ. 30 ವರ್ಷ ವಯಸ್ಸಿನ ನಂತರ, ಒಬ್ಬರು ನಿಯಮಿತವಾಗಿ ರಕ್ತದೊತ್ತಡ ತಪಾಸಣೆಗೆ ಒಳಗಾಗಬೇಕು, ವಿಶೇಷವಾಗಿ ಕುಟುಂಬದಲ್ಲಿ ಅಧಿಕ ರಕ್ತದೊತ್ತಡ, ಮಧುಮೇಹ ಅಥವಾ ಹೃದಯ ಸಂಬಂಧಿತ ಕಾಯಿಲೆಗಳಿದ್ದರೆ ತಪಾಸಣೆ ಮಾಡಿಸಲೇ ಬೇಕು .

# ಮಲ್ಲರ ಕೈ ಗಾಯ:ಮೂಳೆ ಸರಿತದ ವಿಜ್ಞಾನ!



ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

**ಕುಸ್ತಿಯ ಅಖಾಡದಲ್ಲಿ ಸೆಣಸಾಡುವ ಪೈಲ್ವಾನನಿಗೆ ತೋಳುಗಳೇ ಆಧಾರಸ್ತಂಭ. ಆದರೆ, ತೀವ್ರ ಹಣಾಹಣಿಯ ನಡುವೆ ಅನಿರೀಕ್ಷಿತವಾಗಿ ನೆಲಕ್ಕೆ ಬೀಳುವಾಗ ಅಥವಾ ಎದುರಾಳಿಯು ತೋಳನ್ನು ಹಿಡಿದು ಬಲವಾಗಿ ಜಗ್ಗಿದಾಗ ಮೊಣಕೈ ಮತ್ತು ಮಣಿಕಟ್ಟಿನ ಕೀಲುಗಳು ಜಾರುವ ಸಾಧ್ಯತೆ ಹೆಚ್ಚು. ಪೈಲ್ವಾನರ ಭಾಷೆಯಲ್ಲಿ ಮೂಳೆ ಸಾರುವುದು ಎಂದು ಕರೆಯಲ್ಪಡುವ ಈ ಗಾಯವು ಕೇವಲ ನೋವಿನ ಸಂಗತಿಯಲ್ಲ; ಇದು ಪೈಲ್ವಾನನ ವೃತ್ತಿಜೀವನವನ್ನೇ ಅಲುಗಾಡಿಸಬಲ್ಲ ಗಂಭೀರ ಕ್ರೀಡಾ ಗಾಯವಾಗಿದೆ.**



ವೈಜ್ಞಾನಿಕವಾಗಿ ನಮ್ಮ ಮೊಣಕೈ ಮತ್ತು ಮಣಿಕಟ್ಟು ಅನೇಕ ಸಣ್ಣ ಮೂಳೆಗಳು, ಲಿಗಮೆಂಟ್‌ಗಳ ಸಂಕೀರ್ಣ ಜೋಡಣೆಯಿಂದ ಮಾಡಲ್ಪಟ್ಟಿದೆ. ಕುಸ್ತಿಯಲ್ಲಿ ಎದುರಾಳಿಯು ಹ್ಯಾಂಡ್ ಲಾಕ್ ಮಾಡಿದಾಗ ಅಥವಾ ಬಲವಾದ ತಿರುವು ನೀಡಿದಾಗ, ಈ ಮೂಳೆಗಳನ್ನು ಹಿಡಿದಿಟ್ಟಿರುವ ಅಸ್ಥಿಬಂಧಗಳು ಹರಿಯುತ್ತವೆ. ಇದರಿಂದ ಮೂಳೆಗಳು ತಮ್ಮ ಸಹಜ ಸ್ಥಾನದಿಂದ ಜಾರುತ್ತವೆ. ಈ ಡಿಸ್‌ಲೊಕೇಶನ್ ನರಗಳ ಮೇಲೆ ತೀವ್ರ ಒತ್ತಡ ಹೇರಿ ತೋಳಿನ ಚಲನೆಯನ್ನೇ ಸ್ಥಗಿತಗೊಳಿಸಬಹುದು.

ಅಖಾಡದಲ್ಲಿ ಸಮತೋಲನ ತಪ್ಪಿದಾಗ ಪೈಲ್ವಾನರು ಸಹಜವಾಗಿ ಅಂಗೈಯನ್ನು ಮಣ್ಣಿಗೆ ಊರಿ ಬೀಳುತ್ತಾರೆ. ಈ ಸಮಯದಲ್ಲಿ ದೇಹದ ಸಂಪೂರ್ಣ ಭಾರವು ಮಣಿಕಟ್ಟಿನ ಸಣ್ಣ ಮೂಳೆಗಳ ಮೇಲೆ ಏಕಾಏಕಿ ಬೀಳುತ್ತದೆ. ಇದು ಮಣಿಕಟ್ಟಿನ ಕೀಲು ಜಾರಲು ಅಥವಾ ಮಣಿಕಟ್ಟಿನ ನರಗಳು ಜಗ್ಗಲು ಪ್ರಮುಖ ಕಾರಣ. ಸರಿಯಾದ ಸಮಯದಲ್ಲಿ ಇದಕ್ಕೆ ಚಿಕಿತ್ಸೆ ಸಿಗದಿದ್ದರೆ, ಪೈಲ್ವಾನನಿಗೆ ಮುಂದೆ ಮುದ್ಗಲ್ ಎತ್ತುವಾಗ ಅಥವಾ ಪಟ್ಟುಗಳನ್ನು ಹಾಕುವಾಗ ಬೇಕಾದ ಗ್ರಿಪ್ ಸಿಗುವುದಿಲ್ಲ.

ಮೂಳೆಗಳು ಸ್ಥಾನಪಲ್ಲಟಗೊಂಡಾಗ ಅದರ ಸುತ್ತಲಿನ ನರಮಂಡಲದ ಮೇಲೆ ಭಾರಿ ಪರಿಣಾಮ ಬೀರುತ್ತದೆ. ವಿಶೇಷವಾಗಿ ಮೊಣಕೈ ಜಾರಿದಾಗ ಅಲ್ನರ್ ನರ್ವ್ ಎಳೆಯಲ್ಪಟ್ಟು ಬೆರಳುಗಳವರೆಗೆ ಜುಮುಗುಟ್ಟುವಿಕೆ ಅಥವಾ ಮರಗಟ್ಟುವಿಕೆ ಉಂಟಾಗುತ್ತದೆ. ಪೈಲ್ವಾನರ ಭಾಷೆಯಲ್ಲಿ ಇದನ್ನು ನರ ಜಗ್ಗುವುದು ಎನ್ನುತ್ತಾರೆ. ಇದು ಸ್ನಾಯುಗಳ ನಿಯಂತ್ರಣವನ್ನು ತಪ್ಪಿಸಿ, ಪೈಲ್ವಾನನ ಬಾಹುಬಲವನ್ನು ಕುಂದಿಸುತ್ತದೆ.

ಹಿಂದಿನ ಕಾಲದ ಗರಡಿ ಮನೆಗಳಲ್ಲಿ ಇಂತಹ ಗಾಯಗಳಿಗೆ ವಿಶೇಷ ತೈಲ ಮಾಲೀಶು ಮತ್ತು ಹಬೆಯ ಚಿಕಿತ್ಸೆ ನೀಡಲಾಗುತ್ತಿತ್ತು. ವೈಜ್ಞಾನಿಕವಾಗಿ ಇದು ರಕ್ತಸಂಚಾರವನ್ನು ಹೆಚ್ಚಿಸಿ ಉರಿಯೂತವನ್ನು ಕಡಿಮೆ ಮಾಡುತ್ತದೆ. ಆದರೆ, ಜಾರಿದ ಮೂಳೆಯನ್ನು ಮರಳಿ ಸ್ಥಾನಕ್ಕೆ ಕೂರಿಸುವಾಗ ಅತ್ಯಂತ ಜಾಗರೂಕತೆ ಇರಬೇಕು. ಅನುಭವವಿಲ್ಲದೆ ಮೂಳೆಯನ್ನು ಎಳೆದರೆ ಅದು ಲಿಗಮೆಂಟ್‌ಗಳಿಗೆ ಶಾಶ್ವತ ಹಾನಿ ಉಂಟುಮಾಡಬಹುದು.

**ಈ ಗಾಯಗಳಿಂದ ದೂರವಿರಲು ಕೆಲವು ಮುನ್ನೆಚ್ಚರಿಕೆ ಕ್ರಮಗಳು ಅಗತ್ಯ :** ಮುದ್ಗಲ್ ಅಥವಾ ಸಣ್ಣ ಭಾರಗಳನ್ನು ಕೈಗಳಿಂದ ತಿರುಗಿಸುವುದು ಮಣಿಕಟ್ಟಿನ ಮೂಳೆಗಳನ್ನು ಭದ್ರಗೊಳಿಸುತ್ತದೆ.ನಿರಂತರವಾದ ದಂಡ ಕಸರತ್ತುಗಳು ತೋಳಿನ ಸುತ್ತಲಿನ ಸ್ನಾಯುಗಳನ್ನು ಗಟ್ಟಿಮಾಡಿ, ಕೀಲುಗಳಿಗೆ ರಕ್ಷಾ ಕವಚದಂತೆ ಕೆಲಸ ಮಾಡುತ್ತವೆ.

ಅಖಾಡಕ್ಕೆ ಇಳಿಯುವ ಮೊದಲು ತೋಳುಗಳನ್ನು ಸರಿಯಾಗಿ ಬಿಸಿ ಮಾಡುವುದರಿಂದ ಲಿಗಮೆಂಟ್‌ಗಳ ನಮ್ಯತೆ ಹೆಚ್ಚಿ, ಮೂಳೆ ಜಾರುವ ಅಪಾಯ ಕಡಿಮೆಯಾಗುತ್ತದೆ. ಮೊಣಕೈ ಮತ್ತು ಮಣಿಕಟ್ಟಿನ ಗಾಯಗಳು ಮೇಲ್ನೋಟಕ್ಕೆ ಸಣ್ಣದಾಗಿ ಕಂಡರೂ ಪೈಲ್ವಾನನಿಗೆ ದೊಡ್ಡ ಸವಾಲಾಗಿ ಪರಿಣಮಿಸಬಹುದು. ಶಕ್ತಿಗಿಂತಲೂ ಶರೀರದ ತಾಂತ್ರಿಕ ಅರಿವು ಮುಖ್ಯ. ಹದವರಿತ ತಾಲೀಮು ಮತ್ತು ಗಾಯವಾದಾಗ ತಜ್ಞರ ಸಲಹೆ ಪಡೆಯುವುದು ಪೈಲ್ವಾನನ ದೀರ್ಘಕಾಲದ ಕ್ರೀಡಾ ಜೀವನಕ್ಕೆ ಅಡಿಪಾಯ. ತೋಳುಗಳು ಗಟ್ಟಿಯಿದ್ದಷ್ಟೂ ಅಖಾಡದಲ್ಲಿ ಪೈಲ್ವಾನನ ಗೆಲುವು ಸುಲಭ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಆರೋಗ್ಯ ಚೆನ್ನಾಗಿರುತ್ತದೆ. ತೀರಾ ಖರ್ಚು ಮಾಡುವ ಮತ್ತು ಮನರಂಜನೆಗೆ ತುಂಬಾ ಖರ್ಚು ಮಾಡುವ ನಿಮ್ಮ ಪ್ರವೃತ್ತಿಗೆ ಕಡಿವಾಣ ಹಾಕಿ. ಇಂದು ಹಣದ ಬಗ್ಗೆ ಕುಟುಂಬ ಸದಸ್ಯರಲ್ಲಿ ಗೊಂದಲ ಉಂಟಾಗಬಹುದು. ಹಣಕಾಸಿನ ವಿಷಯದ ಬಗ್ಗೆ ನೀವು ಕುಟುಂಬದ ಎಲ್ಲಾ ಸದಸ್ಯರಿಗೆ ಸ್ಪಷ್ಟವಾಗಿರಲು ಸಲಹೆ ನೀಡಬೇಕು.

**ವೃಷಭ** ಸಾಮಾಜಿಕ ಜೀವನಕ್ಕಿಂತ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ – ಆದರೆ ಅದು ನಿಮ್ಮ ಕೈಯಿಂದ ಜಾರಿಹೋಗದಿರಲು ಪ್ರಯತ್ನಿಸಿ. ನಿಮ್ಮ ಕುಟುಂಬದ ಕಲ್ಯಾಣಕ್ಕಾಗಿ ಕೆಲಸ ಮಾಡಿ. ನಿಮ್ಮ ಕಾರ್ಯಗಳು ದುರಾಶೆಯಿಂದಲ್ಲದೇ ಪ್ರೀತಿ ಮತ್ತು ಸಕಾರಾತ್ಮಕ ದೃಷ್ಟಿಯಿಂದ ನಡೆಯಬೇಕು.

**ಮಿಥುನ** ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ಬುದ್ಧಿವಂತ ಹೂಡಿಕೆಗಳು ಮಾತ್ರ ಆದಾಯಗಳನ್ನು ನೀಡುತ್ತವೆ. ಆದ್ದರಿಂದ ನೀವು ಕಷ್ಟಪಟ್ಟು ಗಳಿಸಿದ ನಿಮ್ಮ ಹಣವನ್ನು ಎಲ್ಲಿ ಹೂಡಬಯಸುತ್ತೀರೆನ್ನುವಲ್ಲಿ ಖಚಿತತೆಯಿರಲಿ.

**ಕರ್ಕಾಟಕ** ಸಂಬಂಧಿಗಳೆದ್ದಲ್ಲಿ ಸಣ್ಣ ಪ್ರಯಾಣ ನಿಮ್ಮ ದೈನಂದಿನ ಒತ್ತಡದ ಜೀವನದಿಂದ ನಿಮಗೆ ಸುಖ ಮತ್ತು ವಿಶ್ರಾಂತಿಯನ್ನು ತರುತ್ತದೆ ನಿಮ್ಮನ್ನು ದೀರ್ಘಕಾಲ ಹಿಡಿದಿಟ್ಟಿರುವ ಒಂದು ಏಕಾಂಗಿ ಹಂತ ನಿಮ್ಮ ಜೀವನ ಸಂಗಾತಿ ದೊರಕಿದ ತಕ್ಷಣ ಕೊನೆಗೊಳ್ಳುತ್ತದೆ.

**ಸಿಂಹ** ವಿಶ್ರಾಂತಿಯ ಸಲುವಾಗಿ ನಿಕಟ ಸ್ನೇಹಿತರೊಂದಿಗೆ ಸ್ವಲ್ಪ ಸಮಯ ಕಳೆಯಿರಿ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ, ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು ಏಕೆಂದರೆ ಇದರಿಂದ ನಿಮಗೆ ಮಾನಸಿಕ ಶಾಂತಿ ಸಿಗುತ್ತದೆ. ಪ್ರೀತಿಸುವ, ಕಾಳಜಿ ತೋರಿಸುವ ಜನರೊಂದಿಗೆ ಸಕಾರಣವಾಗಿರಲು ಪ್ರಯತ್ನಿಸಿ.

**ಕನ್ಯಾ** ನಿಮ್ಮ ಪ್ರೇಮ ಸಂಗಾತಿ ನಿಜಕ್ಕೂ ಅದ್ಭುತವಾದದ್ದನ್ನು ಏನೋ ತರುತ್ತಾರೆ. ಇಂದು ಕೆಲಸದ ಸ್ಥಳದಲ್ಲಿ ನಿಮ್ಮ ಯಾವುದೂ ಹಳೆಯ ಕೆಲಸವನ್ನು ಪ್ರಶಂಸಿಸಬಹುದು. ನಿಮ್ಮ ಕೆಲಸವನ್ನು ನೋಡುತ್ತಾ ನಿಮ್ಮ ಪ್ರಗತಿಯೂ ಸಹ ಸಾಧ್ಯವಿದೆ. ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಅತ್ಯುತ್ತಮ ದಿನ.

**ತುಲಾ** ಸ್ನೇಹಿತರೊಂದಿಗಿನ ಸಂಜೆ ಆಹ್ಲಾದಕರವಾಗಿದ್ದರೂ ವಿಪರೀತ ತಿನ್ನುವುದು, ಹಾರ್ಡ್ ಡ್ರಿಂಕ್‌ಗಳ ಬಗ್ಗೆ ಎಚ್ಚರಿಕೆಯಿಂದಿರಿ. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ ಏಕೆಂದರೆ ನಿಮ್ಮ ಮೂಲಕ ಕೊಟ್ಟಿರುವ ಹಣ ಇಂದು ನಿಮಗೆ ಮರಳಿ ಸಿಗಬಹುದು.

**ವೃಶ್ಚಿಕ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಎಲ್ಲಾ ಬದ್ಧತೆಗಳು, ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ನಿಮ್ಮ ಜ್ಞಾನ, ಒಳ್ಳೆಯ ಹಾಸ್ಯ ನಿಮ್ಮ ಬಳಿಯಿರುವ ಜನರನ್ನು ಆಕರ್ಷಿಸಬಹುದು. ಬಾಕಿಯಿರುವ ಕೆಲಸಗಳ ಹೊರತಾಗಿಯೂ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ.

**ಧನಸ್ಸು** ನಿಮ್ಮ ಜಗಳಗಂಟ ನಡುವಳಿಕೆ ನಿಮ್ಮ ಶತ್ರುಗಳ ಪಟ್ಟಿಯನ್ನು ಸುದೀರ್ಘಗೊಳಿಸುತ್ತದೆ. ನೀವು ನಂತರ ಪಶ್ಚಾತ್ತಾಪಪಡುವಷ್ಟು ಕೆಟ್ಟದಾಗಿ ನೀವೇನಾದರೂ ಮಾಡುವಷ್ಟು ನೀವು ಕೋಪಗೊಳ್ಳುವಂತೆ ಮಾಡಲು ಯಾರಿಗೂ ಅವಕಾಶ ನೀಡಬೇಡಿ. ಇಂದು, ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ.

**ಮಕರ** ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ, ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಜನರು ನಿಮ್ಮಿಂದ ಏನು ಬಯಸುತ್ತಾರೆಂದು ನಿಖರವಾಗಿ ತಿಳಿದಿರುವಂತೆ ತೋರುತ್ತದೆ . ಆದರೆ ಇಂದು ನಿಮ್ಮ ಖರ್ಚುಗಳಲ್ಲಿ ತುಂಬಾ ಉದಾರಿಯಾಗಿದಿರಲು ಪ್ರಯತ್ನಿಸಿ.

**ಕುಂಭ** ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ನೀವು ಇಂದು ಹಣ ಉಳಿಸುವುದು ಕಷ್ಟ, ನೀವು ಇಂದು ಅತಿಯಾಗಿ ಖರ್ಚು ಮಾಡುವ ಅಥವಾ ನಿಮ್ಮ ಪರ್ಸ್ ಕಳೆದುಕೊಳ್ಳುವ ಸಾಧ್ಯತೆಗಳಿವೆ ನಿರ್ಲಕ್ಷ್ಯತನದಿಂದ ಕೆಲವು ಸಮಸ್ಯೆಗಳು ಖಂಡಿತ.

**ಮೀನ** ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ನೀವು ವಿಧ್ಯಾರ್ಥಿಯಾಗಿದ್ದರೆ, ವಿದೇಶಕ್ಕೆ ಹೋಗಿ ಅಧ್ಯಯನ ಮಾಡಲು ಬಯಸುತ್ತಿದ್ದರೆ ಆರ್ಥಿಕ ಬಿಕ್ಕಟ್ಟು ಇಂದು ನಿಮ್ಮ ಹಣೆಯ ಮೇಲೆ ಸುಕ್ಕು ತರಬಹುದು. ಭಾವನಾತ್ಮಕ ಅಪಾಯ ನಿಮ್ಮ ಪರವಾಗಿರುತ್ತದೆ. ಇಂದು ಯಾರಾದರೂ ನಿಮ್ಮ ಪ್ರೀತಿಯ ನಡುವೆ ಬರಬಹುದು.

### ● ಆಳಂದ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಪರದಾಟ ಪರಾಕಾಷ್ಠೆಗೆ
# ಆಮೆಗತಿಯ ಕಾಮಗಾರಿ-ಅವ್ಯವಸ್ಥೆಯ ಅಟ್ಟಹಾಸ

• ಉದಯವಾಹಿನಿ ಆಳಂದ

ಕಿಂಚಿತವೂ ಮಾನವೀತೆ ತೋರದ ಅಧಿಕಾರಿಗಳ ಮತ್ತು ಇಲ್ಲಿನ ಜನ ಪ್ರತಿನಿಧಿಗಳು ಕೇವಲ ಕಾಮಗಾರಿ ಲೆಕ್ಕ ಪತ್ರದಲ್ಲಿ ಬಿಜಿಯಾಗಿದ್ದಾರೆ ಎನ್ನುವುದಕ್ಕೆ ಪಟ್ಟಣದಲ್ಲಿ ಬಸ್ ನಿಲ್ದಾಣ ಅಭಿವೃದ್ಧಿಯ ನೆಪದಲ್ಲಿ ಪ್ರಯಾಣಿಕರ ವಿಧಿಸಿದ ಉರಿ ಬಿಸಿಲು ಸೇರಿ ಅವ್ಯವಸ್ಥೆಯ ಶಿಕ್ಷೆಯೇ ಸಾಕ್ಷಿಯಾಗಿದೆ.

ಪಟ್ಟಣದ ಬಸ್ ನಿಲ್ದಾಣ ಪುನರ್ ನಿರ್ಮಾಣ ಕಾಮಗಾರಿ ಕಳೆದ ಆರೇಳು ತಿಂಗಳಿಂದ ಆಮೆಗತಿಯಲ್ಲಿ ಸಾಗುತ್ತಿದ್ದು, ಇದರ ನೇರ ಹೊರೆ ಇದೀಗ ಸಾರ್ವಜನಿಕರ ಮೇಲೇ ಬಿದ್ದಿದೆ. ಹಳೆಯ ಬಸ್ ನಿಲ್ದಾಣ ಇದ್ದ ಅದೇ ಸ್ಥಳದಲ್ಲೇ ಹೊಸ ಕಟ್ಟಡ ಕಾಮಗಾರಿ ಆರಂಭಿಸಿರುವುದರಿಂದ, ಬಸ್ ನಿಲ್ಲುಗಡೆ ಹಾಗೂ ಪ್ರಯಾಣಿಕರ ಸಂಚಾರಕ್ಕೆ ಯಾವುದೇ ಪರ್ಯಾಯ ವ್ಯವಸ್ಥೆ ಕೈಗೊಳ್ಳದೆ ಇಕ್ಕಟ್ಟಿನಲ್ಲೇ ಕಾಮಗಾರಿ ನಡೆಸಲಾಗುತ್ತಿದೆ. ಪರಿಣಾಮ, ಪ್ರತಿದಿನ ಸಾವಿರಾರು ಪ್ರಯಾಣಿಕರು ಉರಿ ಬಿಸಿಲಿನಲ್ಲಿ ಬಸ್‌ಗಾಗಿ ಗಂಟೆಗಟ್ಟಲೆ ನಿಂತುಕೊಂಡೇ ನರಳುವಂತಾಗಿದೆ.

**ರಮೇಶ ಲೋಹಾರ ಒತ್ತಾಯ**

**ಬಸ್ ನಿಲ್ದಾಣ ಇಂದು ಅಭಿವೃದ್ಧಿಯ ಕಾಮಗಾರಿಗಿಂತ ಅವ್ಯವಸ್ಥೆಯ ಪ್ರತೀಕವಾಗಿ ಪರಿಣಮಿಸಿದೆ. ತಕ್ಷಣವೇ ಕಾಮಗಾರಿಯನ್ನು ವೇಗಗೊಳಿಸಿ, ತಾತ್ಕಾಲಿಕ ಬಸ್ ನಿಲ್ದಾಣ, ನೆರಳು, ಕುಡಿಯುವ ನೀರು, ಆಸನ ವ್ಯವಸ್ಥೆ ಹಾಗೂ ಹೆಚ್ಚುವರಿ ಬಸ್ ಸೇವೆಗಳನ್ನು ಒದಗಿಸಬೇಕು. ಪ್ರಯಾಣಿಕರ ಗೋಳು ಕೇಳಿಸಿಕೊಳ್ಳುವ ಮುನ್ನವೇ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು. -ರಮೇಶ ಲೋಹಾರ ಜನಪರ ಹೋರಾಟಗಾರ ಆಳಂದ.**

ಬೇಸಿಗೆ ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದರೂ, ಪ್ರಯಾಣಿಕರಿಗೆ ಕುಳಿತುಕೊಳ್ಳಲು ಆಸನಗಳಿಲ್ಲ, ನೆರಳಿನ ವ್ಯವಸ್ಥೆಯಿಲ್ಲ, ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಮಹಿಳೆಯರು, ಮಕ್ಕಳು, ವಯೋವೃದ್ಧರು, ವಿದ್ಯಾರ್ಥಿಗಳು ಹಾಗೂ ರೋಗಿಗಳು ಬಸ್ ಕಾಯುವ ವೇಳೆ ಅನುಭವಿಸುತ್ತಿರುವ ಸಂಕಷ್ಟ ಮಾನವೀಯತೆಯನ್ನೇ ಪ್ರಶ್ನಿಸುವಂತಾಗಿದೆ.



☛ ಉದಯವಾಹಿನಿ ಚಿತ್ರ

ಕೆಲವರು ರಸ್ತೆ ಬದಿಯ ಅಂಗಡಿಗಳ ನೆರಳಲ್ಲಿ ಆಶ್ರಯ ಪಡೆಯುತ್ತಿದ್ದರೆ, ಇನ್ನೂ ಕೆಲವರು ಬಿಸಿಲಿನಲ್ಲೇ ತಲೆ ಮುಚ್ಚಿಕೊಂಡು ಬಸ್‌ಗಾಗಿ ಕಾಯುವ ಸ್ಥಿತಿ ನಿರ್ಮಾಣವಾಗಿದೆ.

**ಅವ್ಯವಸ್ಥೆಯ ಶಿಕ್ಷೆಯೇ ಸಾಕ್ಷಿ**

ತಾತ್ಕಾಲಿಕ ಬಸ್ ನಿಲ್ದಾಣ ಅಥವಾ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ತಿಂಗಳ ಹಿಂದೆ ಭೇಟಿ ನೀಡಿದ್ದ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಪಾಟೀಲ ಹಾಗೂ ಶಾಸಕ ಬಿ.ಆರ್. ಪಾಟೀಲ ಅವರು ಸೂಚನೆ ನೀಡಿದ್ದರೂ, ಸಂಬಂಧಿತ ಅಧಿಕಾರಿಗಳು ಮತ್ತು ಕಾಮಗಾರಿ ಗುತ್ತಿಗೆದಾರರು ಅದಕ್ಕೆ ಕ್ಯಾರೇ ಎನ್ನದೆ ನಿರ್ಲಕ್ಷ್ಯ ವಹಿಸಿರುವ ಆರೋಪ ಸಾರ್ವಜನಿಕರಿಂದ ಕೇಳಿಬರುತ್ತಿದೆ.

ಜನಪ್ರತಿನಿಧಿಗಳ ಸೂಚನೆಗೂ ಬೆಲೆ ಇಲ್ಲದಂತಾಗಿದ್ದು, ಕಾಮಗಾರಿ ಮಾತ್ರ ನಿಧಾನಗತಿಯಲ್ಲಿ ಸಾಗುತ್ತಿದೆ. ಕಾಮಗಾರಿಯ ಪ್ರಗತಿ ನೋಡಿದರೆ, ಇನ್ನೂ ಹಲವು ತಿಂಗಳು ಇದೇ ಅವ್ಯವಸ್ಥೆ ಮುಂದುವರಿಯುವ ಭೀತಿ ಜನರಲ್ಲಿ ಮನೆಮಾಡಿದೆ. ಅಲ್ಲದೆ ಇನ್ನೇನು ಮಳೆಗಾಲ ಸಮೀಪಿಸುತ್ತಿದೆ ಬಿಸಿಲಿನ ರುದ್ರಾವತಾರ ಕೊನೆಯಾಗುವಷ್ಟರಲ್ಲೇ ಮಳೆಗಾಲದಲ್ಲಿ ಪ್ರಯಾಣಿಕರು ಎಲ್ಲಿ ನಿಂತುಕೊಳ್ಳಬೇಕು ಎನ್ನುವ ಪ್ರಶ್ನೆಗೆ ಸಾರಿಗೆ ನಿಗಮದ ಅಧಿಕಾರಿಗಳೆ ಉತ್ತರಿಸಬೇಕಾಗಿದೆ.

ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲೇ ಬಸ್‌ಗಳನ್ನು ನಿಲ್ಲಿಸಲಾಗುತ್ತಿರುವುದರಿಂದ ವಾಹನಗಳ ಗೊಂದಲ ಹೆಚ್ಚಾಗಿದೆ. ಬಸ್‌ಗಳು ನಿಲ್ಲಲು ಸೂಕ್ತ ಸ್ಥಳದ ಕೊರತೆ ಇರುವ ಕಾರಣ, ಪ್ರಯಾಣಿಕರು ಓಡಾಟದ ಮಧ್ಯೆಯೇ ಬಸ್ ಏರು-ಇಳಿಯಬೇಕಾದ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ. ವಿಶೇಷವಾಗಿ ಶಾಲಾ-ಕಾಲೇಜು ವಿದ್ಯಾರ್ಥಿನಿಯರು, ವಯೋವೃದ್ಧರು ಹಾಗೂ ಮಹಿಳೆಯರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ.

ಇನ್ನು ಆಳಂದ ತಾಲ್ಲೂಕಿನಲ್ಲಿ ಇತ್ತೀಚೆಗೆ ವಿವಾಹ ಸಮಾರಂಭಗಳು, ಸಭೆಗಳು, ಧಾರ್ಮಿಕ ಕಾರ್ಯಕ್ರಮಗಳು ಹೆಚ್ಚಾಗಿರುವುದರಿಂದ ಪ್ರಯಾಣಿಕರ ಸಂಖ್ಯೆಯೂ ಗಣನೀಯವಾಗಿ ಏರಿಕೆಯಾಗಿದೆ. ಜಿಲ್ಲಾ ಕೇಂದ್ರ ಕಲಬುರಗಿ ಸೇರಿದಂತೆ ವಿವಿಧ ಕಡೆಗಳಿಗೆ ತೆರಳುವ ಜನರು ಬಸ್‌ಗಾಗಿ ಗಂಟೆಗಟ್ಟಲೆ ಕಾಯುವಂತಾಗಿದೆ. ಆದರೆ ಪ್ರಯಾಣಿಕರ ಒತ್ತಡಕ್ಕೆ ತಕ್ಕಂತೆ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡದೆ ಸಾರಿಗೆ ಇಲಾಖೆ ನಿರ್ಲಕ್ಷ್ಯ ತೋರಿಸುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ವಿಶೇಷವಾಗಿ ಸಂಜೆ ವೇಳೆಯಲ್ಲಿ ಕಲಬುರಗಿಯಿಂದ ಆಳಂದಕ್ಕೆ ಮತ್ತು ಆಳಂದದಿಂದ ಕಲಬುರಗಿಗೆ ತೆರಳುವ ಬಸ್‌ಗಳು ತುಂಬಿ ತುಳುಕುತ್ತಿದ್ದು, ಅನೇಕ ಪ್ರಯಾಣಿಕರು ನಿಂತುಕೊಂಡೇ ಪ್ರಯಾಣಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವೊಮ್ಮೆ ಬಸ್‌ಗಳಲ್ಲಿ ಕಾಲಿಡಲೂ ಜಾಗವಿಲ್ಲದ ಸ್ಥಿತಿ ಉಂಟಾಗುತ್ತಿದ್ದು, ಮಹಿಳೆಯರು ವೃದ್ಧರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ.

> ಅಧಿಕಾರಿಗಳೇ, ಪ್ರಯಾಣಿಕರ ತಾಳ್ಮೆ ಪರೀಕ್ಷಿಸಬೇಡಿ ಆಳಂದ ಬಸ್ ನಿಲ್ದಾಣದ ಕಾಮಗಾರಿ ಎಂಬುದು ಮುಗಿಯದ ಕಥೆಯಂತಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪ್ರಯಾಣಿಕರನ್ನು ಬೀದಿಗೆ ತಳ್ಳಲಾಗಿದೆ. ಇಲ್ಲಿ ಕುಡಿಯಲು ನೀರಿಲ್ಲ, ಕುಳಿತುಕೊಳ್ಳಲು ಆಸನಗಳಿಲ್ಲ, ಮಹಿಳೆಯರಿಗೆ ಶೌಚಾಲಯದ ವ್ಯವಸ್ಥೆಯಂತೂ ಶೂನ್ಯವಾಗಿದೆ. ಇದು ಕೇವಲ ವ್ಯವಸ್ಥೆಯ ಲೋಪವಲ್ಲ, ನಾಗರಿಕರ ಬದುಕುವ ಹಕ್ಕಿನ ಉಲ್ಲಂಘನೆ. ಅಧಿಕಾರಿಗಳು ಎಸಿ ರೂಮಿನಲ್ಲಿ ಕುಳಿತು ತಮಾಷೆ ನೋಡುತ್ತಿದ್ದಾರೆ. ಒಂದು ವಾರದೊಳಗೆ ಮೂಲ ಸೌಕರ್ಯ ಸರಿಪಡಿಸದಿದ್ದರೆ ಬಸ್ ನಿಲ್ದಾಣಕ್ಕೆ ಬೀಗ ಹಾಕಿ ಉಗ್ರ ಹೋರಾಟ ಮಾಡಲಾಗುವುದು. ಆಗುವ ಅನಾಹುತಕ್ಕೆ ಸಾರಿಗೆ ಇಲಾಖೆಯೇ ನೇರ ಹೊಣೆ. -ಪ್ರವೀಣ ಮೊದಲೆ ಕರವೇ ಅಧ್ಯಕ್ಷ ಆಳಂದ

## ಗಾಂಜ ಕಿಂಗ್ ಪಿನ್ ದೌಲ ಬಂಧನ ಸಮ್ಮತಿಸಿದ ಸಲಹಾ ಸಮಿತಿ

• ಉದಯವಾಹಿನಿ ಬಳ್ಳಾರಿ

ಎನ್.ಡಿ.ಪಿ.ಎಸ್ ಪ್ರಕರಣಗಳ ಆರೋಪಿ ಡಿ.ದೌಲ ಅಲಿಯಾಸ್ ಎಸ್.ದೌಲನನ್ನು ಸೆರೆಮನೆಯಲ್ಲಿಡಲು ಆದೇಶಿಸಿದ ಆದೇಶಕ್ಕೆ ಸಲಹಾ ಸಮ್ಮತಿಯಿಂದ ಅನುಮೋದನೆ ದೊರೆತಿದೆಂದು ಎಸ್‌ಪಿ ಅವರ ಪತ್ರಿಕಾ ಪ್ರಕಟಣೆ ತಿಳಿಸಿದೆ.

ನಗರದ ರಾಣಿತೋಟದಡಿ. ದೌಲ ಅಲಿಯಾಸ್ ಎಸ್. ದೌಲಾ ಅಲಿಯಾಸ್ ಮೆಹಬೂಬ್ ದೌಲ (40) ಈತನು ಬಳ್ಳಾರಿ ಜಿಲ್ಲೆ ಒಳಗೊಂಡಂತೆ ರಾಜ್ಯದ್ಯಾಂತ ವಿವಿಧ ಜಿಲ್ಲೆಗಳಲ್ಲಿ ಮಾದಕ ಪದಾರ್ಥಗಳ ಸಂಗ್ರಹಣೆ, ಸಾಗಟ ಹಾಗೂ ಮಾರಟ ಕೆಲಸದಲ್ಲಿ ತೊಡಗಿಕೊಂಡಿದ್ದನು.

ಈತನ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆಯಡಿಯಲ್ಲಿ 21 ಪ್ರಕರಣಗಳು ದಾಖಲಾಗಿದ್ದವು. ನಿರಂತರವಾಗಿ ಈತನು ಮಾದಕ ದ್ರವ್ಯ ಸಾಗಣೆ ಮತ್ತು ಮಾರಟದಲ್ಲಿ ತೊಡಗುವ ಮೂಲಕ ಸಾಮಾಜದ ಸ್ವಾಸ್ಥ್ಯವನ್ನು ಹದಗಡೆಸುತ್ತಿದ್ದನು. ಅದಕ್ಕಾಗಿ ಸಮಾಜದ ಸ್ವಾಸ್ಥ್ಯ ಕಾಪಡುವ ಉದ್ದೇಶದಿಂದ ಕಾಯ್ದೆಯನ್ವಯ ಐಜಿಪಿ ಬಳ್ಳಾರಿರವರಿಗೆ ದೌಲನ ಬಂಧನದ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.





ಐಜಿಪಿ ಹರ್ಷ ಅವರು . ದೌಲನನ್ನು ಒಂದು ವರ್ಷದವರೆಗೆ ಬಂಧನಲ್ಲಿರಿಸಲು ಆದೇಶಿಸಿದ್ದರು.

ಈ ಪ್ರಕರಣವು ಉಚ್ಚನ್ಯಾಯಾಲಯದ ನ್ಯಾಯಧೀಶರುಗಳನ್ನು ಒಳಗೊಂಡ ಸಲಹಾ ಸಮಿತಿಯಲ್ಲಿ ವಿಚಾರಣೆ ನಡೆದಿತ್ತು. ಎಸ್‌ಪಿ. ಡ. ಸುಮನ್ ಡಿ.ಪೆನ್ನೇಕರ್, ಹಾಗೂ ಟಿ.ಎಸ್ ಪಾಟೀಲ್, ಹಿರಿಯ ಕಾನೂನು ಸಲಹೆಗಾರರು ಸರ್ಕಾರದ ಪರವಾಗಿ ಸಮಿಯಲ್ಲಿ ವಾದಿಸಿದ್ದರು. ಸಮಿತಿಯ ದೌಲನನ್ನು 12.02.2027 ರ ವರೆಗೆ ಬಂಧನದಲ್ಲಿರಿಸಲು ಸಮ್ಮತಿಸಿದೆ. ಸಧ್ಯ ದೌಲ ಬಳ್ಳಾರಿ ಕೇಂದ್ರ ಕಾರಗೃಹದಲ್ಲಿದ್ದಾನೆ.

## ನೂತನ 110/11 ಕೆವಿ ವಿದ್ಯುತ್ ಉಪಕೇಂದ್ರಕ್ಕೆ ಶಂಕುಸ್ಥಾಪನೆ

• ಉದಯವಾಹಿನಿ ಬೀದರ

ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿ(ಕೆ) ಗ್ರಾಮದಲ್ಲಿ ಸುಮಾರು 22.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ನೂತನ 110/11 ಕೆವಿ ವಿದ್ಯುತ್ ಉಪಕೇಂದ್ರ ಕಾಮಗಾರಿಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರು ಇಂದು ಶಂಕುಸ್ಥಾಪನೆ ನೆರವೇರಿಸಿದರು. ನಂತರ ಮಾತನಾಡಿ, ಈ ವಿದ್ಯುತ್ ಉಪಕೇಂದ್ರ ಸ್ಥಾಪನೆಯಿಂದ ಬ್ಯಾಲಹಳ್ಳಿ(ಕೆ) ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಗೆ ಗುಣಮಟ್ಟದ ಹಾಗೂ ನಿರಂತರ ವಿದ್ಯುತ್ ಪೂರೈಕೆ ಸಾಧ್ಯವಾಗಲಿದ್ದು, ರೈತರು, ವಿದ್ಯಾರ್ಥಿಗಳು, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಸಚಿವರು ತಿಳಿಸಿದರು.

ಗ್ರಾಮೀಣ ಭಾಗಗಳ ಅಭಿವೃದ್ಧಿಗೆ ಮೂಲಸೌಕರ್ಯಗಳ ಬಲವರ್ಧನೆ ಅತ್ಯಂತ ಅಗತ್ಯವಾಗಿದ್ದು, ರಾಜ್ಯ ಸರ್ಕಾರ ವಿದ್ಯುತ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಹೇಳಿದರು.

ಈ ಯೋಜನೆಯಿಂದ ಪ್ರದೇಶದ ವಿದ್ಯುತ್ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರೆಯಲಿದ್ದು, ಕೃಷಿ ಚಟುವಟಿಕೆಗಳು ಹಾಗೂ ಸ್ಥಳೀಯ ಅಭಿವೃದ್ಧಿಗೆ ಹೆಚ್ಚಿನ ಉತ್ತೇಜನ ಸಿಗಲಿದೆ ಎಂದು ಸಚಿವರು ಅಭಿಪ್ರಾಯಪಟ್ಟರು.

## ಹಸು ಸಾವು ಪರಿಹಾರಕ್ಕೆ ಆಗ್ರಹ

• ಉದಯವಾಹಿನಿ ಬಳ್ಳಾರಿ

ಪಶು ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಹಸು ಮೃತಪಟ್ಟಿದ್ದು, ಅದರ ಮಾಲೀಕರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿ ಸಾಮಾಜಿಕ ಹೋರಾಟಗಾರ ಶರಣಬಸವ ಅವರು ಜಿಲ್ಲಾ ಪಶು ವೈದ್ಯಾಧಿಕಾರಿ ಸದಾಶಿವ ಉಪ್ಪಾರ್ ಅವರಿಗೆ ಮನವಿ ಸಲ್ಲಿಸಿದ್ದಾರೆ. .

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಬಗ್ಗೂರು ಗ್ರಾಮದ ರೈತ ಮಲ್ಕಪ್ಪ ಅವರಿಗೆ ಸೇರಿದ ಹಸು, ಎಮ್ಮೆ, ಕರುವಿಗೆ ಹೀಟ್ ಸ್ಟ್ರೋಕ್ ಆಗಿತ್ತು. ರಾವಿ ಪಶು ವೈದ್ಯಕೀಯ ಆಸ್ಪತ್ರೆಗೆ ಬೀಗ ಹಾಕಿತ್ತು. ಗ್ರಾಮ ಮತ್ತು ತಾಲ್ಲೂಕು ಪಶು ವೈದ್ಯಾಧಿಕಾರಿಗೆ ಕರೆ ಮಾಡಿದರೂ, ಅವರು ಸ್ವೀಕರಿಸಲಿಲ್ಲ. ಸಕಾಲಕ್ಕೆ ಚಿಕಿತ್ಸೆ ಸಿಗದೆ ಹಸು ಮೃತಪಟ್ಟಿದೆ.1962 ಸಹಾಯವಾಣಿಗೆ ಕರೆ ಮಾಡಿದರೆ, ವಾಹನ ರಿಪೇರಿ ಇದೆ ಎಂದರು. ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಒತ್ತಾಯಿಸಿದ್ದಾರೆ.

## ಪರೀಕ್ಷೆ ವ್ಯವಸ್ಥಿತವಾಗಿ ನಡೆಸಲು ಕ್ರಮ ವಹಿಸಿ

• ಉದಯವಾಹಿನಿ ಗದಗ

ಜಿಲ್ಲೆಯಲ್ಲಿ ಮೇ 18 ರಿಂದ 25 ರವರೆಗೆ ಜರುಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಯನ್ನು ವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ ನಡೆಸಲು ಕ್ರಮವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ತಿಳಿಸಿದರು. ಗದಗ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪರೀಕ್ಷೆಗಳಲ್ಲಿ ಯಾವುದೇ ಅಕ್ರಮಗಳು ಅವ್ಯವಹಾರಗಳು ನಡೆಯದಂತೆ ನೋಡಿಕೊಳ್ಳಬೇಕು. ಜಿಲ್ಲೆಯ ಒಟ್ಟು 7 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿದ್ದು ಅಲ್ಲಿ ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯಗಳು ಇರುವಂತೆ ನೋಡಿಕೊಳ್ಳಬೇಕು. ಪರೀಕ್ಷಾ ಅವಧಿಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು ಪರೀಕ್ಷಾ ಅವಧಿಯಲ್ಲಿ ಯಾವುದೇ ಲೋಪ ದೋಷಗಳಾಗದಂತೆ ಕ್ರಮ ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ತಿಳಿಸಿದರು. ಈ ಸಂದರ್ಭದಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ ಸೂಕ್ತ ಪೊಲೀಸ ಬಂದೋಬಸ್ತ, ಪರೀಕ್ಷೆಗಳನ್ನು ಪಾರದರ್ಶಕವಾಗಿ ಹಾಗೂ ಸುಗಮವಾಗಿ ಜರುಗಿಸುವ ಕುರಿತು ಸೂಕ್ತ ವ್ಯವಸ್ಥೆ ಕೈಗೊಳ್ಳುವ ಕುರಿತು ಚರ್ಚಿಸಲಾಯಿತು.

## ನೀರಿನ ಟ್ಯಾಂಕಿಗೆ ಅಧಿಕಾರಿಗಳ ಭೇಟಿ

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ತಾಲ್ಲೂಕಿನ ಬೈಲೂರ ಗ್ರಾಮದ ಹುತಾತ್ಮ ಗಾಂಧಿ ಮಾರ್ಗದಲ್ಲಿರುವ ಜಲ ಸಂಗ್ರಹಾಲಯ (ನೀರಿನಟ್ಯಾಂಕ್) 3 ದಶಕಗಳ ಹಿಂದೆ ನಿರ್ಮಾಣವಾಗಿತ್ತು ಈಗ ಇದು ಶಿಥಿಲಾವಸ್ಥೆಯಲ್ಲಿದೆ ಇದನ್ನು ಸಿಮೆಂಟ್ ಪ್ಲಾಸ್ಟರ ಮಾಡಲಾಗಿತ್ತು ಅದು ಹಾಳಾಗಿದೆ. ಅದನ್ನು ಸಂಪೂರ್ಣ ಕಿತ್ತೆಸೆದು ಹೊಸ ಟ್ಯಾಂಕ್ ನಿರ್ಮಿಸಿ ಕೊಡಬೇಕೆಂದು ಗ್ರಾಮಸ್ಥರು ಅಧಿಕಾರಿಗಳನ್ನು ಒತ್ತಾಯಿಸಿದ್ದರು.

ಇದರ ಹಿನ್ನೆಲೆ ಸದರಿ ವಿಷಯದ ಕುರಿತು ಕಾರ್ಯಪಾಲಕ ಅಭಿಯಂತರರು ಗ್ರಾ.ಕು.ನೀ ನೈರ್ಮಲ್ಯ ಬೆಳಗಾವಿ ವಿಭಾಗದ ಕಿರಣ ಗೋರ್ಪಡೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರಾ.ಕು.ನೀ ನೈರ್ಮಲ್ಯ ಬೈಲಹೊಂಗಲ ಉಪವಿಭಾಗಾಧಿಕಾರಿ ಅಜೀತ ಬೀರಾದರ ಸ್ಥಾನಿಕ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸದರಿ ಜಲ ಸಂಗ್ರಹಾಲಯ ಸುಸ್ಥಿತಿಯಲ್ಲಿ ಇರುವುದು ಆರ್.ಎಚ್. ಟೆಸ್ಟ್ ತಿಳಿಯಲಾಗಿ, ತಾತ್ಕಾಲಿಕ ದುರಸ್ತಿ ಮಾಡಲು ಸೂಚಿಸಿದರು.

## ಐದು ವರ್ಷವಾದರೂ ಪೂರ್ಣವಾಗದ ನಿಂಬರಗಾ ಕೆರೆ ಕಾಮಗಾರಿ

• ಉದಯವಾಹಿನಿ ಆಳಂದ

ರೈತರ ಹೊಲಗಳಿಗೆ ನೀರು ಒದಗಿಸಿ ಕೃಷಿಗೆ ಜೀವನಾಡಿಯಾಗಬೇಕಿದ್ದ ನಿಂಬರಗಾ ಗ್ರಾಮದ ತಾಂಡಾ ಸಮೀಪ ನಿರ್ಮಾಣಗೊಳ್ಳುತ್ತಿರುವ ಸಣ್ಣ ನೀರಾವರಿ ಇಲಾಖೆಯ ಕೆರೆ ಕಾಮಗಾರಿ ಐದು ವರ್ಷ ಕಳೆದರೂ ಅಪೂರ್ಣವಾಗಿಯೇ ಉಳಿದಿರುವುದು ಸ್ಥಳೀಯ ರೈತರು ಮತ್ತು ಸಾರ್ವಜನಿಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಆರಂಭಗೊಂಡ ಯೋಜನೆ ಅರ್ಧದಲ್ಲೇ ನಿಂತಿರುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಸಣ್ಣ ನೀರಾವರಿ ಇಲಾಖೆಯು ಸುಮಾರು 2.54 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ 2021ರ ಸೆಪ್ಟೆಂಬರ್ ತಿಂಗಳಲ್ಲಿ ಕೆರೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿತ್ತು. ಮೂಲತಃ ಒಳವಂಡವಾಡಿ ಗ್ರಾಮದ ಕೆರೆ ಕಾಮಗಾರಿಗೆ ಮಂಜೂರಾಗಿದ್ದ ಅನುದಾನವನ್ನು ತಾಂತ್ರಿಕ ಕಾರಣಗಳಿಂದ ಚೇಂಜ್ ಆಫ್ ವರ್ಕ್ ಮೂಲಕ ನಿಂಬರಗಾ ಕೆರೆಗೆ ವರ್ಗಾಯಿಸಿ ಕಾಮಗಾರಿ ಆರಂಭಿಸಲಾಗಿತ್ತು. ಆರಂಭದಲ್ಲಿ ವೇಗವಾಗಿ ನಡೆದ ಕಾಮಗಾರಿ ಬಳಿಕ ನಿಧಾನಗೊಂಡು, ಈಗ ಸಂಪೂರ್ಣ ಸ್ಥಗಿತಗೊಂಡಂತಾಗಿದೆ. ಸುಮಾರು 79 ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣಗೊಳ್ಳಬೇಕಿದ್ದ ಕೆರೆ ಕಾಮಗಾರಿಯು ಶೇ.50ರಷ್ಟು ಕೂಡ ಪೂರ್ಣಗೊಂಡಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.



☛ ಉದಯವಾಹಿನಿ ಚಿತ್ರ

ನಿರ್ಮಾಣಗೊಂಡಿರುವ ಭಾಗದಲ್ಲಿಯೇ ಕಳಪೆ ಕಾಮಗಾರಿ ನಡೆದಿರುವುದು ಸ್ಪಷ್ಟವಾಗುತ್ತಿದೆ ಎಂದು ರೈತರು ದೂರಿದ್ದಾರೆ. ಕೆರೆಯ ಎಡ ಹಾಗೂ ಬಲ ದಂಡೆ ಗೋಡೆಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದು, ಕೆಲವೆಡೆ ಗೋಡೆಗಳು ಉದುರಿ ಬೀಳುತ್ತಿರುವ ದೃಶ್ಯ ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ.

ಇನ್ನೂ ಕಾಲುವೆ ಕಾಮಗಾರಿ ಪೂರ್ಣವಾಗದೇ ಇರುವುದರಿಂದ ಯೋಜನೆಯ ಉದ್ದೇಶವೇ ವಿಫಲವಾಗುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

**ತಕ್ಷಣ ಕಾಮಗಾರಿ ಆರಂಭಕ್ಕೆ ಒತ್ತಾಯ**

**ಉನ್ನತ ಅಧಿಕಾರಿಗಳು ತಕ್ಷಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಕಾಮಗಾರಿಗೆ ವೇಗ ನೀಡಿ ಶೀಘ್ರ ಪೂರ್ಣಗೊಳಿಸಬೇಕು. ಇಲ್ಲವಾದಲ್ಲಿ ರೈತರು ಮತ್ತು ಸಾರ್ವಜನಿಕರೊಂದಿಗೆ ಹೋರಾಟ ಕೈಗೊಳ್ಳಲಾಗುವುದು'' ಎಂದು ಕರವೇ ನಿಂಬರಗಾ ಶಾಖೆಯ ಅಧ್ಯಕ್ಷ ಬಸವರಾಜ ಯಳಸಂಗಿ ಎಚ್ಚರಿಕೆ ನೀಡಿದ್ದಾರೆ.**

ಕೆರೆ ನಿರ್ಮಾಣ ಪೂರ್ಣಗೊಂಡರೆ ಅಂತರ್ಜಲ ಮಟ್ಟ ಹೆಚ್ಚಾಗಿ ಸುತ್ತಮುತ್ತಲಿನ ರೈತರಿಗೆ ಕೃಷಿಗೆ ಅಗತ್ಯವಾದ ನೀರು ದೊರೆಯಲಿದೆ ಎಂಬ ನಿರೀಕ್ಷೆ ರೈತರಲ್ಲಿತ್ತು. ಆದರೆ ಕಾಮಗಾರಿ ವಿಳಂಬದಿಂದ ರೈತರು ನೀರಿನ ತೀವ್ರ ಅಭಾವ ಎದುರಿಸುತ್ತಿದ್ದಾರೆ. ಬಾವಿ ಹಾಗೂ ಬೋರ್‌ವೆಲ್‌ಗಳು ಒಣಗಿ ಹೋಗಿರುವ ಪರಿಣಾಮ ಬೆಳೆ ಉತ್ಪಾದನೆ ಕುಸಿದಿದ್ದು, ಅನೇಕ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೆರೆ ನಿರ್ಮಾಣವಾದರೆ ವಾಣಿಜ್ಯ ಬೆಳೆ ಬೆಳೆಯಲು ಅನುಕೂಲವಾಗುವುದರ ಜೊತೆಗೆ ಹೈನುಗಾರಿಕೆಗೆ ಸಹ ಉತ್ತೇಜನ ಸಿಗಲಿದೆ ಎಂಬ ಆಶಾಭಾವನೆ ಈಗ ಕುಸಿಯತೊಡಗಿದೆ.

## ನೀರಿನ ಸಮಸ್ಯೆ : ಹೊಸ ಬೋರ್‌ವೆಲ್‌ಗೆ ಭರವಸೆ

• ಉದಯವಾಹಿನಿ ಔರಾದ್

ತಾಲ್ಲೂಕಿನ ಜಂಬಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಹಾರಾಜವಾಡಿ ಗ್ರಾಮದಲ್ಲಿ ಉಂಟಾಗಿರುವ ತೀವ್ರ ಕುಡಿಯುವ ನೀರಿನ ಸಮಸ್ಯೆ ಹಿನ್ನೆಲೆಯಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ ಹಾಗೂ ಸಹಾಯಕ ನಿರ್ದೇಶಕರು (ಗ್ರಾ.ಉ) ಶಿವಕುಮಾರ್ ಘಾಟೆ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗ್ರಾಮದಲ್ಲಿನ ಪ್ರಮುಖ ನೀರಿನ ಮೂಲಗಳು ಬತ್ತಿಹೋಗಿರುವ ಕಾರಣ ಗ್ರಾಮಸ್ಥರು ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ ಸ್ಥಳೀಯರು ಅಧಿಕಾರಿಗಳ ಗಮನಕ್ಕೆ ತಂದರು. ಸಮಸ್ಯೆಗೆ ತಕ್ಷಣ ಸ್ಪಂದಿಸಿದ ಅಧಿಕಾರಿಗಳು, ಸಂಜೆ ವೇಳೆಗೆ ಹೊಸ ಬೋರ್‌ವೆಲ್ ಕೊರೆಸುವ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಜೊತೆಗೆ ತಾತ್ಕಾಲಿಕ ಪರಿಹಾರವಾಗಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಹಿಂದೆ ಕೂಡ ಮೇ 5ರಂದು ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಹಳೆಯ ಬೋರ್‌ವೆಲ್‌ಗೆ ರೀ-ಬೋರ್ ಮಾಡಿಸಿ ಪರ್ಯಾಯ ವ್ಯವಸ್ಥೆ ಕಲ್ಪಿಸಿದ್ದರು. ಆದರೆ ಗ್ರಾಮಸ್ಥರ ಅವಶ್ಯಕತೆಗೆ ತಕ್ಕಷ್ಟು ನೀರು ಲಭ್ಯವಾಗದ ಹಿನ್ನೆಲೆ ಸಮಸ್ಯೆ ಮುಂದುವರಿದಿತ್ತು. ಇದರಿಂದ ಅಧಿಕಾರಿಗಳು ಮತ್ತೊಮ್ಮೆ ಗ್ರಾಮಕ್ಕೆ ಭೇಟಿ ನೀಡಿ ಹೊಸ ಬೋರ್‌ವೆಲ್ ಕಾಮಗಾರಿಗೆ ಮುಂದಾಗಿದ್ದಾರೆ.



☛ ಉದಯವಾಹಿನಿ ಚಿತ್ರ

ಈ ವೇಳೆ ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗದ ಎಇಇ ಮಾರುತಿ ರಾಠೋಡ, ತಾಪಂ ಟಿಸಿ ಆನಂದ ಕಾಳಗಾಪೂರೆ, ತಾಲ್ಲೂಕು ಪಂಚಾಯಿತಿ ಐಇಸಿ ಸಂಯೋಜಕ ಅಂಬಾದಾಸ ಪಾಟೀಲ್ ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು

ಮಹಾರಾಜವಾಡಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿರುವ ಹಿನ್ನೆಲೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ. ಈಗಿರುವ ನೀರಿನ ಮೂಲಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಆದ್ದರಿಂದ ತಕ್ಷಣ ಹೊಸ ಬೋರ್‌ವೆಲ್ ಕೊರೆಸುವ ಕ್ರಮ ಕೈಗೊಳ್ಳಲಾಗಿದೆ.

## ಅನಾನಸ್ ದರ ತೀವ್ರ ಕುಸಿತ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ರೈತರು

• ಉದಯವಾಹಿನಿ ಶಿರಸಿ

ಸ್ಥಳೀಯ ಮಾರುಕಟ್ಟೆಯಲ್ಲಿ ಮಾವಿನ ಹಣ್ಣಿನ ಭರಪೂರ ಆಗಮನವು ತಾಲ್ಲೂಕಿನ ಅನಾನಸ್ ಬೆಳೆಗಾರರ ಪಾಲಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಮಾರುಕಟ್ಟೆಯಲ್ಲಿ ಮಾವಿನ ಹಂಗಾಮು ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಅನಾನಸ್ ದರದಲ್ಲಿ ಭಾರಿ ಕುಸಿತ ಕಂಡುಬಂದಿದ್ದು, ಸ್ಥಳೀಯ ಮಾರುಕಟ್ಟೆಯನ್ನೇ ನಂಬಿಕೊಂಡಿದ್ದ ರೈತರು ಈಗ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ತಾಲ್ಲೂಕಿನ ಬನವಾಸಿ ಹೋಬಳಿಯೊಂದರಲ್ಲೇ ಅಂದಾಜು 350 ಎಕರೆಗೂ ಅಧಿಕ ಪ್ರದೇಶದಲ್ಲಿ ಅನಾನಸ್ ಬೆಳೆಯಲಾಗುತ್ತಿದೆ. ಇಲ್ಲಿನ ರೈತರು ಸಾಮಾನ್ಯವಾಗಿ ಮಾವಿನ ಹಂಗಾಮಿನಲ್ಲಿ ಅನಾನಸ್ ಕೊಯ್ಲಿಗೆ ಬರದಂತೆ ಮುನ್ನೆಚ್ಚರಿಕೆ ವಹಿಸಿ ಕೃಷಿ ಮಾಡುತ್ತಾರೆ. ಆದರೆ, ಈ ಬಾರಿ ಹವಾಮಾನ ವೈಪರೀತ್ಯ ಹಾಗೂ ಅತಿಯಾದ ಉಷ್ಣಾಂಶದ ಜತೆಗೆ ಆಗಾಗ ಸುರಿಯುತ್ತಿರುವ ಮಳೆಯಿಂದಾಗಿ ಮಾವಿನ ಜತೆಜತೆಗೇ ಅನಾನಸ್ ಕೂಡ ಏಕಕಾಲಕ್ಕೆ ಮಾರುಕಟ್ಟೆಗೆ ಬಂದಿದೆ.

ಕೇವಲ ಒಂದು ತಿಂಗಳ ಹಿಂದಷ್ಟೇ ಮಾರುಕಟ್ಟೆಯಲ್ಲಿ ಪ್ರತಿ ಕೆಜಿ ಅನಾನಸ್‌ಗೆ ರೂ.25 ಲಭಿಸುತ್ತಿತ್ತು. ಆದರೆ ಮಾವು ಮಾರುಕಟ್ಟೆಗೆ ಲಗ್ಗೆ ಇಡುತ್ತಿದ್ದಂತೆಯೇ ಬೇಡಿಕೆ ಕುಸಿದು, ಪ್ರಸ್ತುತ ದರ ಕೇವಲ ರೂ.13ಕ್ಕೆ ಇಳಿಕೆಯಾಗಿದೆ. ಇದು ಲಾಭದ ಲೆಕ್ಕಾಚಾರವನ್ನು ತಲೆಕೆಳಗಾಗಿಸಿರುವುದು ಅನಾನಸ್ ಬೆಳೆಗಾರರ ಆತಂಕಕ್ಕೆ ಕಾರಣವಾಗಿದೆ.

## ಸತ್ಯ ಪ್ರತಿಪಾದನಾ ಸತ್ಯಾಗ್ರಹ ಹೋರಾಟಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ ಬಣದ ಬೆಂಬಲ : ಪಾಪು ಧಾರೆ

• ಉದಯವಾಹಿನಿ ಧಾರವಾಡ

ನಗರದ ಅಭಿವೃದ್ಧಿ, ಆಡಳಿತಾತ್ಮಕ ಸೌಲಭ್ಯ ಹಾಗೂ ಸಮತೋಲನದ ನಗರಾಭಿವೃದ್ಧಿಯ ದೃಷ್ಟಿಯಿಂದ ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚಿಸಬೇಕೆಂಬ ನ್ಯಾಯಸಮ್ಮತ ಬೇಡಿಕೆಯನ್ನು ಮುಂದಿಟ್ಟುಕೊಂಡು ನಡೆಯುತ್ತಿರುವ ''ಸತ್ಯ ಪ್ರತಿಪಾದನಾ ಸತ್ಯಾಗ್ರಹ'' ಹೋರಾಟಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ ಬಣದ ವತಿಯಿಂದ ಸಂಪೂರ್ಣ ಬೆಂಬಲ ವ್ಯಕ್ತಪಡಿಸಲಾಗುತ್ತದೆ.

ಧಾರವಾಡ ಜನರ ದೀರ್ಘಕಾಲದ ಬೇಡಿಕೆಯಾದ ಪ್ರತ್ಯೇಕ ಪಾಲಿಕೆ ಹೋರಾಟವು ಯಾವುದೇ ಒಂದು ರಾಜಕೀಯ ಪಕ್ಷದ ಹೋರಾಟವಲ್ಲ. ಇದು ಧಾರವಾಡದ ಸಮಗ್ರ ಅಭಿವೃದ್ಧಿಗಾಗಿ ನಡೆಯುತ್ತಿರುವ ಜನರ ಹೋರಾಟವಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ ಬಣದ ಬೆಳಗಾವಿ ವಿಭಾಗೀಯ ಅಧ್ಯಕ್ಷರಾದ ಪಾಪು ಧಾರೆ ತಿಳಿಸಿದ್ದಾರೆ.

ಕೆಲವರು ಈ ಹೋರಾಟವನ್ನು ಕೇವಲ ಕಾಂಗ್ರೆಸ್ ಪಕ್ಷದ ಹೋರಾಟ ಎಂಬ ರೀತಿಯಲ್ಲಿ ಬಿಂಬಿಸಲು ಪ್ರಯತ್ನಿಸುತ್ತಿರುವುದು ಸರಿಯಲ್ಲ. ಧಾರವಾಡದ ಅಭಿವೃದ್ಧಿ ಎಂಬುದು ರಾಜಕೀಯ ಪಕ್ಷಗಳನ್ನು ಮೀರಿದ ಜನಪರ ವಿಚಾರವಾಗಿದೆ.



ಆದ್ದರಿಂದ ಬಿಜೆಪಿ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳು, ಕನ್ನಡಪರ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ರೈತ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು ಹಾಗೂ ಸಾರ್ವಜನಿಕರು ಪಕ್ಷಾತೀತವಾಗಿ ಈ ನ್ಯಾಯಯುತ ಹೋರಾಟಕ್ಕೆ ಕೈಜೋಡಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಈ ಕುರಿತು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಹಾಗೂ ಶಾಸಕ ಅರವಿಂದ್ ಬೆಲ್ಲದವರು ರಾಜ್ಯಪಾಲರಿಗೆ ಪತ್ರ ಬರೆದು ವಿಷಯವನ್ನು ಮನವರಿಕೆ ಮಾಡಿಕೊಡುವುದಾಗಿ ಹೇಳಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ರಾಜ್ಯ ಸರ್ಕಾರ ಕಳುಹಿಸಿರುವ ಪ್ರತ್ಯೇಕ ಪಾಲಿಕೆ ಪ್ರಸ್ತಾವನೆಗೆ ರಾಜ್ಯಪಾಲರು ಶೀಘ್ರ ಅನುಮೋದನೆ ನೀಡುವ ಮೂಲಕ ಧಾರವಾಡ ಜನರ ಆಶಯವನ್ನು ಈಡೇರಿಸಬೇಕು ಎಂದು ಆಗ್ರಹಿಸಲಾಗಿದೆ.

ಧಾರವಾಡದ ಜನರ ನ್ಯಾಯಯುತ ಹೋರಾಟಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ ಬಣ ಸದಾ ಜೊತೆಗಿದ್ದು, ಮುಂದಿನ ಹೋರಾಟಗಳಲ್ಲಿಯೂ ಸಕ್ರಿಯ ಬೆಂಬಲ ನೀಡಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಇವರಿಂದ:** ಪಾಪು ಧಾರೆ ಬೆಳಗಾವಿ ವಿಭಾಗೀಯ ಅಧ್ಯಕ್ಷರು,ಕರ್ನಾಟಕ ರಕ್ಷಣಾ ವೇದಿಕೆಪ್ರವೀಣ್ ಕುಮಾರ್ ಶೆಟ್ಟಿ ಬಣ.

## ಖಾಸಗಿ ಶಾಲೆಗಳ ವ್ಯಾಮೋಹ: ಶಾಶ್ವತ ಬೀಗ ಕಂಡ 142 ಸರ್ಕಾರಿ ಶಾಲೆ

### ಪಾಲಕರು ಕೆಲಸಕ್ಕೆ ಗೋವಾಕ್ಕೆ ವಲಸೆ ಹೋಗುತ್ತಿರುವುದರಿಂದ ಅವರೊಟ್ಟಿಗೆ ಮಕ್ಕಳು ಗೋವಾದ ಶಾಲೆಗಳಿಗೆ ಸೇರಿಕೊಳ್ಳುತ್ತಿದ್ದಾರೆ

• ಉದಯವಾಹಿನಿ ಕಾರವಾರ

ರಾಜ್ಯದ ಗಡಿಭಾಗದಲ್ಲಿರುವ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ವರ್ಷವೂ ಗಣನೀಯ ಇಳಿಕೆ ಕಾಣುತ್ತಿದೆ. ಖಾಸಗಿ ಶಾಲೆಗಳ ವ್ಯಾಮೋಹ ಒಂದೆಡೆಯಾದರೆ, ಗಡಿಭಾಗದ ವಿದ್ಯಾರ್ಥಿಗಳು ಗೋವಾದ ಖಾಸಗಿ ಶಾಲೆಯತ್ತ ಮುಖ ಮಾಡುತ್ತಿದ್ದಾರೆ. ಇದರ ಪರಿಣಾಮವಾಗಿ 17 ವರ್ಷಗಳಲ್ಲಿ 142 ಸರ್ಕಾರಿ ಶಾಲೆಗಳಿಗೆ ಬೀಗ ಬಿದ್ದಿದೆ.

ಗೋವಾ ರಾಜ್ಯದೊಂದಿಗೆ ಗಡಿ ಹಂಚಿಕೊಂಡಿರುವ ಕಾರವಾರ ತಾಲ್ಲೂಕಿನಲ್ಲಿ 31 ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳು, ಜೊಯಿಡಾ ತಾಲ್ಲೂಕಿನಲ್ಲಿ 14 ಶಾಲೆಗಳು ಶಾಶ್ವತವಾಗಿ ಮುಚ್ಚಿವೆ. ಈ ಶಾಲೆಗಳು ಒಂದು ಕಾಲದಲ್ಲಿ ಕುಗ್ರಾಮಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸಿದ್ದವು.

2009ರಿಂದ ವಿದ್ಯಾರ್ಥಿಗಳ ಸಂಖ್ಯೆ ಶೂನ್ಯ ತಲುಪಿದ್ದರಿಂದ ಮುಚ್ಚಿರುವ ಶಾಲೆಗಳ ಪೈಕಿ ಕಾರವಾರ ಶೈಕ್ಷಣಿಕ ಜಿಲ್ಲೆಯಲ್ಲೇ 90 ಶಾಲೆಗಳಿವೆ. ಶಿರಸಿ ಶೈಕ್ಷಣಿಕ ಜಿಲ್ಲೆಗಳಲ್ಲಿ ಈ ಸಂಖ್ಯೆ 52ಕ್ಕೆ ತಲುಪಿದೆ. ಶಿರಸಿ ತಾಲ್ಲೂಕಿನಲ್ಲಿ 19 ಶಾಲೆಗಳು ಹಾಗೂ ಹೊನ್ನಾವರದಲ್ಲಿ 23 ಶಾಲೆಗಳು ಶೂನ್ಯ ದಾಖಲಾತಿಯ ಪರಿಣಾಮ ಬಾಗಿಲು ಮುಚ್ಚಿವೆ.

ಒಂದೂವರೆ ದಶಕದಿಂದ ಈಚೆಗೆ ಸರ್ಕಾರಿ ಶಾಲೆಗಳಿಗೆ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಕಡಿಮೆ ಆಗುತ್ತಿದೆ.



☛ ಉದಯವಾಹಿನಿ ಚಿತ್ರ

**2009ರಿಂದ ವಿದ್ಯಾರ್ಥಿಗಳ ಸಂಖ್ಯೆ ಶೂನ್ಯ**

ಕಳೆದ ಐದು ವರ್ಷಗಳಿಂದ ಸಮಸ್ಯೆ ಬಿಗಡಾಯಿಸಿದೆ. ಬಾಗಿಲು ಮುಚ್ಚಿದ ಶಾಲೆಗಳ ಪೈಕಿ ಶೇ 45ರಷ್ಟು ಕಳೆದ ಐದು ವರ್ಷಗಳ ಅವಧಿಯಲ್ಲಿ ಶೂನ್ಯ ದಾಖಲಾತಿ ಹೊಂದಿರುವಂತವು' ಎಂದು ಶಿಕ್ಷಣ ಇಲಾಖೆ ಹಿರಿಯ ಅಧಿಕಾರಿಯೊಬ್ಬರು ಹೇಳುತ್ತಾರೆ.

> **ಶೂನ್ಯ ದಾಖಲಾತಿ ಇರುವ ಶಾಲೆಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗುತ್ತದೆ. ಮೂರು ವರ್ಷದ ಅವಧಿಯಲ್ಲಿ ಪುನಃ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದರೆ ಶಾಲೆ ಪುನರಾರಂಭಗೊಳ್ಳುತ್ತದೆ.**
> **- ಡಿ.ಆರ್.ನಾಯ್ಕ, ಡಿಡಿಪಿಐ, ಶಿರಸಿ ಶೈಕ್ಷಣಿಕ ಜಿಲ್ಲೆ**

'ಕಾರವಾರ ತಾಲ್ಲೂಕಿನ ಮಾಜಾಳಿ, ಸದಾಶಿವಗಡ, ಅಸ್ನೋಟಿ, ಮುಡಗೇರಿ ಸೇರಿದಂತೆ ಗೋವಾಕ್ಕೆ ಸಮೀಪದಲ್ಲಿನ ಗ್ರಾಮಗಳ ವಿದ್ಯಾರ್ಥಿಗಳನ್ನು ಗೋವಾದ ಲೋಲೆಮ್, ಇತರ ಕಡೆಗಳಲ್ಲಿನ ಖಾಸಗಿ ಶಾಲೆಗಳು ಸೆಳೆಯುತ್ತಿವೆ. ಇದೇ ಸ್ಥಿತಿ ಜೊಯಿಡಾ ಭಾಗದ ಡಿಗ್ಗಿ, ಇನ್ನಿತರ ಗ್ರಾಮಗಳಲ್ಲೂ ಇದೆ. ಆದರೆ, ಅಲ್ಲಿ ಪಾಲಕರು ಕೆಲಸಕ್ಕೆ ಗೋವಾಕ್ಕೆ ವಲಸೆ ಹೋಗುತ್ತಿರುವುದು ಹೆಚ್ಚುತ್ತಿರುವುದರಿಂದ ಅವರೊಟ್ಟಿಗೆ ಮಕ್ಕಳು ಗೋವಾದ ಶಾಲೆಗಳಿಗೆ ಸೇರಿಕೊಳ್ಳುತ್ತಿದ್ದಾರೆ. ಇದು ಗಡಿಭಾಗದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮೇಲೆ ಪರಿಣಾಮ ಬೀರುತ್ತಿದೆ' ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತ ಕಿಶನ್ ಕಾಂಬ್ಳೆ.

**ಮುಚ್ಚಿದ್ದು 10, ತೆರೆದಿದ್ದು 3:** 2025-26ರ ಶೈಕ್ಷಣಿಕ ಸಾಲಿನಲ್ಲಿ ಕಾರವಾರ ಶೈಕ್ಷಣಿಕ ಜಿಲ್ಲೆಯಲ್ಲಿ 10 ಸರ್ಕಾರಿ ಶಾಲೆಗಳು ಶೂನ್ಯ ದಾಖಲಾತಿ ಪರಿಣಾಮ ಬಾಗಿಲು ಮುಚ್ಚಿದ್ದವು. ಆದರೆ, ಕಳೆದ 9 ವರ್ಷಗಳಲ್ಲಿ ಜಿಲ್ಲೆಯಲ್ಲಿ ಕೇವಲ 3 ಶಾಲೆಗಳು ಮಾತ್ರವೇ ಪುನರಾರಂಭಗೊಂಡಿವೆ. ಹೊನ್ನಾವರ ತಾಲ್ಲೂಕಿನ ಹಿರೇಮಠ ಕಿರಿಯ ಪ್ರಾಥಮಿಕ ಶಾಲೆ, ಕಾರವಾರದ ಗೋಪಶಿಟ್ಟಾ ಹಿರಿಯ ಪ್ರಾಥಮಿಕ ಶಾಲೆ ಮತ್ತು ಅಂಕೋಲಾದ ಮಾಬಗೆ ಕಿರಿಯ ಪ್ರಾಥಮಿಕ ಶಾಲೆಗಳು ವಿದ್ಯಾರ್ಥಿಗಳ ಪ್ರವೇಶಾತಿಯೊಂದಿಗೆ ಮರು ಹುಟ್ಟು ಪಡೆದುಕೊಂಡಿವೆ.

### ಕಾಂಗೋ ಮತ್ತು ಉಗಾಂಡಾದಲ್ಲಿ ಬಂಡಿಬುಗ್ಯೋ ವೈರಸ್‌ನಿಂದ ಉಂಟಾಗಿರುವ ಎಬೋಲಾ ರೋಗ

# ಎಬೋಲಾ ವೈರಸ್ ಹೊಸ ತಳಿ ಅಬ್ಬರ: ಸೋಂಕಿಗೆ 87 ಸಾವು




**ಅಂತಾರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಣೆ**

**ಜಿನೀವಾ:** ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ ಮತ್ತು ಉಗಾಂಡಾದಲ್ಲಿ ಅಪರೂಪದ ಬಂಡಿಬುಗ್ಯೋ ತಳಿಯ ಎಬೋಲಾ ವೈರಸ್ ವೇಗವಾಗಿ ಹರಡುತ್ತಿದ್ದು, 87 ಜನರನ್ನು ಬಲಿಪಡೆದಿದೆ. ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಜಾಗತಿಕ ಮಟ್ಟದ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ಘೋಷಿಸಿದೆ.

ಭಾನುವಾರ ಜಿನೀವಾದಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ವಿಶ್ವ ಆರೋಗ್ಯ ಸಂಸ್ಥೆ, ಕಾಂಗೋ ಮತ್ತು ಉಗಾಂಡಾದಲ್ಲಿ ಬಂಡಿಬುಗ್ಯೋ ವೈರಸ್‌ನಿಂದ ಉಂಟಾಗಿರುವ ಎಬೋಲಾ ರೋಗವು ಅಂತಾರಾಷ್ಟ್ರೀಯ ಮಟ್ಟದ ತುರ್ತು ಪರಿಸ್ಥಿತಿಯಾಗಿದೆ. ಆದರೆ, ಇದು ಸಾಂಕ್ರಾಮಿಕ ರೋಗದ ಮಾನದಂಡಗಳನ್ನು ಇನ್ನೂ ತಲುಪಿಲ್ಲ, ಎಂದು ಹೇಳಿದೆ.

ಕಾಂಗೋದ ಪೂರ್ವ ಇಟುರಿ ಪ್ರಾಂತ್ಯದಲ್ಲಿ ಪ್ರಕರಣಗಳು ಮತ್ತು ಸಾವುಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ವೈರಸ್ ಹರಡುವಿಕೆಯನ್ನು ತಡೆಯಲು ಆರೋಗ್ಯ ಕಾರ್ಯಕರ್ತರು ಸ್ಕ್ರೀನಿಂಗ್ ಮತ್ತು ಸಂಪರ್ಕಿತರ ಪತ್ತೆ ಹಚ್ಚುವ ಕಾರ್ಯವನ್ನು ತೀವ್ರಗೊಳಿಸಿದ್ದಾರೆ.


**ಹೆಚ್ಚಾಗುತ್ತಿದೆ ಜನರ ಆತಂಕ:** ಇಟುರಿಯ ರಾಜಧಾನಿ ಬುನಿಯಾದಲ್ಲಿ ಪ್ರತಿದಿನ ಹೆಣಗಳನ್ನು ಹೂಳಲಾಗುತ್ತಿದ್ದು, ಜನರ ಆತಂಕ ಹೆಚ್ಚಾಗಿದೆ. ಪ್ರತಿದಿನ ಜನರು ಸಾಯುತ್ತಿದ್ದಾರೆ. ಇದು ಸುಮಾರು ಒಂದು ವಾರದಿಂದ ನಡೆಯುತ್ತಿದೆ. ಒಂದೇ ದಿನದಲ್ಲಿ ನಾವು ಎರಡು, ಮೂರು ಅಥವಾ ಅದಕ್ಕಿಂತ ಹೆಚ್ಚು ಜನರನ್ನು ಹೂಳುತ್ತಿದ್ದೇವೆ. ಇದಾವ ರೀತಿಯ ಕಾಯಿಲೆ ಎಂಬುದು ನಮಗೆ ಇನ್ನೂ ಅರ್ಥವಾಗುತ್ತಿಲ್ಲ ಎಂದು ಬುನಿಯಾದ ನಿವಾಸಿ ಜೀನ್ ಮಾರ್ಕ್ ಅಸಿಮ್ವೆ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಇಲ್ಲಿಯವರೆಗೆ ವರದಿಯಾದ 87 ಸಾವುಗಳ ಪೈಕಿ, ಮೊಂಗ್ವಾಲುವಿನಲ್ಲಿ 57, ರವಾಂಪರಾದಲ್ಲಿ 27 ಮತ್ತು ಬುನಿಯಾದಲ್ಲಿ 3 ಸಾವುಗಳು ಸಂಭವಿಸಿವೆ. ಸ್ಥಳೀಯ ಸಮುದಾಯಗಳಲ್ಲಿ, ವಿಶೇಷವಾಗಿ ಮೊಂಗ್ವಾಲುವಿನಲ್ಲಿ ಅನೇಕ ಸೋಂಕಿತರು ಇರುವುದರಿಂದ ಸಂಪರ್ಕಿತರನ್ನು ಪತ್ತೆಹಚ್ಚುವುದು ಕಷ್ಟಕರವಾಗಿದೆ.

ಇದರ ಜೊತೆಗೆ, ಇಸ್ಲಾಮಿಕ್ ಸ್ಟೇಟ್ ಬೆಂಬಲಿತ ಉಗ್ರರ ದಾಳಿಗಳು ನಡೆಯುತ್ತಿರುವ ಇಟುರಿಯಲ್ಲಿ ಹಿಂಸಾಚಾರದ ವಾತಾವರಣ ಇರುವುದರಿಂದ ತುರ್ತು ಆರೋಗ್ಯ ಕಾರ್ಯಾಚರಣೆಗೆ ತೀವ್ರ ಅಡ್ಡಿಯುಂಟಾಗುತ್ತಿದೆ ಎಂದು ಕಸೇಯಾ ಹೇಳಿದ್ದಾರೆ.

**ಏನಿದು ಎಬೋಲಾ?:** ಎಬೋಲಾ ರಕ್ತ, ವಾಂತಿ ಮತ್ತು ವೀರ್ಯದಂತಹ ದೈಹಿಕ ದ್ರವಗಳ ಮೂಲಕ ಹರಡುತ್ತದೆ. ಇದು ಅಪರೂಪವಾದರೂ ಅತ್ಯಂತ ಅಪಾಯಕಾರಿ ಮತ್ತು ಮಾರಣಾಂತಿಕ ಕಾಯಿಲೆಯಾಗಿದೆ. ಕಾಂಗೋದ ಆರೋಗ್ಯ ಸಚಿವ ಸ್ಯಾಮ್ಯುಯೆಲ್-ರೋಜರ್ ಕಾಂಬಾ ಅವರು ಮಾತನಾಡಿ, ಈ ಹಿಂದಿನ ಎಬೋಲಾ ಏಕಾಏಕಿ ಹರಡುವಿಕೆಗಿಂತ ಭಿನ್ನವಾದ ಹಾಗೂ ಅಪರೂಪದ ಬಂಡಿಬುಗ್ಯೋ ವೈರಸ್ ತಳಿಯನ್ನು ಪರೀಕ್ಷೆಗಳು ಖಚಿತಪಡಿಸಿವೆ ಎಂದು ಹೇಳಿದ್ದಾರೆ. 1976 ರಲ್ಲಿ ಮೊದಲ ಬಾರಿಗೆ ಕಾಂಗೋದಲ್ಲಿ ಎಬೋಲಾ ಕಾಣಿಸಿಕೊಂಡಿತ್ತು.

**ಗಣಿಗಾರಿಕೆ ಪ್ರದೇಶದಲ್ಲಿ ಆರಂಭವಾದ ಸೋಂಕು**



ಆಫ್ರಿಕಾ ಸಿಡಿಸಿ ಡೈರೆಕ್ಟರ್ - ಜನರಲ್ ಡಾ. ಜೀನ್ ಕಸೇಯಾ ಅವರ ಪ್ರಕಾರ, ಇಟುರಿಯ ಜನನಿಬಿಡ ಗಣಿಗಾರಿಕೆ ಪ್ರದೇಶವಾದ ಮೊಂಗ್ವಾಲು ಹೆಲ್ತ್ ಜೋನ್‌ನಲ್ಲಿ ಮೊದಲ ಪ್ರಕರಣಗಳು ವರದಿಯಾಗಿವೆ. ರೋಗಿಗಳು ಚಿಕಿತ್ಸೆಗಾಗಿ ಬೇರೆಡೆಗೆ ತೆರಳಿದ ಕಾರಣ ರವಾಂಪರಾ ಮತ್ತು ಬುನಿಯಾ ಪ್ರದೇಶಗಳಿಗೂ ಸೋಂಕು ಹರಡಿತು. ಇದರಿಂದಾಗಿ ಒಟ್ಟು ಮೂರು ಆರೋಗ್ಯ ವಲಯಗಳಲ್ಲಿ ವೈರಸ್ ವ್ಯಾಪಿಸಿದೆ ಎಂದು ಅವರು ತಿಳಿಸಿದ್ದಾರೆ.

**ಸಾವಿನ ಸಂಖ್ಯೆಯಲ್ಲಿ ದಿಢೀರ್ ಏರಿಕೆ**

ಮಾಹಿತಿ ನೀಡಿದ್ದ ಆಫ್ರಿಕಾ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರವು, ಈವರೆಗೆ ಕನಿಷ್ಠ 87 ಜನರು ಸಾವನ್ನಪ್ಪಿದ್ದಾರೆ ಎಂದು ತಿಳಿಸಿತ್ತು. ವೈರಸ್ ಸಮುದಾಯಗಳಲ್ಲಿ ಅತ್ಯಂತ ಸಕ್ರಿಯವಾಗಿ ಹರಡುತ್ತಿದೆ ಎಂದು ಅದು ಎಚ್ಚರಿಸಿದೆ. ಶುಕ್ರವಾರ ಅಧಿಕಾರಿಗಳು 65 ಸಾವುಗಳು ಮತ್ತು 246 ಶಂಕಿತ ಪ್ರಕರಣಗಳನ್ನು ವರದಿ ಮಾಡಿದ್ದರು. ಆದರೆ ಶನಿವಾರದ ಹೊತ್ತಿಗೆ ಶಂಕಿತ ಪ್ರಕರಣಗಳ ಸಂಖ್ಯೆ 336 ಕ್ಕೆ ಏರಿಕೆಯಾಗಿದ್ದು, 13 ಜನರಲ್ಲಿ ಸೋಂಕು ಇರುವುದು ದೃಢಪಟ್ಟಿದೆ. ಖಚಿತಪಟ್ಟವರಲ್ಲಿ ನಾಲ್ವರು ಈಗಾಗಲೇ ಮೃತಪಟ್ಟಿದ್ದಾರೆ.

## ಸಿಎನ್‌ಜಿ ದರ ಮತ್ತೆ 1 ರೂ. ಏರಿಕೆ




**ಪರಿಷ್ಕೃತ ದರ :**
**ದೆಹಲಿ: ಪ್ರತಿ ಕೆಜಿಗೆ 80.09 ರೂ.**
**ನೋಯ್ಡಾ : ಪ್ರತಿ ಕೆಜಿಗೆ 88.70 ರೂ.**
**ಗಾಜಿಯಾಬಾದ್: ಪ್ರತಿ ಕೆಜಿಗೆ 88.70 ರೂ.**

**ನವದೆಹಲಿ:** ಸಂಕುಚಿತ ನೈಸರ್ಗಿಕ ಅನಿಲ (ಸಿಎನ್‌ಜಿ ) ಬೆಲೆಯನ್ನು ಮತ್ತೆ ಕೆಜಿಗೆ 1 ರೂ. ಹೆಚ್ಚಿಸಲಾಗಿದ್ದು, ಕಳೆದ ಎರಡು ದಿನಗಳಲ್ಲಿ ಎರಡನೇ ಏರಿಕೆಯಾಗಿದೆ. ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ಹಾರ್ಮುಜ್ ಜಲಸಂಧಿಯ ದಿಗ್ಬಂಧನದಿಂದಾಗಿ ಇಂಧನ ಕಂಪನಿಗಳ ಮೇಲೆ ನಿರಂತರ ಒತ್ತಡದ ಮಧ್ಯೆ, ಹೊಸ ಏರಿಕೆಯಾಗಿದೆ.

ದೆಹಲಿಯಲ್ಲಿ ಸಿಎನ್‌ಜಿ ಈಗ ಕೆಜಿಗೆ 80.09 ರೂ., ನೋಯ್ಡಾ ಮತ್ತು ಗಾಜಿಯಾಬಾದ್‌ನಲ್ಲಿ ಪರಿಷ್ಕೃತ ದರ ಕೆಜಿಗೆ 88.70 ರೂ. ಕೇವಲ ಎರಡು ದಿನಗಳಲ್ಲಿ ಇದು ಎರಡನೇ ಬೆಲೆ ಏರಿಕೆಯಾಗಿದೆ. ಇದಕ್ಕೂ ಮೊದಲು ಮೇ 15 ರಂದು ಸಿಎನ್‌ಜಿ ಬೆಲೆಯನ್ನು ಕೆಜಿಗೆ 2 ರೂ.ಗೆ ಹೆಚ್ಚಿಸಲಾಗಿತ್ತು. ಸರ್ಕಾರಿ ಸ್ವಾಮ್ಯದ ತೈಲ ಸಂಸ್ಥೆಗಳು ಇಂಧನ ಬೆಲೆಯಲ್ಲಿ ಏರಿಕೆಯ ಹೊರತಾಗಿಯೂ 11 ವಾರಗಳವರೆಗೆ ಯಾವುದೇ ಬದಲಾವಣೆ ಮಾಡದೆ ಇರಿಸಿದ್ದವು, ಆದರೆ ಕಾರ್ಯಾಚರಣೆಗಳು ಆರ್ಥಿಕವಾಗಿ ಅಸಮರ್ಥನೀಯವಾದ ನಂತರ ಹೆಚ್ಚಳದ ಒಂದು ಭಾಗವನ್ನು ಅಂಗೀಕರಿಸಿದವು. ಏಪ್ರಿಲ್ 2022 ರಿಂದ ಬೆಲೆಗಳು ಸ್ಥಗಿತಗೊಂಡಿವೆ, ಆದರೆ ಲೋಕಸಭಾ ಚುನಾವಣೆಗೆ ಸ್ವಲ್ಪ ಮೊದಲು ಮಾರ್ಚ್ 2024ರಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ತಲಾ ಲೀಟರ್‌ಗೆ 2 ರೂ.ಗಳಷ್ಟು ಕಡಿತಗೊಳಿಸಲಾಯಿತು.

ಉಕ್ರೇನ್ ಮೇಲೆ ರಷ್ಯಾದ ಆಕ್ರಮಣದ ನಂತರ ಅಂತರರಾಷ್ಟ್ರೀಯ ತೈಲ ಬೆಲೆಗಳು ಗಗನಕ್ಕೇರಿದ ಕಾರಣ ದೇಶೀಯ ಗ್ರಾಹಕರನ್ನು ರಕ್ಷಿಸಲು ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಏಪ್ರಿಲ್ 2022 ರಲ್ಲಿ ದೈನಂದಿನ ಬೆಲೆ ಪರಿಷ್ಕರಣೆಯನ್ನು ಕೈಬಿಟ್ಟಿದ್ದವು.

2022-23ರ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಅವರು ಭಾರೀ ನಷ್ಟವನ್ನು ಅನುಭವಿಸಿದರು. ನಂತರದ ತಿಂಗಳುಗಳಲ್ಲಿ ದರಗಳು ಕುಸಿದಾಗ ಅವರು ಅದನ್ನು ಮರುಪಡೆಯಲು ಸಾಧ್ಯವಾಯಿತು. ಆದರೆ ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಮತ್ತೆ ಅಂತರರಾಷ್ಟ್ರೀಯ ತೈಲ ಬೆಲೆಗಳನ್ನು ಶೇಕಡಾ 50 ಕ್ಕಿಂತ ಹೆಚ್ಚು ಹೆಚ್ಚಿಸಿದೆ. ಪಶ್ಚಿಮ ಏಷ್ಯಾದಲ್ಲಿ ಯುದ್ಧ ಪ್ರಾರಂಭವಾಗುವ ಮೊದಲು ಫೆಬ್ರವರಿಯಲ್ಲಿ ಭಾರತ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಬುಟ್ಟಿ ಬ್ಯಾರೆಲ್‌ಗೆ ಸರಾಸರಿ 69 ಡಾಲರ್ ಆಗಿತ್ತು. ನಂತರದ ತಿಂಗಳುಗಳಲ್ಲಿ ಇದು ಬ್ಯಾರೆಲ್‌ಗೆ ಸರಾಸರಿ 113-114 ಡಾಲರ್ ಆಗಿತ್ತು.

## ಇಂದು ಸಿಎಂ ಆಗಿ ಸತೀಶನ್ ಪ್ರಮಾಣ



**ತಿರುವನಂತಪುರಂ:** ಒಂದು ದಶಕದ ಬಳಿಕ ಕೇರಳದಲ್ಲಿ ಯುಡಿಎಫ್ ಮತ್ತೆ ಅಧಿಕಾರಕ್ಕೆ ಬರಲು ಸಜ್ಜಾಗಿದ್ದು, ಕಾಂಗ್ರೆಸ್ ನಾಯಕ ವಿ.ಡಿ. ಸತೀಶನ್ ನಾಳೆ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಲಿದ್ದಾರೆ. ಸತೀಶನ್ ಅವರೊಂದಿಗೆ 20 ಸಚಿವರನ್ನು ಒಳಗೊಂಡ ಸಂಪೂರ್ಣ ಸಚಿವ ಸಂಪುಟವೂ ತಿರುವನಂತಪುರಂನ ಸೆಂಟ್ರಲ್ ಸ್ಟೇಡಿಯಂನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಪ್ರಮಾಣವಚನ ಸಮಾರಂಭಕ್ಕಾಗಿ ಸೆಂಟ್ರಲ್ ಸ್ಟೇಡಿಯಂನಲ್ಲಿ ಭಾರೀ ವೇದಿಕೆ ನಿರ್ಮಾಣ ಸೇರಿದಂತೆ ಸಿದ್ಧತೆಗಳು ವೇಗವಾಗಿ ನಡೆಯುತ್ತಿವೆ. ಸಾವಿರಾರು ಪಕ್ಷದ ಕಾರ್ಯಕರ್ತರು, ರಾಷ್ಟ್ರೀಯ ರಾಜಕೀಯ ನಾಯಕರು, ಸ್ಥಳೀಯ ಗಣ್ಯರಿಗಾಗಿ ಆಸನ ವ್ಯವಸ್ಥೆ ಮಾಡಲಾಗುತ್ತಿದೆ. ಮಳೆ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ತಾತ್ಕಾಲಿಕ ಶೆಡ್‌ಗಳನ್ನೂ ನಿರ್ಮಿಸಲಾಗುತ್ತಿದೆ. ಈ ನಡುವೆ ತಿರುವನಂತಪುರಂ ನಗರದಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿದೆ.

ವಿಐಪಿಗಳು ಹಾಗೂ ಯುಡಿಎಫ್ ಬೆಂಬಲಿಗರ ಹೆಚ್ಚಿನ ಸಂಖ್ಯೆಯ ಆಗಮನ ನಿರೀಕ್ಷೆಯಿರುವುದರಿಂದ ವಿಶೇಷ ಸಂಚಾರ ವ್ಯವಸ್ಥೆಯನ್ನೂ ಮಾಡಲಾಗಿದೆ. ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸ್ಪಷ್ಟ ಬಹುಮತದೊಂದಿಗೆ ಗೆಲುವು ಸಾಧಿಸಿ, ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಿತ್ತು.

ಕಳೆದ ಐದು ವರ್ಷಗಳಿಂದ ಪ್ರತಿಪಕ್ಷ ನಾಯಕನಾಗಿ ಕಾರ್ಯನಿರ್ವಹಿಸಿದ್ದ 61 ವರ್ಷದ ವಿ.ಡಿ. ಸತೀಶನ್ ಅವರು ಪಕ್ಷದ ನೆಲಮಟ್ಟದ ಸಂಘಟನೆಯನ್ನು ಪುನರುಜ್ಜೀವನಗೊಳಿಸಿದ ಶ್ರೇಯಸ್ಸಿಗೆ ಪಾತ್ರರಾಗಿದ್ದಾರೆ ಎಂದು ಹೇಳಲಾಗುತ್ತಿದೆ.

ಮುಖ್ಯಮಂತ್ರಿಯಾಗಿ ಸತೀಶನ್ ಅವರ ಹೆಸರನ್ನು ಘೋಷಿಸಿದ ಬಳಿಕ ಅವರು ಮೈತ್ರಿ ಪಕ್ಷಗಳೊಂದಿಗೆ ಹಲವು ಸಭೆಗಳನ್ನು ನಡೆಸಿ ಸಚಿವ ಸಂಪುಟ ರಚನೆ ಕುರಿತ ಚರ್ಚೆ ನಡೆಸಿದ್ದಾರೆ. ಕಾಂಗ್ರೆಸ್ ಮೂಲಗಳ ಪ್ರಕಾರ, ಕಾಂಗ್ರೆಸ್ ಆಡಳಿತವಿರುವ ಹಾಗೂ ನೆರೆಯ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಾಗಿದೆ.

## ರಾಜಧಾನಿ ಎಕ್ಸ್‌ಪ್ರೆಸ್ ರೈಲಿನ ಎಸಿ ಬೋಗಿಗೆ ಬೆಂಕಿ



**ಇಂದೋರ್:** ಮಧ್ಯಪ್ರದೇಶದ ರತ್ಲಾಂ ಜಿಲ್ಲೆಯಲ್ಲಿ ರಾಜಧಾನಿ ರೈಲಿನ ಎಸಿ ಬೋಗಿಯಲ್ಲಿ ಬೆಂಕಿ ಕಾಣಿಸಿಕೊಂಡು ಕೆಲ ಕ್ಷಣ ಆತಂಕ ಉಂಟಾದ ಘಟನೆ ಬೆಳಗಿನ ಜಾವ ನಡೆದಿದೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಗಳ ಪ್ರಕಾರ, ತಿರುವನಂತಪುರಂ ಹಜರತ್ ನಿಜಾಮುದ್ದೀನ್ ರಾಜಧಾನಿ ಎಕ್ಸ್‌ಪ್ರೆಸ್ (12431) ರೈಲಿನ ಬಿ-1 ಎಸಿ ಬೋಗಿಯಲ್ಲಿ ಬೆಳಿಗ್ಗೆ ಸುಮಾರು 5.15ಕ್ಕೆ ಬೆಂಕಿ ಕಾಣಿಸಿಕೊಂಡಿತು. ಆ ಬೋಗಿಯಲ್ಲಿ ಒಟ್ಟು 68 ಪ್ರಯಾಣಿಕರು ಪ್ರಯಾಣಿಸುತ್ತಿದ್ದರು ಎಂದು ರತ್ಲಾಂ ವಿಭಾಗದ ಸಾರ್ವಜನಿಕ ಸಂಪರ್ಕಾಧಿಕಾರಿ ಮುಕೇಶ್ ಕುಮಾರ್ ಮಾಹಿತಿ ನೀಡಿದ್ದರೆ. ಕೋಟಾ ರೈಲ್ವೆ ವಿಭಾಗದ ಅಲೋಟ್ ಮತ್ತು ಲುನಿರಿಚ್ಛಾ ನಿಲ್ದಾಣಗಳ ನಡುವಿನ ಪ್ರದೇಶದಲ್ಲಿ ಈ ಘಟನೆ ಸಂಭವಿಸಿದೆ ಎಂದು ಹೇಳಿದ್ದಾರೆ. ಘಟನೆಯ ನಂತರ ಸುರಕ್ಷತಾ ಕ್ರಮವಾಗಿ ಸಂಬಂಧಿತ ಬೋಗಿಯನ್ನು ರೈಲಿನಿಂದ ಪ್ರತ್ಯೇಕಗೊಳಿಸಲಾಗಿದ್ದು, ಮೇಲ್ದರ್ಜೆಯ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ತಕ್ಷಣ ಸ್ಥಗಿತಗೊಳಿಸಲಾಯಿತು. ಬಳಿಕ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋಟಾ ರೈಲ್ವೆ ವಿಭಾಗದ ಅಧಿಕಾರಿಗಳ ಪ್ರಕಾರ, ಎಲ್ಲಾ ಪ್ರಯಾಣಿಕರನ್ನು ಸುರಕ್ಷಿತವಾಗಿ ರೈಲಿನಿಂದ ಇಳಿಸಲಾಗಿದ್ದು, ಯಾರಿಗೂ ಗಾಯಗಳಾಗಿಲ್ಲ. ಪ್ರಯಾಣಿಕರ ಮುಂದಿನ ಪ್ರಯಾಣಕ್ಕೆ ಇತರೆ ಬೋಗಿಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ರೈಲಿನ ಸಂಪೂರ್ಣ ಸಾಮರ್ಥ್ಯ ಮರುಸ್ಥಾಪಿಸಲು ಕೋಟಾ ನಿಲ್ದಾಣದಲ್ಲಿ ಹೆಚ್ಚುವರಿ ಬೋಗಿಯನ್ನು ಜೋಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ವಿಐಪಿ ಸಂಸ್ಕೃತಿಗೆ ಬ್ರೇಕ್ ? 'ಬಿಳಿ ಟವೆಲ್' ಸಂಪ್ರದಾಯ ಕೈಬಿಟ್ಟ ಸಿಎಂ ವಿಜಯ್



**ಚೆನ್ನೈ:** ತಮಿಳುನಾಡು ಮುಖ್ಯಮಂತ್ರಿ ವಿಜಯ್ ತಮ್ಮ ಕಚೇರಿಯಲ್ಲಿ ಹಲವು ವರ್ಷಗಳಿಂದ ನಡೆದು ಬಂದಿದ್ದ ಬಿಳಿ ಟವಲ್ ಸಂಸ್ಕೃತಿಯನ್ನು ಕೈಬಿಟ್ಟಿದ್ದಾರೆ. ಮುಖ್ಯಮಂತ್ರಿ ಕಚೇರಿಯಿಂದ ಹಂಚಿಕೊಳ್ಳಲಾದ ಇತ್ತೀಚಿನ ಫೋಟೋಗಳಲ್ಲಿ, ವಿಜಯ್ ಅವರ ಕುರ್ಚಿಯ ಮೇಲೆ ಸಾಂಪ್ರದಾಯಿಕ ಬಿಳಿ ಟವಲ್ ಕಾಣಿಸದಿರುವುದು ಚರ್ಚೆಗೆ ಕಾರಣವಾಗಿದೆ.

ಸರ್ಕಾರಿ ಕಚೇರಿಗಳಲ್ಲಿ ವಿಐಪಿ ಕುರ್ಚಿಗಳ ಮೇಲೆ ಬಿಳಿ ಟವಲ್ ಹಾಕುವ ಪದ್ಧತಿಯನ್ನು ಕೈಬಿಡುವಂತೆ ಹವಾಮಾನ ಕಾರ್ಯಕರ್ತೆ ಲಿಸಿಪ್ರಿಯಾ ಕಂಗುಜಮ್ ಸೋಷಿಯಲ್ ಮೀಡಿಯಾ 'ಎಕ್ಸ್' ಮೂಲಕ ಮುಖ್ಯಮಂತ್ರಿ ವಿಜಯ್ ಅವರಿಗೆ ಮನವಿ ಮಾಡಿದ್ದರು. ಈ ಮನವಿಯ ಒಂದು ದಿನದ ಬಳಿಕ ಬಿಡುಗಡೆಯಾದ ಅಧಿಕೃತ ಸಭೆಯ ಫೋಟೋಗಳಲ್ಲಿ ವಿಜಯ್ ಟವಲ್ ಇಲ್ಲದ ಕುರ್ಚಿಯಲ್ಲಿ ಕುಳಿತಿರುವುದು ಕಂಡುಬಂದಿದೆ. ಮೇ 14ರಂದು ಸಚಿವಾಲಯದಲ್ಲಿ ನಡೆದ ಕೈಗಾರಿಕೆ, ಹೂಡಿಕೆ ಪ್ರಚಾರ ಮತ್ತು ವಾಣಿಜ್ಯ ಇಲಾಖೆಯ ಪರಿಶೀಲನಾ ಸಭೆಯ ಫೋಟೋಗಳಲ್ಲಿ ವಿಜಯ್ ಅವರ ಕುರ್ಚಿಯ ಮೇಲೆ ಬಿಳಿ ಟವಲ್ ಇತ್ತು. ಆದರೆ ಬಳಿಕ ನಡೆದ ಸಭೆಯಲ್ಲಿ ಟಿಎಫ್‌ಇ ಅಧ್ಯಕ್ಷೆ ಮತ್ತು ವ್ಯವಸ್ಥಾಪಕ ನಿರ್ದೇಶಕಿ ಮಲ್ಲಿಕಾ ಶ್ರೀನಿವಾಸನ್ ಮತ್ತು ಉಪಾಧ್ಯಕ್ಷೆ ಡಾ. ಲಕ್ಷ್ಮಿ ವೇಣು ಅವರೊಂದಿಗಿನ ಚಿತ್ರಗಳಲ್ಲಿ ಟವಲ್ ಕಾಣೆಯಾಗಿತ್ತು.

ಈ ಬದಲಾವಣೆಯನ್ನು ಗಮನಿಸಿದ ಎಕ್ಸ್ ಬಳಕೆದಾರರು ವಿಐಪಿ ಸಂಸ್ಕೃತಿಯಿಂದ ದೂರ ಸಾಗುವ ಸಂಕೇತ ಎಂದು ಬಣ್ಣಿಸಿದ್ದಾರೆ. ಕಂಗುಜಮ್ ಕೂಡ ವಿಜಯ್ ಅವರಿಗೆ ಕೃತಜ್ಞತೆ ಸಲ್ಲಿಸಿ, ಸಾಮಾನ್ಯ ಜನರ ಧ್ವನಿಯನ್ನು ಅವರು ಕೇಳುತ್ತಿದ್ದಾರೆ ಎಂದು ಹೇಳಿದ್ದಾರೆ.

**ಬಿಳಿ ಟವಲ್ ಬಳಕೆ ಯಾಕೆ?:** ಬಿಳಿ ಟವಲ್ ಸಂಸ್ಕೃತಿ ಎಂದರೆ ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು, ಸಚಿವರು ಹಾಗೂ ವಿಐಪಿಗಳ ಕುರ್ಚಿಗಳ ಮೇಲೆ ಬಿಳಿ ಟವಲ್ ಹಾಕುವ ಪದ್ಧತಿ. ಬ್ರಿಟಿಷರ ಕಾಲದಿಂದಲೇ ಈ ಸಂಪ್ರದಾಯ ನಡೆದುಕೊಂಡು ಬಂದಿದೆ.

**ಬ್ರಿಟಿಷ್ ಕಾಲದಿಂದ ನಡೆದು ಬಂದಿದೆ**

ಸರ್ಕಾರಿ ಕಚೇರಿಗಳಲ್ಲಿ ಬಿಳಿ ಟವಲ್ ಸಂಪ್ರದಾಯವು ಬ್ರಿಟಿಷ್ ಕಾಲದಿಂದ ನಡೆದು ಬಂದಿದೆ. ಬಿಸಿಲಿನ ವಾತಾವರಣದಲ್ಲಿ ಬೆವರು ಹೀರಿಕೊಳ್ಳಲು ಹಾಗೂ ಕುರ್ಚಿಗಳನ್ನು ರಕ್ಷಿಸಲು ಇದನ್ನು ಬಳಸಲಾಗುತ್ತಿತ್ತು. ಬಳಿಕ ಇದು ಅಧಿಕಾರ, ಶಿಸ್ತು ಮತ್ತು ವಿಐಪಿ ಸಂಸ್ಕೃತಿಯ ಸಂಕೇತವಾಗಿ ಬದಲಾಗಿತ್ತು.

## ರಷ್ಯಾ ಮೇಲೆ 550ಕ್ಕೂ ಹೆಚ್ಚು ಭೀಕರ ಡ್ರೋನ್ ದಾಳಿ: 4 ಮಂದಿ ಸಾವು



**ಮಾಸ್ಕೋ:** ಉಕ್ರೇನ್ ರಾತ್ರೋರಾತ್ರಿ ಮಾಸ್ಕೋ ಸೇರಿದಂತೆ ರಷ್ಯಾದ ಅನೇಕ ಭಾಗಗಳನ್ನು ಗುರಿಯಾಗಿಸಿಕೊಂಡು ಡ್ರೋನ್ ದಾಳಿ ನಡೆಸಿದೆ. ಈ ವೈಮಾನಿಕ ದಾಳಿಯಲ್ಲಿ 500ಕ್ಕೂ ಹೆಚ್ಚು ಡ್ರೋನ್‌ಗಳನ್ನು ಬಳಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಒಂದು ವರ್ಷದಿಂದ ಉಕ್ರೇನ್ ರಷ್ಯಾದ ಮೇಲೆ ಮಾಡಿರುವ ಅತಿ ದೊಡ್ಡ ದಾಳಿ ಇದಾಗಿದೆ. ರಾತ್ರಿ ನಡೆದ ಡ್ರೋನ್ ದಾಳಿಯಲ್ಲಿ 556 ಉಕ್ರೇನಿನ ಡ್ರೋನ್‌ಗಳು 12ಕ್ಕಿಂತಲೂ ಹೆಚ್ಚು ತಮ್ಮ ವಾಯು ರಕ್ಷಣಾ ನೆಲೆಗಳನ್ನು ನಾಶಪಡಿಸಿವೆ. ಇದರಲ್ಲಿ ನಾಲ್ಕು ಜನ ಸಾವನ್ನಪ್ಪಿದ್ದು, ಹಲವರಿಗೆ ಗಾಯಗಳಾಗಿವೆ. ಪಶ್ಚಿಮ ರಷ್ಯಾದಾದ್ಯಂತ ವಿವಿಧ ಪ್ರದೇಶದ ವಸತಿ ಕಟ್ಟಡಗಳಿಗೆ ಹಾನಿಯುಂಟಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಮಾಹಿತಿ ಹಂಚಿಕೊಂಡಿದೆ.

ಈ ಕುರಿತು ಮಾಸ್ಕೋದ ಪ್ರಾದೇಶಿಕ ಗವರ್ನರ್ ಟೆಲಿಗ್ರಾಮ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದು, ಖಾಸಗಿ ಮನೆಯೊಂದಕ್ಕೆ ಡ್ರೋನ್ ಡಿಕ್ಕಿ ಹೊಡೆದ ಪರಿಣಾಮ ಒಬ್ಬ ಮಹಿಳೆ ಸಾವನ್ನಪ್ಪಿದ್ದಾರೆ. ಈ ವೇಳೆ ಇನ್ನೊಬ್ಬ ವ್ಯಕ್ತಿ ಅವಶೇಷಗಳಡಿಯಲ್ಲಿ ಸಿಲುಕಿದ್ದಾನೆ. ಮುಂಜಾನೆ 3 ಗಂಟೆಯಿಂದ ನಮ್ಮ ರಕ್ಷಣಾ ಪಡೆಗಳು ಉಕ್ರೇನಿನ ಡ್ರೋನ್‌ಗಳನ್ನು ಹಿಮ್ಮೆಟ್ಟಿಸುತ್ತಿವೆ. ಗುಂಡಿನ ದಾಳಿಯ ವೇಳೆ ಅನೇಕ ಮೂಲ ಸೌಕರ್ಯಗಳನ್ನು ಗುರಿಯಾಗಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಮಾಸ್ಕೋದಲ್ಲಿಯೇ ವಾಯು ರಕ್ಷಣಾ ವ್ಯವಸ್ಥೆಗಳು ಕನಿಷ್ಠ 74 ಡ್ರೋನ್‌ಗಳನ್ನು ತಡೆದಿವೆ. ಇದು ಸಂಘರ್ಷದ ಸಮಯದಲ್ಲಿ ದೇಶ ಎದುರಿಸಿದ ಅತ್ಯಂತ ಭೀಕರ ಡ್ರೋನ್ ದಾಳಿಗಳಲ್ಲಿ ಒಂದಾಗಿದೆ. ವಿವಿಧ ಪ್ರದೇಶಗಳಲ್ಲಿ ತಡೆಹಿಡಿಯಲಾದ ಡ್ರೋನ್‌ಗಳ ಅವಶೇಷಗಳು ಕೆಳಗೆ ಬಿದ್ದ ಕಾರಣ 12 ಜನ ಗಾಯಗೊಂಡಿದ್ದಾರೆ. ಇನ್ನೂ ಹಲವೆಡೆ ಸಣ್ಣ-ಪುಟ್ಟ ಹಾನಿಯಾಗಿದೆ ಎಂದು ಮೇಯರ್ ಸೆರ್ಗೆಯನ್ ಸೊಬ್ಯಾನಿನ್ ತಮ್ಮ ಟೆಲಿಗ್ರಾಮ್‌ನಲ್ಲಿ ತಿಳಿಸಿದ್ದಾರೆ.

**ಉಕ್ರೇನ್ ಭೀತಿ ಹುಟ್ಟಿಸುತ್ತಿದೆ**

ಉಕ್ರೇನ್ ರಷ್ಯಾದ ಮೇಲಿನ ತನ್ನ ಡ್ರೋನ್ ಕಾರ್ಯಾಚರಣೆಯನ್ನು ಪದೇ ಪದೇ ಸಮರ್ಥಿಸಿಕೊಳ್ಳುತ್ತಿದೆ. ಅವು ಮಿಲಿಟರಿ ಸೌಕರ್ಯ, ಲಾಜಿಸ್ಟಿಕ್ ಕೇಂದ್ರಗಳು, ಮಾಸ್ಕೋದ ಯುದ್ಧದ ಪ್ರಯತ್ನವನ್ನು ಬೆಂಬಲಿಸುವ ಇಂಧನ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡಿವೆ. ಉಕ್ರೇನ್ ಉದ್ದೇಶಪೂರ್ವಕವಾಗಿ ರಷ್ಯಾದ ನಾಗರೀಕ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡುವ ಮೂಲಕ ಭೀತಿ ಹುಟ್ಟಿಸುತ್ತಿದೆ ಎಂದು ರಷ್ಯಾ ಆರೋಪಿಸಿದೆ.

## 1,000 ವರ್ಷ ಹಳೆಯ ಚೋಳರ ಕಾಲದ ತಾಮ್ರ ಫಲಕಗಳನ್ನು ಭಾರತಕ್ಕೆ ಹಿಂದಿರುಗಿಸಿದ ನೆದರ್ಲೆಂಡ್ಸ್



**ಆಂಸ್ಟರ್‌ಡ್ಯಾಮ್:** ನೆದರ್ಲೆಂಡ್ಸ್ ಸಾವಿರ ವರ್ಷಗಳ ಹಿಂದಿನ ಚೋಳರ ಕಾಲದ ತಾಮ್ರದ ಫಲಕಗಳನ್ನು ಭಾರತಕ್ಕೆ ಹಿಂದಿರುಗಿಸಿದೆ. ಇದು ಭಾರತದ ರಾಜತಾಂತ್ರಿಕ ವ್ಯವಸ್ಥೆಗೆ ಸಂದ ಜಯ ಎಂದು ಬಣ್ಣಿಸಲಾಗುತ್ತಿದೆ.

18ನೇ ಶತಮಾನದಲ್ಲಿ ನಾಗಪಟ್ಟಣಂ ಡಚ್ ನಿಯಂತ್ರಣದಲ್ಲಿತ್ತು. ಆ ಸಂದರ್ಭದಲ್ಲಿ ಭಾರತದಲ್ಲಿ ಕ್ರಿಶ್ಚಿಯನ್ ಮಿಷನ್‌ನೊಂದಿಗೆ ಸಂಬಂಧ ಹೊಂದಿದ್ದ ಫ್ಲೋರೆಂಟಿಯಸ್ ಕ್ಯಾಂಪರ್ ಈ ಫಲಕಗಳನ್ನು ನೆದರ್‌ಲ್ಯಾಂಡ್ಸ್‌ಗೆ ಕೊಂಡೊಯ್ದಿದ್ದರು. ಇದೀಗ ಈ ಫಲಕಗಳನ್ನು ವಾಪಸ್ ತರಿಸಿಕೊಳ್ಳಲು ಭಾರತ 2012 ರಿಂದ ನಿರಂತರವಾಗಿ ಪ್ರಯತ್ನ ನಡೆಸಿತ್ತು. ಪ್ರಧಾನಿ ನರೇಂದ್ರ ಮೋದಿಯವರು ಭಾರತ ಹಾಗೂ ನೆದರ್ಲೆಂಡ್ಸ್ ನಡುವೆ ದ್ವಿಪಕ್ಷೀಯ ಸಂಬಂಧವನ್ನು ಗಟ್ಟಿಗೊಳಿಸಲು ನೆದರ್‌ಲ್ಯಾಂಡ್ಸ್‌ಗೆ ಭೇಟಿ ನೀಡಿದ್ದರು. ಈ ಹೊತ್ತಿನಲ್ಲೇ ಭಾರತದ ಐತಿಹಾಸಿಕ ಫಲಕಗಳನ್ನು ಹಿಂತಿರುಗಿಸಿದೆ. ಈ ಕುರಿತು ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ಚೋಳರ ಕಾಲದ ತಾಮ್ರ ಫಲಕಗಳು ಮರಳಿ ಭಾರತಕ್ಕೆ ಬರುತ್ತಿವೆ. ಇದು ಪ್ರತಿಯೊಬ್ಬ ಭಾರತೀಯನಿಗೂ ಸಂತೋಷದ ಕ್ಷಣ. 11 ನೇ ಶತಮಾನದ ಚೋಳ ತಾಮ್ರ ಫಲಕಗಳನ್ನು ನೆದರ್‌ಲ್ಯಾಂಡ್ಸ್‌ನಿಂದ ಭಾರತಕ್ಕೆ ವಾಪಸ್ ತರಲಾಗುವುದು ಎಂದು ಬರೆದುಕೊಂಡಿದ್ದಾರೆ.

ಈ ತಾಮ್ರದ ಫಲಕಗಳು 30 ಕೆಜಿ ತೂಕವಿದ್ದು, 21 ಫಲಕಗಳನ್ನು ಒಳಗೊಂಡಿದೆ. ಅವುಗಳನ್ನು ರಾಜ ಚೋಳ ಮುದ್ರೆಯನ್ನು ಹೊಂದಿರುವ ಕಂಚಿನ ಉಂಗುರದಿಂದ ಜೋಡಿಸಲಾಗಿದೆ. ಈ ಫಲಕಗಳ ಒಂದು ಭಾಗದಲ್ಲಿ ಸಂಸ್ಕೃತ ಮತ್ತು ಇನ್ನೊಂದು ಭಾಗದಲ್ಲಿ ತಮಿಳಿನಲ್ಲಿ ಬರೆಯಲಾಗಿದೆ.

## ಮಿನಿ ನ್ಯೂಸ್

### ಜಪಾನ್‌ನಲ್ಲಿ ಬ್ಯುಸಿನೆಸ್ ಮಾಡ್ತಿದ್ದವನಿಗೆ ಅಂದ್ರು, 'ಗೋ ಬ್ಯಾಕ್ ಟು ಇಂಡಿಯಾ'

**ಟೋಕಿಯೋ:** ಜಪಾನ್‌ನಲ್ಲಿ ಕಳೆದ 30 ವರ್ಷಗಳಿಂದ ವಾಸಿಸುತ್ತಾ, ಸೈತಾಮಾ ನಗರದಲ್ಲಿ ಕಳೆದ 18 ವರ್ಷಗಳಿಂದ ಯಶಸ್ವಿಯಾಗಿ ಭಾರತೀಯ ರೆಸ್ಟೋರೆಂಟ್‌ವೊಂದನ್ನು ನಡೆಸುತ್ತಿದ್ದ ಮನೀಶ್ ಕುಮಾರ್ ಎಂಬ ಭಾರತೀಯ ಉದ್ಯಮಿಗೆ ಜಪಾನ್ ಸರ್ಕಾರವು ದೇಶ ತೊರೆಯುವಂತೆ ಆದೇಶಿಸಿದೆ. ಜಪಾನ್‌ನ ವಲಸೆ ಸೇವಾ ಸಂಸ್ಥೆಯು ಅವರ ಬಿಸಿನೆಸ್ ಮ್ಯಾನೇಜರ್ ವೀಸಾ ನವೀಕರಣವನ್ನು ತಿರಸ್ಕರಿಸಿರುವುದು ಇದಕ್ಕೆ ಕಾರಣವಾಗಿದೆ. ಟೋಕಿಯೋದಲ್ಲಿ ನಡೆದ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿ ಮಾತನಾಡಿದ ಮನೀಶ್ ಕುಮಾರ್, ತಮ್ಮ ಅಳಲನ್ನು ತೋಡಿಕೊಳ್ಳುತ್ತಾ ಕಣ್ಣೀರು ಹಾಕಿದ್ದಾರೆ.

ಎರಡು ವಾರಗಳ ಹಿಂದೆ ಜಪಾನ್ ವಲಸೆ ಸಂಸ್ಥೆಯು ನನಗೆ ಭಾರತಕ್ಕೆ ಮರಳಿ ಹೋಗುವಂತೆ ತಿಳಿಸಿತು. ನನ್ನ ಮಕ್ಕಳು ಹುಟ್ಟಿದ್ದು, ಬೆಳೆದಿದ್ದು ಎಲ್ಲವೂ ಜಪಾನ್‌ನಲ್ಲಿಯೇ. ಅವರಿಗೆ ಕೇವಲ ಜಪಾನಿ ಭಾಷೆ ಮಾತ್ರ ಗೊತ್ತು, ಅವರ ಸ್ನೇಹಿತರೆಲ್ಲರೂ ಜಪಾನಿಯರೇ ಆಗಿದ್ದಾರೆ. ನಾವಿಲ್ಲಿ ಕಷ್ಟಪಟ್ಟು ದುಡಿದು ಒಂದು ಮನೆಯನ್ನೂ ಖರೀದಿಸಿದ್ದೇವೆ. ಈಗ ಇದ್ದಕ್ಕಿದ್ದಂತೆ ಯಾವುದೇ ತಪ್ಪು ಮಾಡದ ನಮಗೆ 'ಭಾರತಕ್ಕೆ ವಾಪಸ್ ಹೋಗಿ ಎಂದು ಹೇಳುತ್ತಿರುವುದು ಎಷ್ಟು ಮಾನವೀಯ? ನಾನು ಈಗ ಏನು ಮಾಡಬೇಕು? ಎಂದು ಅವರು ಪ್ರಶ್ನಿಸಿದ್ದಾರೆ.

### ಕಣ್ಣಿನ ಆಸ್ಪತ್ರೆಗೆ ಭೂಮಿ ಪೂಜೆ ನೆರವೇರಿಸಿದ ಗೌತಮ್ ಅದಾನಿ

**ಪಾಟ್ನ:** ಸೇವೆಯೇ ಸಾಧನೆ ಎಂಬ ತತ್ವದಲ್ಲಿ ನಂಬಿಕೆ ಇಟ್ಟಿದ್ದು, ದೇಶದಾದ್ಯಂತ ಸಮುದಾಯ ಆರೋಗ್ಯ ರಕ್ಷಣೆಗೆ ಶ್ರಮಿಸುವುದಾಗಿ ಕೈಗಾರಿಕೋದ್ಯಮಿ ಗೌತಮ್ ಅದಾನಿ ಭಾನುವಾರ ಹೇಳಿದ್ದಾರೆ.

ಬಿಹಾರದ ಸರಣ್ ಜಿಲ್ಲೆಯಲ್ಲಿ ಸುಮಾರು ರೂ.500 ಕೋಟಿ ವೆಚ್ಚದಲ್ಲಿ ಕಣ್ಣಿನ ಆಸ್ಪತ್ರೆಗಳ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಅದಾನಿ ಸಮೂಹದ ಅಧ್ಯಕ್ಷರು ಮತ್ತು ಅದಾನಿ ಫೌಂಡೇಶನ್‌ನ ಮುಖ್ಯಸ್ಥರಾಗಿರುವ ಗೌತಮ್ ಅದಾನಿ ಪತ್ನಿ ಪ್ರೀತಿ ಅದಾನಿ ಅವರು ಅದಾನಿ ನೇತ್ರ ರೋಗಗಳ ಕೇಂದ್ರ, (ಅದಾನಿ ಸೆಂಟರ್ ಫಾರ್ ಐ ಡಿಸೀಸಸ್) ಮತ್ತು ಅದಾನಿ ನೇತ್ರ ವಿಜ್ಞಾನ ತರಬೇತಿ ಕೇಂದ್ರಕ್ಕೆ (ಅದಾನಿ ಟ್ರೈನಿಂಗ್ ಸೆಂಟರ್ ಫಾರ್ ಆಪ್ತಾಲ್ಮಿಕ್ ಸೈನ್ಸಸ್) ಭೂಮಿ ಪೂಜೆ ನೆರವೇರಿಸಿದರು.

ಅದಾನಿ ಅಖಂಡ ಜ್ಯೋತಿ ಫೌಂಡೇಶನ್ ಭಾರತದಾದ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆ ನೀಡಲು ಶ್ರಮಿಸಲಿದೆ' ಎಂದು ಅದಾನಿ ಹೇಳಿದ್ದಾರೆ.

### ಪಾಕಿಸ್ತಾನದೊಂದಿಗೆ ಮಾತುಕತೆ: ಆರ್‌ಎಸ್‌ಎಸ್ ನಾಯಕ ಹೊಸಬಾಳೆ ಹೇಳಿಕೆ ಸ್ವಾಗತಿಸಿದ ಮುಫ್ತಿ

**ಶ್ರೀನಗರ:** ಭಾರತ ಮತ್ತು ಪಾಕಿಸ್ತಾನ ನಡುವಿನ ಬಿಕ್ಕಟ್ಟನ್ನು ಕೊನೆಗಾಣಿಸಲು ಮಾತುಕತೆಯೊಂದೇ ದಾರಿ ಎಂದ ಆರ್‌ಎಸ್‌ಎಸ್ ನಾಯಕ ದತ್ತಾತ್ರೇಯ ಹೊಸಬಾಳೆ ಹೇಳಿಕೆಯನ್ನು ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಅಧ್ಯಕ್ಷೆ ಮೆಹಬೂಬಾ ಮುಫ್ತಿ ಸ್ವಾಗತಿಸಿದ್ದಾರೆ. ಇಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಮುಫ್ತಿ, ಕಾಶ್ಮೀರ ಸಮಸ್ಯೆಗೆ ಪರಿಹಾರವು ಮಾತುಕತ ಮತ್ತು ಸಂವಿಧಾನದ ಚೌಕಟ್ಟಿನಲ್ಲಿದೆ. ಈ ವಿಷಯದಲ್ಲಿ ಏನನ್ನು ಸಾಧಿಸಬೇಕಾಗಿದ್ದರೂ ಅದನ್ನು ಇಲ್ಲಿಂದಲೇ (ಜಮ್ಮು ಮತ್ತು ಕಾಶ್ಮೀರ) ಮಾಡಬೇಕಾಗಿದೆ. ಶಾಶ್ವತ ಶಾಂತಿಯನ್ನು ಇಲ್ಲಿನ ಜನರು ಬಯಸುತ್ತಿದ್ದಾರೆ' ಎಂದು ಹೇಳಿದ್ದಾರೆ.

ಹೊಸಬಾಳೆ ಅವರು ಈಗ ಹೇಳಿರುವುದು, ಪಿಡಿಪಿ ಸಂಸ್ಥಾಪಕ, ನನ್ನ ತಂದೆ ಮುಫ್ತಿ ಮೊಹಮ್ಮದ್ ಸಯೀದ್ ಅವರು ತಮ್ಮ ಕೊನೆಯ ಉಸಿರಿರುವವರೆಗೂ ಪ್ರತಿಪಾದಿಸಿದ್ದನ್ನೇ ಆಗಿದೆ. ನರೇಂದ್ರ ಮೋದಿ ಅವರು ತಮ್ಮ ಹೆಸರನ್ನು ಇತಿಹಾಸದಲ್ಲಿ ಶಾಶ್ವತವಾಗಿ ಉಳಿಸಬೇಕೆಂದು ಬಯಸಿದರೆ, ಜಮ್ಮು ಮತ್ತು ಕಾಶ್ಮೀರದ ಜನರೊಂದಿಗೆ ಮಾತುಕತೆ ಆರಂಭಿಸಬೇಕು ಮತ್ತು ಈ ಪ್ರಕ್ರಿಯೆಯಲ್ಲಿ ಪಾಕಿಸ್ತಾನವನ್ನು ಒಳಗೊಳ್ಳಿಸಬೇಕು ಎಂದಿದ್ದಾರೆ. ನಾವು ಚಿನ್ನದ ರಸ್ತೆಗಳನ್ನು ಮತ್ತು ಬೆಳ್ಳಿಯ ಸೇತುವೆಗಳನ್ನು ನಿರ್ಮಿಸಿದರೂ, ಕಾಶ್ಮೀರ ಸಮಸ್ಯೆ ಬಗೆಹರಿಯದಿದ್ದರೆ ಅವುಗಳಿಂದ ಯಾವುದೇ ಪ್ರಯೋಜನವಿಲ್ಲ ಎಂದು ನನ್ನ ತಂದೆ ಹೇಳುತ್ತಿದ್ದರು. ಅಭಿವೃದ್ಧಿ ಒಳ್ಳೆಯದು, ಆದರೆ ಮಾತುಕತೆಗಳು ಈ ಪ್ರದೇಶದಲ್ಲಿ ಶಾಶ್ವತ ಶಾಂತಿ ನೆಲೆಸಲು ಕಾರಣವಾಗುತ್ತದೆ' ಎಂದು ಪ್ರತಿಪಾದಿಸಿದ್ದಾರೆ.

### ಆಡಳಿತಾರೂಢ ಟಿವಿಕೆ ಈಗಲೂ ಕುದುರೆ ವ್ಯಾಪಾರದಲ್ಲಿ ತೊಡಗಿದೆ; ಟಿಟಿವಿ ದಿನಕರನ್

**ತಿರುಚಿರಾಪಳ್ಳಿ:** ಇತ್ತೀಚಿನ ವಿಧಾನಸಭಾ ಚುನಾವಣೆಯ ನಂತರ ರಾಜಕೀಯ ಬೆಂಬಲ ಪಡೆಯಲು ಆಡಳಿತಾರೂಢ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಕುದುರೆ ವ್ಯಾಪಾರ'ದಲ್ಲಿ ತೊಡಗಿದೆ ಎಂದು ಎಎಂಎಂಕೆ ಪ್ರಧಾನ ಕಾರ್ಯದರ್ಶಿ ಟಿಟಿವಿ ದಿನಕರನ್ ಆರೋಪಿಸಿದ್ದಾರೆ.

ತಿರುಚಿರಾಪಳ್ಳಿಯಲ್ಲಿ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ದಿನಕರನ್, ಟಿವಿಕೆ ಸೇರಿದ ಎಎಂಎಂಕೆ ಶಾಸಕರಿಗೆ ಸಚಿವ ಸ್ಥಾನ ನೀಡಿದರೆ, ತಮ್ಮ ಪಕ್ಷವು ಈ ವಿಷಯದ ಬಗ್ಗೆ ಸಿಬಿಐ ತನಿಖೆಗೆ ಒತ್ತಾಯಿಸುತ್ತದೆ. ಟಿವಿಕೆ ಪಕ್ಷದ ರಾಜಕೀಯ ತಂತ್ರವು ಸಂಪೂರ್ಣ ಕುದುರೆ ವ್ಯಾಪಾರ ಎಂದು ಹೇಳಿದರು. ವಿಜಯ್ ಕುದುರೆ ವೇಗದಲ್ಲಿ ಕೆಲಸ ಮಾಡುವುದಾಗಿ ಹೇಳುತ್ತಾರೆ. ಆದರೆ, ಅವರು ಚೌಕಾಶಿ ಮಾಡುವ ಮೂಲಕ ಕುದುರೆಯನ್ನು ಖರೀದಿಸಿದ್ದಾರೆ ಎಂದು ತಮಿಳುನಾಡು ಮುಖ್ಯಮಂತ್ರಿ ಮತ್ತು ಟಿವಿಕೆ ಪಕ್ಷದ ನಾಯಕನನ್ನು ಉಲ್ಲೇಖಿಸಿ ದಿನಕರನ್ ವ್ಯಂಗ್ಯವಾಡಿದರು.

# ಭಾರತಕ್ಕೆ 2ನೇ ಅತಿದೊಡ್ಡ ರಫ್ತು ಮಾರುಕಟ್ಟೆ ಈಗ ಯುಎಇ ಅಲ್ಲ, ಸಿಂಗಾಪುರ

### ಸಾಂಪ್ರದಾಯಿಕ ಇಂಧನ ಪೂರೈಕೆ ಮಾರ್ಗಗಳು ಮುಚ್ಚಿ ಹೋಗಿರುವುದರಿಂದ ಭಾರತವು ಆಮದಿಗಾಗಿ ಬೇರೆ ಬೇರೆ ಮಾರುಕಟ್ಟೆಗಳನ್ನು ಶೋಧಿಸುತ್ತಿದೆ

**ನವದೆಹಲಿ:** ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಭಾರತದ ವಿದೇಶಿ ವ್ಯಾಪಾರ ವಲಯದಲ್ಲಿ ಮಹತ್ವದ ಬದಲಾವಣೆಯಾಗಿದೆ. ಮಾಧ್ಯಮ ವರದಿಯ ಪ್ರಕಾರ, ಯುಎಇ ದೇಶವನ್ನು ಹಿಂದಿಕ್ಕಿ ಸಿಂಗಾಪುರವು ಈಗ ಭಾರತದ ಎರಡನೇ ಅತಿ ದೊಡ್ಡ ರಫ್ತು ಮಾರುಕಟ್ಟೆಯಾಗಿ ಹೊರಹೊಮ್ಮಿದೆ.

ಮಧ್ಯಪ್ರಾಚ್ಯದಲ್ಲಿ ತಲೆದೋರಿರುವ ಯುದ್ಧದ ಪರಿಸ್ಥಿತಿ ಮತ್ತು ಮಾರ್ಚ್ ತಿಂಗಳಿನಿಂದ ಹಾರ್ಮುಜ್ ಜಲಸಂಧಿ ಬಹುತೇಕ ಮುಚ್ಚಿರುವುದು ಜಾಗತಿಕ ಇಂಧನ ಮತ್ತು ಸರಕು ಸಾಗಣೆಗೆ ಭಾರಿ ಹೊಡೆತ ನೀಡಿದೆ. ಇರಾನ್ ಮತ್ತು ಒಮಾನ್ ನಡುವೆ ಇರುವ ಈ ಕಿರಿದಾದ ಸಮುದ್ರ ಮಾರ್ಗವು ಜಾಗತಿಕ ತೈಲ ಸಾಗಣೆಯ ಐದನೇ ಒಂದು ಭಾಗವನ್ನು ನಿಯಂತ್ರಿಸುತ್ತದೆ. ಆದರೆ ಯುದ್ಧದ ಕಾರಣದಿಂದಾಗಿ ಈ ಮಾರ್ಗದ ಮೂಲಕ ಹಡಗುಗಳ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ. ಈ ಬಿಕ್ಕಟ್ಟಿನಿಂದಾಗಿ ಪಶ್ಚಿಮ ಏಷ್ಯಾದ ದೇಶಗಳೊಂದಿಗೆ ವ್ಯಾಪಾರ ನಡೆಸಲು ತೊಂದರೆಯಾಗುತ್ತಿರುವುದರಿಂದ, ಭಾರತೀಯ ರಫ್ತುದಾರರು ಪರ್ಯಾಯ ಮಾರ್ಗಗಳನ್ನು ಹುಡುಕಲಾರಂಭಿಸಿದ್ದಾರೆ. ಇದರ ನೇರ ಪರಿಣಾಮವಾಗಿ ಭಾರತವು ಮುಕ್ತ ವ್ಯಾಪಾರ ಒಪ್ಪಂದ ಹೊಂದಿರುವ ಎರಡು ಪ್ರಮುಖ ಸಾರಿಗೆ ಹಬ್‌ಗಳಾದ ಯುಎಇ ಮತ್ತು ಸಿಂಗಾಪುರ ನಡುವಿನ ವ್ಯಾಪಾರದ ಹರಿವಿನಲ್ಲಿ ಭಾರಿ ಪಲ್ಲಟವಾಗಿದೆ.

**ಸಿಂಗಾಪುರಕ್ಕೆ ರಫ್ತು ಭಾರಿ ಏರಿಕೆ; ಯುಎಇಗೆ ರಫ್ತು ಕುಸಿತ**

ಏಪ್ರಿಲ್ ತಿಂಗಳಿನಲ್ಲಿ ಭಾರತದಿಂದ ಸಿಂಗಾಪುರಕ್ಕೆ ನಡೆದ ರಫ್ತು ಪ್ರಮಾಣವು ಶೇಕಡಾ 180 ರಷ್ಟು ಭಾರಿ ಜಿಗಿತ ಕಂಡಿದ್ದು, 3.20 ಬಿಲಿಯನ್ ಡಾಲರ್ ತಲುಪಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಇದು ಕೇವಲ 1.14 ಬಿಲಿಯನ್ ಡಾಲರ್ ಆಗಿತ್ತು. ಫೆಬ್ರವರಿ ತಿಂಗಳಿಗೆ ಹೋಲಿಸಿದರೆ ಸಿಂಗಾಪುರದ ರಫ್ತು ಮಾರುಕಟ್ಟೆಯಲ್ಲಿ ಬರೋಬ್ಬರಿ ಐದು ಪಟ್ಟು ಹೆಚ್ಚಳವಾಗಿದೆ.



**ಐದು ಪಟ್ಟು ಹೆಚ್ಚಳ**

ಮತ್ತೊಂದೆಡೆ, ಯುಎಇ ದೇಶಕ್ಕೆ ಆಗುತ್ತಿದ್ದ ಭಾರತದ ರಫ್ತು ಪ್ರಮಾಣವು ಶೇಕಡಾ 36 ರಷ್ಟು ಕುಸಿದಿದೆ. ಕಳೆದ ವರ್ಷ ಏಪ್ರಿಲ್‌ನಲ್ಲಿ 3.43 ಬಿಲಿಯನ್ ಡಾಲರ್ ಇದ್ದ ರಫ್ತು, ಈ ಬಾರಿ 2.18 ಬಿಲಿಯನ್ ಡಾಲರ್‌ಗೆ ಇಳಿಕೆಯಾಗಿದೆ. ಇದೇ ವೇಳೆ, ಭಾರತದ ಅತಿ ದೊಡ್ಡ ರಫ್ತು ದೇಶವಾಗಿ ಅಮೆರಿಕ ಎಂದಿನಂತೆ ಮೊದಲ ಸ್ಥಾನದಲ್ಲೇ ಮುಂದುವರಿದಿದೆ.

**ಆಮದು ಕ್ಷೇತ್ರದಲ್ಲೂ ಬದಲಾವಣೆ:** ಸಾಂಪ್ರದಾಯಿಕ ಇಂಧನ ಪೂರೈಕೆ ಮಾರ್ಗಗಳು ಮುಚ್ಚಿ ಹೋಗಿರುವುದರಿಂದ ಭಾರತವು ಆಮದಿಗಾಗಿ ಬೇರೆ ಬೇರೆ ಮಾರುಕಟ್ಟೆಗಳನ್ನು ಶೋಧಿಸುತ್ತಿದೆ.

ಇಂಧನ ರಫ್ತು ಮಾಡುವ ದೇಶಗಳಾದ ಒಮಾನ್, ಪೆರು ಮತ್ತು ನೈಜೀರಿಯಾ ದೇಶಗಳು ಭಾರತದ ಟಾಪ್ 20 ಆಮದು ಮೂಲಗಳ ಪಟ್ಟಿಗೆ ಲಗ್ಗೆ ಇಟ್ಟಿವೆ. ಒಮಾನ್‌ನಿಂದ ಭಾರತಕ್ಕೆ ಆಗುವ ಆಮದು ಏಪ್ರಿಲ್‌ನಲ್ಲಿ ಮೂರು ಪಟ್ಟು ಹೆಚ್ಚಾಗಿದ್ದು, 1.48 ಬಿಲಿಯನ್ ಡಾಲರ್‌ಗೆ ತಲುಪಿದೆ. ಕತಾರ್‌ನಿಂದ ಆಗುತ್ತಿದ್ದ ಆಮದು ಶೇಕಡಾ 47 ರಷ್ಟು ಕುಸಿದಿದ್ದರೆ, ಸೌದಿ ಅರೇಬಿಯಾದಿಂದ ಆಗುವ ಆಮದು ಏಪ್ರಿಲ್‌ನಲ್ಲಿ ಚೇತರಿಕೆ ಕಂಡು 3.85 ಬಿಲಿಯನ್ ಡಾಲರ್‌ಗೆ ತಲುಪಿದೆ.

**ಭಾರತದ ಆರ್ಥಿಕತೆಯ ಮೇಲಿನ ಪ್ರಭಾವ**

ಮಧ್ಯಪ್ರಾಚ್ಯ ಯುದ್ಧದಿಂದಾಗಿ ಜಾಗತಿಕವಾಗಿ ಇಂಧನ ಬೆಲೆಗಳು ಗಗನಕ್ಕೇರಿವೆ. ಇದು ಭಾರತದ ಆಮದು ವೆಚ್ಚವನ್ನು ಹೆಚ್ಚಿಸಿದೆ ಮತ್ತು ರಫ್ತು ವಲಯದಲ್ಲಿ ಅನಿಶ್ಚಿತತೆ ಮೂಡಿಸಿದೆ. ಇದರ ನೇರ ಪರಿಣಾಮವಾಗಿ ಭಾರತೀಯ ರೂಪಾಯಿ ಮೌಲ್ಯವು ಅಮೆರಿಕನ್ ಡಾಲರ್ ಎದುರು ಸಾರ್ವಕಾಲಿಕ ಕುಸಿತ ಕಂಡಿದೆ. ಫೆಬ್ರವರಿ ಕೊನೆಯಿಂದ ರೂಪಾಯಿ ಮೌಲ್ಯವು ಶೇಕಡಾ 5.2 ರಷ್ಟು ಕುಸಿದಿದೆ.

